ಕರ್ನಾಟಕ ವಿಧಾನ ಸಭೆ

ಗುರುವಾರ 21ನೇ ಮಾರ್ಚ್ 2002

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು, ಶ್ರೀ ಎಂ.ವಿ. ವೆಂಕಟಪ್ಪ ಅವರು,

ಪೀಠವನ್ನು ಅಲಂಕರಿಸಿದರು.

ಆಯವ್ಯಯ ಮಂಡನೆ

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು)

ಗೌರವಾನ್ವಿತ ಸಭಾಧ್ಯಕ್ಷರೆ,

1. ನಾನು 2002-2003 ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ.

2. ನನ್ನ ಸರ್ಕಾರವು ಎರಡು ವರ್ಷಗಳ ಹಿಂದೆ ನಮ್ಮ ರಾಜ್ಯಕ್ಕಾಗಿ ಒಂದು ನೋಟವನ್ನು ಚಿತ್ರಿಸಿತು. ಇದರಲ್ಲಿ ನಾನು ನಮ್ಮ ರಾಜ್ಯವು ಎದುರಿಸಿದ ಸವಾಲುಗಳನ್ನು ಪಟ್ಟಿ ಮಾಡಿ, ಸಮೃದ್ಧ ಭವಿಷ್ಯಕ್ಕಾಗಿ ಸುಭದ್ರ ತಳಹದಿಯನ್ನು ಹಾಕಿದ್ದೆ. ನಮ್ಮ ನಿರ್ಧಾರ ಮತ್ತು ಕಾರ್ಯಕ್ರಮಗಳಿಗೆ ಈ ನೋಟವೆ ಮಾರ್ಗದರ್ಶಿಯಾಗಿತ್ತು. ಈ ಹಿಂದಿನ ಎರಡು ಮುಂಗಡ ಪತ್ರಗಳು ನಮ್ಮ ನೋಟವನ್ನು ನಿರ್ದಿಷ್ಟ ಕ್ರಿಯಾ ಚಟುವಟಿಕೆಗಳನ್ನಾಗಿ ಪರಿವರ್ತಿಸಿವೆ.

3. ಜಲಾನಯನ ನಿರ್ವಹಣೆಯಿಂದ ಹಿಡಿದು ವಸತಿನಿರ್ಮಾಣ, ಸ್ತ್ರೀಶಕ್ತಿ ತಂಡಗಳ ರಚನೆ, ಪಂಚಾಯತ್ ರಾಜ್ ಮತ್ತು ಸ್ಥಳೀಯ ಸಂಸ್ಥೆಗಳ ಬಲವರ್ಧನೆಯವರೆಗೆ ಎಲ್ಲ ಕಾರ್ಯಕ್ರಮಗಳಲ್ಲೂ ನಾವು ನಾಗರೀಕರನ್ನು ಸಕ್ರಿಯವಾಗಿ ತೊಡಗಿಸಿಕೊಂಡೆವು.

4. ಕಳೆದ ಎರಡು ವರ್ಷಗಳ ನಮ್ಮ ಸರ್ಕಾರದ ಕಾರ್ಯ ನಿರ್ವಹಣೆಯ ತಳಹದಿಯ ಮೇಲೆ ಈ ವರ್ಷದ ನಮ್ಮ ಮುಂಗಡ ಪತ್ರವನ್ನು ನಾವು ನಿರೂಪಿಸಿದ್ದೇವೆ. ಜನತೆಯ ಪಾಲ್ಗೊಳ್ಳುವಿಕೆಯನ್ನು ಬಲಗೊಳಿಸುವುದು, ಪ್ರಗತಿಗೆ ಪ್ರಚೋದನೆ ನೀಡುವುದು ಮತ್ತು ಉದ್ಯೋಗ ಸೃಜಿಸುವುದು ನಮ್ಮ ಆಶಯಗಳಾಗಿವೆ.

5. ಜಾಗತೀಕರಣ ಮತ್ತು ತಂತ್ರಜ್ಞಾನದ ಶಕ್ತಿಗಳು ಜಗತ್ತನ್ನು ಸಾಕಷ್ಟು ಬದಲಾಯಿಸಿವೆ. ಜಗತ್ತಿನ ಒಂದು ಭಾಗದಲ್ಲಿ ಉದ್ಭವಿಸಿದ ಆರ್ಥಿಕ ಸಂಕಷ್ಟಗಳು ಈಗ ಥಟ್ಟನೆ ಇನ್ನೊಂದು ಭಾಗಕ್ಕೆ ತಟ್ಟುತ್ತವೆ. ನಾವು ಕರ್ನಾಟಕದಲ್ಲಿ ಈ ವಿದ್ಯಮಾನಗಳಿಗೆ ಕಣ್ಮುಚ್ಚಿ ಕುಳಿತುಕೊಳ್ಳಲಾಗದು. ಜಗದ್ವ್ಯಾಪಿಯಾದ ಆರ್ಥಿಕ ಮಂದಗತಿಯಿಂದ ನಮ್ಮ ಸವಾಲುಗಳು ಇನ್ನೂ ಜಟಿಲವಾಗುವ ಸೂಚನೆಗಳಿವೆ. ಅವುಗಳಿಗೆ ನಾವು ಸೂಕ್ತವಾಗಿ ಪ್ರತಿಕ್ರಿಯಿಸಬೇಕಾಗಿದೆ.

6. ಮಾನವ ನಿರ್ಮಿತ ದುರಂತಗಳು ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ದುಸ್ತರಗೊಳಿಸಿದವು. ಹೊಸ ಶತಮಾನದ ಉದಯವು 'ಭಯೋತ್ಪಾದನೆ' ಎಂಬ ಹಳೆಯ ಪಿಡುಗನ್ನು ಹೊಸ ಭೀತಿಯಾಗಿ ಮುಂದೊಡ್ಡಿದೆ. ನಾವು ಇದರ ವಿರುದ್ಧ ತುರ್ತು ಹೋರಾಟ ನಡೆಸಬೇಕಾಗಿದೆ. ಈ ಹೊಸ ಸವಾಲನ್ನು ಎದುರಿಸುವ ಶಕ್ತಿ, ಚೈತನ್ಯ ನಮಗಿದೆ. ತನ್ನ ಜನತೆಯನ್ನು ರಕ್ಷಿಸಲು ಸನ್ನದ್ಧವಾಗಿರುವ ರಾಜ್ಯ ಸರ್ಕಾರದ ದೃಢ ಸಂಕಲ್ಪವನ್ನು ದುರ್ಬಲಗೊಳಿಸಲು ಕೆಲ ಜನರ ಕೃತ್ಯಗಳಿಂದ ಸಾಧ್ಯವಿಲ್ಲ. ಇದೇ ಸಮಯದಲ್ಲಿ ನಾವು, ನಮ್ಮ ದಯಾ ದೃಷ್ಟಿಯ, ಸಭ್ಯ ನಾಗರೀಕ ಸಮಾಜದ ಬಗ್ಗೆ ಕೆಲ ಅಸಂತುಷ್ಟರಿಗೆ ಮನದಟ್ಟು ಮಾಡಿಕೊಡಬೇಕು. ಇಲ್ಲಿ ಜನತೆಯ ಐಹಿಕ ಬಯಕೆಗಳನ್ನು ಆಂತರ್ಯದ ಅಗತ್ಯಗಳ ಜೊತೆಯಲ್ಲಿಯೇ ಪೂರೈಸಲಾಗುವುದು ಎನ್ನುವುದನ್ನು ಅವರಿಗೆ ತಿಳಿಯ ಹೇಳಬೇಕು.

ಆರ್ಥಿಕ ಪರಿಸ್ಥಿತಿ

7. ಮಾನ್ಯರೆ, ಕಳೆದ ವರ್ಷದ ಆಯವ್ಯಯದಲ್ಲಿ ನಾನು ಒಟ್ಟಾರೆಯಾಗಿ ಆರ್ಥಿಕ ಪರಿಸ್ಥಿತಿಗೆ ಹೆಚ್ಚು ಒತ್ತು ನೀಡಿದ್ದೆ, ನನ್ನ ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಆರ್ಥಿಕ ಜವಾಬ್ದಾರಿ ಮತ್ತು ಆರ್ಥಿಕ ಕೌಶಲ್ಯಕ್ಕೆ ತಳಹದಿ ಹಾಕಿದ್ದು ನಾವು ಇದನ್ನು ಇನ್ನಷ್ಟು ಸುಭದ್ರಗೊಳಿಸುತ್ತೇವೆ.

8. ಕರ್ನಾಟಕ ರಾಜ್ಯವು ಆರ್ಥಿಕ ಕೌಶಲ್ಯಕ್ಕೆ ರಾಷ್ಟ್ರದಲ್ಲಿಯೇ ಖ್ಯಾತಿ ಗಳಿಸಿದೆ ಎಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ. ಈ ವಿಶಿಷ್ಟ ಖ್ಯಾತಿ ಗಳಿಸುವಲ್ಲಿ ಸದನದ ಗೌರವಾನ್ವಿತ ಸದಸ್ಯರು ನೀಡಿದ ಸಹಕಾರಕ್ಕಾಗಿ ನನ್ನ ಸರ್ಕಾರವು ಕೃತಜ್ಞತೆ ವ್ಯಕ್ತಪಡಿಸುತ್ತದೆ.

9. ನಾವು ಅನುತ್ಪಾದಕ ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಿ ಕೃಷಿ, ನೀರಾವರಿ, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ವಲಯ ಮತ್ತು ಮೂಲ ಸೌಕರ್ಯಗಳು ಮತ್ತು ರಸ್ತೆಗಳಿಗೆ ಹೆಚ್ಚು ಅನುದಾನ ನೀಡಿ ಶೀಘ್ರ ಆರ್ಥಿಕ ಪ್ರಗತಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಗೆ ಹಾದಿಯನ್ನು ಸುಗಮಗೊಳಿಸಬೇಕಿದೆ. ರಾಜಸ್ವ ಮತ್ತು ಎತ್ತುವಳಿಗಳ ಮೂಲಕ ರಾಜ್ಯವು ಸಂಗ್ರಹಿಸಿದ ಸಂಪನ್ಮೂಲಗಳನ್ನು ಗರಿಷ್ಠ ಬಳಕೆಗೆ ತೊಡಗಿಸಬೇಕು.

10. ರಾಜ್ಯದ ಆರ್ಥಿಕ ಪರಿಸ್ಥಿತಿ ಅಪಾಯದ ಅಂಚನ್ನು ತಲುಪಿಲ್ಲವಾದರೂ ಇದನ್ನು ನಾವು ಎಚ್ಚರಿಕೆಯಿಂದ ನಿರ್ವಹಿಸಬೇಕಾಗಿದೆ. ಕಳೆದ ಆಯವ್ಯಯ ಅಧಿವೇಶನದಲ್ಲಿ ಸರ್ಕಾರವು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು (ಎಂ.ಟಿ.ಎಫ್.ಪಿ) (2000-01 ರಿಂದ 2004-05) ಮಂಡಿಸಿದೆ. ಇದು ಮುಂದಿನ ನಾಲ್ಕು ವರ್ಷಗಳ ಆರ್ಥಿಕ ಸುಭದ್ರತೆಗೆ ಗಟ್ಟಿ ಯೋಜನೆಯಾಗಿದೆ. ನಾನು ಈ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ನಿರಂತರ ಚಲನಶೀಲ ಮಾರ್ಗದರ್ಶಿ ದಾಖಲೆಯನ್ನಾಗಿ ಮಾಡಲು ಉದ್ದೇಶಿಸಿದ್ದೇನೆ. ಇದು ಮಧ್ಯಮಾವಧಿಯಲ್ಲಿ ರಾಜ್ಯದ ಆರ್ಥಿಕ ಸ್ಥಿತಿಗತಿಯ ಮುನ್ನೋಟವನ್ನು ಒದಗಿಸುತ್ತದೆ. ಅಲ್ಲದೆ ನಿಗದಿತ ಗುರಿಗೆ ಎದುರಾಗಿ ನಮ್ಮ ವಾಸ್ತವ ಸಾಧನೆಯನ್ನು ಬಿಂಬಿಸುತ್ತದೆ. ಪ್ರಸಕ್ತ ಸಾಲಿನ ಆಯವ್ಯಯ ಅಧಿವೇಶನದಲ್ಲಿ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು (2002-03 ರಿಂದ 2005-06) ಮಂಡಿಸಲಾಗುವುದು.

11. ನಾವು 2004-05 ರ ಸಾಲಿಗೆ ರಾಜಸ್ವ ಕೊರತೆಯನ್ನು ನಿವಾರಿಸುವ ಯೋಜನೆ ಹಾಕಿಕೊಂಡಿದ್ದೆವು. ಹಾಗೆಯೇ ವಿತ್ತೀಯ ಕೊರತೆಯನ್ನು (ಫಿಸ್ಕಲ್ ಡಿಫಿಸಿಟ್) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 3 ರಷ್ಟಕ್ಕೆ ನಿಲ್ಲಿಸಲು ಯೋಜಿಸಿದ್ದೆವು. ಇದನ್ನು ಮಾನ್ಯ ಸದಸ್ಯರುಗಳು ನೆನಪು ಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಆದರೆ, ಆರ್ಥಿಕ ಮಂದಗತಿಯಿಂದಾಗಿ ಉದ್ದೇಶಿತ ತೆರಿಗೆ ಆದಾಯ ಸಂಗ್ರಹಣೆ ಸಾಧ್ಯವಾಗಲಿಲ್ಲ. ತತ್ಪರಿಣಾಮವಾಗಿ ನಾವು ಕೆಳಹಂತದ ಆಧಾರದ ಮೇಲೆ ನಮ್ಮ ಉದ್ದೇಶಿತ ಬೆಳವಣಿಗೆಗಳನ್ನು ಬಿಂಬಿಸಿದ್ದೇವೆ. ಹೀಗಾಗಿ ನಮ್ಮ ಉದ್ದೇಶಿತ ಆರ್ಥಿಕ ಗುರಿಗಳು ನಿರೀಕ್ಷೆಗಿಂತ ಒಂದು ವರ್ಷ ತಡವಾಗಿ ಈಡೇರಲಿವೆ. ಆರ್ಥಿಕ ಹೊಣೆಗಾರಿಕೆ ಮಸೂದೆಯನ್ನು (Fiscal Responsibility Bill) ಸಹ ಶೀಘ್ರವಾಗಿ ಸದನದಲ್ಲಿ ಮಂಡಿಸಲಾಗುವುದು.

12. ಪ್ರಸಕ್ತ ವರ್ಷದ ವಿತ್ತೀಯ ಕೊರತೆ 5127 ಕೋಟಿ ರೂ.ಗಳಾಗಬಹುದೆಂದು ನಾವು ನಿರೀಕ್ಷಿಸಿದ್ದೆವು. ಆದರೆ ನಿರೀಕ್ಷಿತ ಆದಾಯದಲ್ಲಿ 1,375 ಕೋಟಿ ರೂ.ಗಳ ಭಾರೀ ಕೊರತೆ ಎದುರಾಗಿದೆ. ಕೇಂದ್ರೀಯ ತೆರಿಗೆ ಹಂಚಿಕೆಯಲ್ಲಿ 550 ಕೋಟಿ ರೂ.ಗಳು; ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ 735 ಕೋಟಿ ರೂ.ಗಳು ಮತ್ತು ರಾಜ್ಯದ ತೆರಿಗೆಯೇತರ ಸಂಗ್ರಹಣೆಯಲ್ಲಿ 90 ಕೋಟಿ ರೂ.ಗಳ ಕೊರತೆಯಿಂದಾಗಿ ಮುಂಗಡ ಪತ್ರದ ಅಂದಾಜುಗಳಿಗೆ ಮಧ್ಯಕಾಲೀನ ತಿದ್ದುಪಡಿ ಅಗತ್ಯವಾಯಿತು. ಆದಾಗ್ಯೂ, ಹಿಂದಿನಂತೆ ನಾವು ಆದ್ಯತಾವಲಯಗಳಿಗೆ ಅಗತ್ಯ ಸಂಪನ್ಮೂಲ ಒದಗಿಸಲು ಪ್ರಯತ್ನಿಸಿದ್ದೇವೆ. ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜಿನಲ್ಲಿ ನಮ್ಮ ವಿತ್ತೀಯ ಕೊರತೆ 5151 ಕೋಟಿ ರೂ.ಗಳಾಗಿದ್ದು ಇದು ನಮ್ಮ ನಿರೀಕ್ಷೆಗೆ ಅತೀ ಸಮೀಪದಲ್ಲಿದೆ. ಆದಾಯದ ಕೊರತೆಯಿದ್ದಾಗ್ಯೂ ಸಹ ವಿತ್ತೀಯ ಕೊರತೆ ನಮ್ಮ ನಿಯಂತ್ರಣ ಮೀರದಂತೆ ನೋಡಿಕೊಂಡಿದ್ದೇವೆ.

13. ಮಧ್ಯಮಾವಧಿ ಆರ್ಥಿಕ ಯೋಜನೆಗಳನ್ನು (ಎಂ.ಟಿ.ಎಫ್.ಪಿ) ಇತರೆ ಇಲಾಖೆಗಳಿಗೂ ಸಹ ಸಿದ್ಧಪಡಿಸುವ ಕಾರ್ಯದಲ್ಲಿ ನಾವು ನಿರತರಾಗಿದ್ದೇವೆ. ಈ ಯೋಜನೆಗಳು ಆರ್ಥಿಕ ಗುರಿಗಳನ್ನು ಮತ್ತು ಅಳತೆ ಮಾಡಬಹುದಾದ ಸಾಧನೆಯ ಸೂಚಿಗಳನ್ನು ಒಳಗೊಂಡಿರುತ್ತವೆ. ಈ ನಿಟ್ಟಿನಲ್ಲಿ ಪ್ರಾಯೋಗಿಕವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ, ಶಿಕ್ಷಣ ಮತ್ತು ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಯ ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ಮಧ್ಯಮಾವಧಿ ಯೋಜನೆಗಳನ್ನು ಪ್ರಸಕ್ತ ಅಧಿವೇಶನ ಮಂಡಿಸಲಾಗುವುದು.

ಕೃಷಿ ಮತ್ತು ಸಂಬಂಧಿತ ವಲಯಗಳು

14. ನಾನು ಈ ವಲಯಗಳಿಗೆ ಸದಾ ಅತಿ ಹೆಚ್ಚು ಆದ್ಯತೆ ನೀಡುತ್ತಿದ್ದೇನೆ. ನಮ್ಮ ಸರ್ಕಾರ ಕೃಷಿಗಾಗಿ 5100 ಕೋಟಿ ರೂ.ಗಳ ವೆಚ್ಚ ಮಾಡುತ್ತಿರುವುದನ್ನು ಮಾನ್ಯ ಸದಸ್ಯರು ಮೆಚ್ಚುತ್ತಾರೆಂದು ನಾನು ಭಾವಿಸಿದ್ದೇನೆ. ಈ ಮೊತ್ತದಲ್ಲಿ ಸುಮಾರು 2000 ಕೋಟಿ ರೂ.ಗಳ ವಿದ್ಯುತ್ ಸಹಾಯಧನ ಮತ್ತು 2900 ಕೋಟಿ ರೂ.ಗಳ ನೀರಾವರಿ ವೆಚ್ಚ ಸೇರಿದೆ. ಈ ಮೊತ್ತವು ರಾಜ್ಯ ವಾರ್ಷಿಕ ಆಯವ್ಯಯದ ಶೇ. 25 ರಷ್ಟಾಗಿದ್ದು ಕೃಷಿಯ ಬಗ್ಗೆ ನನ್ನ ಸರ್ಕಾರಕ್ಕಿರುವ ಬದ್ಧತೆಯ ಪ್ರತೀಕವಾಗಿದೆ.

15. ನನ್ನ ಸರ್ಕಾರವು ರಾಷ್ಟ್ರೀಯ ಬೆಳೆವಿಮಾ ಕಾರ್ಯಕ್ರಮವಾದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸುತ್ತಿದೆ. ನಾವು ಪ್ರಸಕ್ತ ವರ್ಷ ಸುಮಾರು ಆರು ಲಕ್ಷಕ್ಕೂ ಹೆಚ್ಚು ರೈತರನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ತಂದಿದ್ದೇವೆ. ಇದು ಈ ಹಿಂದಿನ ವರ್ಷಕ್ಕೆ ಹೋಲಿಸಿದರೆ ದ್ವಿಗುಣಗೊಂಡಿದೆ.

16. ದುರಾದೃಷ್ಟವಶಾತ್, ಬರದ ಪರಿಸ್ಥಿತಿಯಿಂದಾಗಿ ರಾಜ್ಯವು ತೊಂದರೆಯ ದಿನಗಳನ್ನು ಅನುಭವಿಸಿದೆ. ಸರ್ಕಾರವು ಹಲವಾರು ಬರ ಪರಿಹಾರ ಕ್ರಮಗಳ ಮೂಲಕ ರೈತರ ತೊಂದರೆಗಳನ್ನು ನಿವಾರಿಸಿದೆ. ಇಳುವರಿಯಲ್ಲಿ ವೈಫಲ್ಯವಾದ ಕಾರಣಕ್ಕಾಗಿ ಬೆಳೆವಿಮೆಗೆ ಚಂದಾದಾರರಾಗಿದ್ದ ರೈತರಿಗೆ ಸುಮಾರು 120 ಕೋಟಿ ರೂ.ಗಳ ಪರಿಹಾರ ದೊರೆಯಲಿದೆ.

17. ಕೈಗೆಟುಕುವ ಬೆಲೆಗಳಲ್ಲಿ ಕೃಷಿ ಪರಿಕರಗಳ ಲಭ್ಯತೆ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಉತ್ತಮ ಸೌಲಭ್ಯ ಒದಗಿಸುವುದು ಕೃಷಿ ಕ್ಷೇತ್ರದ ಯಶಸ್ಸಿಗೆ ಮೂಲ ಅಂಶಗಳಾಗಿವೆ. ರೈತರಿಗೆ ಸಕಾಲದಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ದೊರೆಯಬೇಕೆಂದು ಮಾನ್ಯ ಸದಸ್ಯರುಗಳು ಒತ್ತಿ ಹೇಳುತ್ತಿದ್ದಾರೆ. ಸದಸ್ಯರ ಈ ಕಳಕಳಿಯಲ್ಲಿ ನಾನೂ ಭಾಗಿಯಾಗುತ್ತೇನೆ.

18. ಸಾಲವೆಚ್ಚದಲ್ಲಿ ಅಪಾರ ಏರಿಕೆಯಾಗಲು ಸಹಕಾರಿ ಸಾಲ ಸಂಸ್ಥೆಗಳ ಶ್ರೇಣೀಕೃತ ಸ್ವರೂಪವೇ ಒಂದು ಕಾರಣವಾಗಿದೆ. ಈ ಸಾಂಸ್ಥಿಕ ಸ್ವರೂಪದಲ್ಲಿ ಮಧ್ಯವರ್ತಿ ಪದರಗಳನ್ನು ಕಡಿಮೆ ಮಾಡುವುದೇ ಇದಕ್ಕೆ ನಮ್ಮ ಸ್ಪಷ್ಟ ಪರಿಹಾರ. ರಾಜ್ಯದ ಹದಿನೈದು ಜಿಲ್ಲೆಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ಉದ್ದೇಶಿಸಲಾಗಿದ್ದು, ಅಪೆಕ್ಸ್ ಬ್ಯಾಂಕ್‌ನವರು ಪ್ರಾಥಮಿಕ ಸಾಲ ಸಹಕಾರಿ ಸಂಘಗಳಿಗೆ ಮತ್ತು ರೈತರ ಸ್ವಸಹಾಯ ಗುಂಪುಗಳಿಗೆ ನೇರವಾಗಿ ಸಾಲಗಳನ್ನು ವಿತರಿಸಲಿದ್ದಾರೆ. ಇದರಿಂದ ರೈತರಿಗೆ ಬಡ್ಡಿ ದರದಲ್ಲಿ ಶೇಕಡಾ 2-3 ರಷ್ಟು ಕಡಿಮೆಯಾಗಲಿದೆ. ಅಲ್ಪಾವಧಿ ಕೃಷಿ ಸಾಲದ ಬಡ್ಡಿ ದರ ಶೇಕಡಾ 9 ನ್ನು ಮೀರದಂತೆ ನೋಡಿಕೊಳ್ಳುವುದು ನಮ್ಮ ಪ್ರಯತ್ನವಾಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಸಾಲ ವ್ಯವಸ್ಥೆಗೆ ಅಗತ್ಯ ಬದಲಾವಣೆಗಳನ್ನು ಅಳವಡಿಸಲಾಗುವುದು. ಈ ಪ್ರಯೋಗ ಯಶಸ್ವಿಯಾದರೆ ಇದನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು. ಸಹಕಾರ ಸಾಲ ಪದ್ಧತಿ ಸುಧಾರಣೆಯಂತಹ ಮಹತ್ತರ ಕಾರ್ಯಕ್ಕೆ ಇದು ಹಾದಿಯನ್ನು ಸುಗಮಗೊಳಿಸಲಿದೆ.

19. ಹನಿ ನೀರಾವರಿ ಮತ್ತು ಸ್ಪ್ರಿಂಕ್ಲರ್‌ಗಳ ಮಾರಾಟದ ಮೇಲಿನ ಮಾರಾಟ ತೆರಿಗೆಯನ್ನು ನಾನು ರದ್ದುಗೊಳಿಸಲು ಉದ್ದೇಶಿಸಿದ್ದೇನೆ.

20. ರೈತರ ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ, ಅವರ ಉತ್ಪನ್ನಗಳಿಗೆ ಸೂಕ್ತ ಪರಿಶ್ರಮದ ಬೆಲೆ ಪಡೆಯುವುದಾಗಿದೆ. ಈಗಾಗಲೆ ನನ್ನ ಸರ್ಕಾರವು ಬೃಹತ್ ಪ್ರಮಾಣದಲ್ಲಿ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯನ್ನು ಜಾರಿಗೊಳಿಸಿದ್ದು ಇದು ರೈತರಿಗೆ ಬೆಂಬಲ ಒದಗಿಸಿದೆ. ಪ್ರಸಕ್ತ ವರ್ಷ ಸರ್ಕಾರವು ಆವರ್ತ ನಿಧಿಯಿಂದ 125 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಮೆಕ್ಕೆಜೋಳ, ರಾಗಿ, ಭತ್ತ ಮತ್ತು ಕೊಬ್ಬರಿ ಬೆಳೆಗಳಿಗೆ ಬೆಂಬಲ

ಬೆಲೆ ಒದಗಿಸಿದೆ. ಅಡಿಕೆ ಬೆಲೆ ಕೂಡ ವಿಪರೀತ ಏರಿಳಿತಕ್ಕೆ ಒಳಗಾಗುತ್ತಿದ್ದು ಭಾರತ ಸರ್ಕಾರದ ಬೆಂಬಲದೊಂದಿಗೆ ಇದನ್ನು ಸಹ ಈ ಯೋಜನೆಯಡಿ ಸೇರಿಸಲು ನಾನು ಉದ್ದೇಶಿಸಿದ್ದೇನೆ.

21. ಸಭಾಧ್ಯಕ್ಷರೆ, ಜಗತ್ತಿನಾದ್ಯಂತ ಇಂದು ಸರಕು ಮಾರುಕಟ್ಟೆಯ ಸ್ವರೂಪ ಗುರುತಿಸಲಾಗದಷ್ಟು ಬದಲಾವಣೆಯಾಗಿದೆ. ತಂತ್ರಜ್ಞಾನವು ಭೌತಿಕ ದೂರ ಕಡಿಮೆಗೊಳಿಸಿ, ಮಾರುಕಟ್ಟೆಯ ವ್ಯಾಪ್ತಿಯನ್ನು ವಿಶಾಲಗೊಳಿಸಿದೆ. ನಮ್ಮ ಮಾರುಕಟ್ಟೆಗಳೂ ಆಧುನೀಕರಣಗೊಂಡು ಭವಿಷ್ಯದ ವಾಣಿಜ್ಯ ಅನುಕೂಲ ಪಡೆದು ಎಲ್ಲ ಕೃಷಿ ಉತ್ಪನ್ನಗಳೊಡನೆ ಮುನ್ನಡೆಯಬೇಕು. ಈ ಬೆಳವಣಿಗೆಗಳನ್ನು ಗಮನಿಸಿ, ಅವೆಲ್ಲವುಗಳ ಅನುಕೂಲಗಳನ್ನು ಬಾಚಿಕೊಳ್ಳಲು ಕರ್ನಾಟಕ ಕಾದು ಕುಳಿತಿದೆ ಎನ್ನುವುದನ್ನು ನಾವು ಸಾಬೀತುಪಡಿಸಬೇಕು.

22. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ರೈತರಿಗೆ ಸಲ್ಲಬೇಕಾದ ಹಣವನ್ನು ವಿಳಂಬ ಹಾಗೂ ತೊಂದರೆಯಿಲ್ಲದಂತೆ ನೀಡಲು ನನ್ನ ಸರ್ಕಾರವು ಹೆಚ್ಚು ಒತ್ತು ನೀಡುತ್ತದೆ. ಈ ನಿಟ್ಟಿನಲ್ಲಿ ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಲಾಗುವುದು. ರೈತರ ತೊಂದರೆಗಳಿಗೆ ಶೀಘ್ರವೇ ಪರಿಹಾರ ಒದಗಿಸಲಾಗುವುದು

23. ದಾಸ್ತಾನು ಸೌಲಭ್ಯದ ವೃದ್ಧಿಯು ಮಾರುಕಟ್ಟೆ ಆಧುನೀಕರಣದ ಜೊತೆ ನಿಕಟ ಸಂಬಂಧ ಹೊಂದಿದೆ. ದಾಸ್ತಾನು ಸೌಲಭ್ಯಗಳನ್ನು ವೃದ್ಧಿಪಡಿಸಲು ನಾನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ದಾಸ್ತಾನು ಗೋದಾಮು ಮತ್ತು ಗುಲ್ಬರ್ಗಾ, ಗೋಕಾಕ್, ಶಿವಮೊಗ್ಗ ಮತ್ತು ಹುಬ್ಬಳ್ಳಿಗಳಲ್ಲಿ ನಾಲ್ಕು ಬೃಹತ್ ಬಹುಧಾನ್ಯ ಸಂಗ್ರಹಣಾ ಕಣಜಗಳನ್ನು ನಿರ್ಮಿಸಲು ಉದ್ದೇಶಿಸಿದ್ದೇನೆ. ಈ ಸಾಹಸದಲ್ಲಿ ಪಾಲ್ಗೊಳ್ಳಲು ಖಾಸಗಿ ವಲಯದವರನ್ನು ಆಹ್ವಾನಿಸಲಾಗುವುದು.

24. ಜಾಗತೀಕರಣದ ಅನಿವಾರ್ಯತೆಯ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ರೈತರು ಅಭಿವೃದ್ಧಿ ಹೊಂದಬೇಕಾದರೆ ಅವರು ಜಾಗತಿಕ ಮಾರುಕಟ್ಟೆಯತ್ತ ನೋಡಲೇ ಬೇಕು. ಕೃಷಿ ಉತ್ಪನ್ನಗಳ ರಫ್ತು ವೃದ್ಧಿಗೊಳ್ಳಲೇಬೇಕು. ಅಂತರರಾಷ್ಟ್ರೀಯ ಸಮುದಾಯವು ನಿಗದಿಪಡಿಸಿದ ಗುಣಮಟ್ಟವನ್ನು ನಾವು ತಲುಪದ ಹೊರತು ಇದು ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ, ನಾನು ಕೃಷಿ ಉತ್ಪನ್ನಗಳಲ್ಲಿನ ಕೀಟನಾಶಕ ಅಂಶದ ಉಳಿಕೆ ಪ್ರಮಾಣವನ್ನು ಪರೀಕ್ಷಿಸುವ ಮೂರು ಪ್ರಯೋಗಾಲಯಗಳನ್ನು ಬೆಂಗಳೂರು, ಧಾರವಾಡ ಮತ್ತು ಬಳ್ಳಾರಿಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ.

25. ಬೇಳೆ ಕಾಳುಗಳ ಪ್ರಾಮುಖ್ಯವನ್ನು ಅರಿತಿರುವ ನನ್ನ ಸರ್ಕಾರವು *ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತವನ್ನು* ಸ್ಥಾಪಿಸಿದೆ. ಈ ಮಂಡಳಿಯು ತೊಗರಿಯ ಜೊತೆಗೆ ಇತರೆ ಬೇಳೆ ಕಾಳುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲಿದೆ. ಈ ಮಂಡಳಿಗೆ ಶೇರುಧನವಾಗಿ ನಾನು ಐದು ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

26. ನನ್ನ ಸರ್ಕಾರವು ಅಕ್ಕಿ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಿದ್ದು ಕೃಷಿ ಆಯೋಗದ ಸಲಹೆಯಂತೆ ಸುಧಾರಿತ ಅಕ್ಕಿ ಕೃಷಿ ಬೇಸಾಯವನ್ನು ಹೆಚ್ಚು ಹುರುಪಿನಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

27. ಕೃಷಿಯು ಎದುರಿಸುತ್ತಿರುವ ಮಾರುಕಟ್ಟೆ ಸಂಬಂಧೀ ಸಮಸ್ಯೆಗಳಿಗೆ ಗುತ್ತಿಗೆ ಕೃಷಿ ವರದಾನವಾಗಿ ಮೂಡಿಬರಲಿದೆ. ಈಗಾಗಲೆ ಕೃಷಿ ಗುತ್ತಿಗೆ ಘಟಕವೊಂದು ಕೃಷಿ ಇಲಾಖೆಯಲ್ಲಿ ಕಾರ್ಯಾರಂಭಗೊಂಡಿದೆ. ಆಹಾರ ಸಂಸ್ಕರಣಾ ಕೈಗಾರಿಕೆಗಳ ಮಹತ್ವ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಘಟಕವು ರೈತರಲ್ಲಿ ಹೆಚ್ಚು ಜಾಗೃತಿ ಮೂಡಿಸಲಿದೆ. ಜೊತೆಗೆ ಗುತ್ತಿಗೆ ಕೃಷಿಯ ಸೌಲಭ್ಯಗಳನ್ನು ಹೆಚ್ಚು ಬೆಳೆಗಳಿಗೆ ವಿಸ್ತರಿಸಲಿದೆ.

28. ನಮ್ಮ ರೈತರು ರೈತಸಂಪರ್ಕ ಕೇಂದ್ರಗಳನ್ನು ಆತ್ಮೀಯತೆಯಿಂದ ಸ್ವಾಗತಿಸಿದ್ದಾರೆ. ಇವು ಸುಮಾರು 12 ಕೋಟಿ ರೂ.ಗಳ ಬಿತ್ತನೆ ಬೀಜವನ್ನು ರೈತರಿಗೆ ವಿತರಿಸಿವೆ. ಇವು ಮುಂದಿನ 12 ತಿಂಗಳುಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ರೇಷ್ಮೆ ವಿಸ್ತರಣಾ ಸೇವೆಗಳನ್ನು ಒದಗಿಸುವ ಚಟುವಟಿಕೆಯ ಕೇಂದ್ರ ಬಿಂದುವಾಗಿ ರೂಪುಗೊಳ್ಳಲಿವೆ. ಈ ಕೇಂದ್ರಗಳು *'ಭೂಮಿ'*, ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘಗಳು ಮತ್ತು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಜೊತೆ ಸಂಪರ್ಕವನ್ನು ಹೊಂದಲಿದ್ದು ರೈತರ ಎಲ್ಲ ಅಗತ್ಯಗಳನ್ನು ಒಂದೇ ಛಾವಣಿಯಡಿ ಪೂರೈಸಲಿವೆ. ಇದು ರಾಷ್ಟ್ರದಲ್ಲಿಯೇ ಮಾದರಿ ಪ್ರಯತ್ನವಾಗಿದ್ದು ಗ್ರಾಮೀಣ ಪ್ರದೇಶಗಳಿಗೆ ಮಾಹಿತಿ ತಂತ್ರಜ್ಞಾನವನ್ನು ತಲುಪಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಲಿದೆ. ಈ ಕೇಂದ್ರಗಳ ನಿರ್ಮಾಣ ವಿನ್ಯಾಸವನ್ನು ನೀಡುವಂತೆ ನಾವು ರಾಷ್ಟ್ರೀಯ ವಿನ್ಯಾಸ ಸಂಸ್ಥೆಗೆ ಮನವಿ ಸಲ್ಲಿಸಿದ್ದೇವೆ.

29. ಕರ್ನಾಟಕವು ರಾಷ್ಟ್ರದಲ್ಲಿ ಎರಡನೆ ಅತಿದೊಡ್ಡ ಒಣಭೂಮಿ ವಲಯವಾಗಿದೆ. ಇದನ್ನು ಅಭಿವೃದ್ಧಿಪಡಿಸಲು 690 ಕೋಟಿ ರೂ.ಗಳ ವಿಶ್ವಬ್ಯಾಂಕ್ ಯೋಜನೆಯನ್ವಯ 61,882 ಹೆಕ್ಟೇರ್ ಪ್ರದೇಶದಲ್ಲಿ 100 ಕೋಟಿ ರೂ.ಗಳ ವೆಚ್ಚದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. 2002-03 ನೇ ಸಾಲಿನಲ್ಲಿ ನಬಾರ್ಡ್ ಹಣಕಾಸಿನ ನೆರವಿನಡಿ 50,000 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗುವುದು.

30. ನೀರು ನಿರ್ವಹಣೆ ಮತ್ತು ವಾಣಿಜ್ಯ ಬೆಳೆಯ ಪರ್ಯಾಯ ಪದ್ಧತಿಯ ಇಸ್ರೇಲ್ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ರಾಜ್ಯದ ಎರಡು ತೋಟಗಾರಿಕೆ ಫಾರಂಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು. ಈ ಉದ್ದೇಶಕ್ಕಾಗಿ ನಾನು ಮೂರು ಕೋಟಿ ರೂ.ಗಳನ್ನು ನಿಗದಿಗೊಳಿಸಿದ್ದೇನೆ.

31. ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳು ರೈತರಿಗೆ ಅನುಕೂಲವಾಗುವ ಹಲವಾರು ಸಂಶೋಧನೆಗಳಲ್ಲಿ ತೊಡಗಿವೆ. ತೆಂಗಿನ ನುಸಿ ಬಗ್ಗೆ ಸಂಶೋಧನೆ, ಜೈವಿಕ ತಂತ್ರಜ್ಞಾನ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಚಟುವಟಿಕೆ ಇತ್ಯಾದಿಗಳು ಇದರಲ್ಲಿ ಸೇರಿವೆ. ಕೃಷಿ ವಿಜ್ಞಾನ ಕೇಂದ್ರಗಳಿಲ್ಲದ ಜಿಲ್ಲೆಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೃಷಿಕರಿಗೆ ತಂತ್ರಜ್ಞಾನ ವರ್ಗಾಯಿಸಲು ಮತ್ತು ಬೇಸಾಯ ಶಿಕ್ಷಣ ನೀಡಲು ವಿಶ್ವವಿದ್ಯಾಲಯಗಳ ಮೂಲಕ ದೂರ ಶಿಕ್ಷಣವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಒಟ್ಟಾರೆ ಅನುದಾನವನ್ನು 87 ಕೋಟಿ ರೂ.ಗಳಿಂದ 107 ಕೋಟಿ ರೂ.ಗಳಿಗೆ ನಾನು ಹೆಚ್ಚಿಸುತ್ತಿದ್ದೇನೆ.

32. ರಾಜ್ಯದ ಒಟ್ಟಾರೆ ಕೃಷಿ ಭೂಮಿಯ ಸುಮಾರು ಒಂದನೆ ಆರು ಭಾಗದಷ್ಟು ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಿವೆ. ಕರ್ನಾಟಕದಲ್ಲಿ ಹತ್ತು ವಿಭಿನ್ನ ಕೃಷಿ ಹವಾಮಾನ ವಲಯಗಳಿದ್ದು ತೋಟಗಾರಿಕೆಗೆ ವಿಫುಲ ಅವಕಾಶಗಳಿವೆ.

33. 'ಗ್ರಾಮ ತೋಟಗಾರಿಕೆ' ಎನ್ನುವ ಸಮಗ್ರ ತರಬೇತಿ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಆಯ್ದ ಜಿಲ್ಲೆಗಳಲ್ಲಿ ಆರಂಭಿಸಲಾಗುವುದು. ಅಂಗನವಾಡಿಗಳು, ಸ್ವಸಹಾಯ ಗುಂಪುಗಳು ಮತ್ತು ರೈತ ಸಂಘಟನೆಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗುವುದು.

34. ಪಶುಸಂಗೋಪನೆ-ಗ್ರಾಮೀಣ ಪ್ರದೇಶದ ಮತ್ತೊಂದು ಪ್ರಮುಖ ಆದಾಯ ಮೂಲ. ಜಾನುವಾರಗಳ ಆರೋಗ್ಯ ಭಾಗ್ಯಕ್ಕಾಗಿ ಸರ್ಕಾರವು ಪ್ರಸಕ್ತ ವರ್ಷ ಜಿಲ್ಲಾ ಮಟ್ಟದಲ್ಲಿ ಪ್ರಾಣಿರೋಗ ಪತ್ತೆ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಇದು ಬಹಳ ಉಪಕಾರಿಯೆಂದು ಸಾಬೀತಾಗಿದ್ದು ಈ ಸೌಲಭ್ಯವನ್ನು ತಾಲ್ಲೂಕು ಮಟ್ಟಗಳಿಗೂ ಹಂತ ಹಂತವಾಗಿ ವಿಸ್ತರಿಸಲು ಉದ್ದೇಶಿಸಿದ್ದೇನೆ. ಆಯ್ದ 50 ತಾಲ್ಲೂಕುಗಳು ಮುಂದಿನ ವರ್ಷ ಈ ಸೌಲಭ್ಯವನ್ನು ಪಡೆಯಲಿವೆ. ಈ ಉದ್ದೇಶಕ್ಕಾಗಿ 2.50 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

35. ಉತ್ತಮ ಗುಣಮಟ್ಟದ ಮೀನು ಮರಿಗಳ ಉತ್ಪಾದನೆ ಹೆಚ್ಚಿಸಲು, ಹಾಗೂ ಮೀನು ಉತ್ಪಾದನೆಯನ್ನು ಆಧುನೀಕರಿಸಲು ಮತ್ತು ಮೀನು ಸಾಕಣೆ ಕೊಳಗಳನ್ನು ನಿರ್ಮಿಸಲು ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿಯಲ್ಲಿ 9.78 ಕೋಟಿ ರೂ.ಗಳ ವೆಚ್ಚದ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗುವುದು.

36. ಹಾಲಿ ಮೀನುಗಾರರಿಗೆ ಪೂರೈಸುತ್ತಿರುವ ಡೀಸೆಲ್‌ಗೆ ನೀಡುತ್ತಿರುವ ಮಾರಾಟ ತೆರಿಗೆ ವಿನಾಯಿತಿಯನ್ನು ಮುಂದಿನ ವರ್ಷಕ್ಕೂ ಮುಂದುವರಿಸಲಾಗುವುದು.

37. ನನ್ನ ಸರ್ಕಾರವು ಪ್ರಧಾನ ಕೃಷಿ ಮೂಲಸೌಕರ್ಯವಾದ ನೀರಾವರಿ ಸಾಮರ್ಥ್ಯವನ್ನು ಸೃಜಿಸಲು ಅತಿ ಹೆಚ್ಚಿನ ಆದ್ಯತೆ ನೀಡಿದೆ. ನಾನು ನೀರಾವರಿಯ ಅಂದಾಜು ವೆಚ್ಚವನ್ನು 2790 ಕೋಟಿ ರೂ.ಗಳಿಗೆ ನಿಗದಿಪಡಿಸಲು ಉದ್ದೇಶಿಸಿದ್ದೇನೆ. ಇದು ರಾಜ್ಯದ ಯೋಜನಾ ಅಂದಾಜು ವೆಚ್ಚದಲ್ಲಿ ಸುಮಾರು ಶೇಕಡ 32 ರಷ್ಟಾಗಿದೆ.

38. ಪ್ರಸಕ್ತ ವರ್ಷ ನಾವು ಕೃಷ್ಣ ಭಾಗ್ಯ ಜಲನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮದ ಮೂಲಕ 3.85 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಕಲ್ಪಿಸಲು ಯೋಜಿಸಿದ್ದು ಈಗಾಗಲೆ 2.8 ಲಕ್ಷ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ. ಮುಂದಿನ ವರ್ಷ 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಿದ್ದೇವೆ.

39. ಕಾವೇರಿ ಕಣಿವೆ ನೀರಾವರಿ ಯೋಜನೆಗಳು ನಮ್ಮ ರಾಜ್ಯಕ್ಕೆ ಬಹಳ ಪ್ರಾಮುಖ್ಯವಾಗಿವೆ. ಆದ್ದರಿಂದ ನಾನು ಕಾವೇರಿ ಕಣಿವೆ ಯೋಜನೆಗಳಿಗೆ 300 ಕೋಟಿ ರೂ.ಗಳನ್ನು ನಿಗದಿಗೊಳಿಸಿದ್ದೇನೆ.

40. ಅಂತರ ರಾಜ್ಯ ನೀರಾವರಿ ಯೋಜನೆಯಾದ ದೂದ್‌ಗಂಗಾ ಕಳೆದ ಕೆಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿತ್ತು. ನಮ್ಮ ಸರ್ಕಾರವು ಮಹಾರಾಷ್ಟ್ರ ರಾಜ್ಯದ ಜೊತೆ

ಒಪ್ಪಂದ ಮಾಡಿಕೊಂಡು 35 ಕೋಟಿ ರೂ.ಗಳನ್ನು ನೀಡಿದೆ. ಇದಕ್ಕೆ ಪ್ರತಿಯಾಗಿ ಕರ್ನಾಟಕವು 4 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವ ಹಕ್ಕನ್ನು ಪಡೆದಿದ್ದು ಯೋಜನೆಯು ಶೀಘ್ರದಲ್ಲೇ ಆರಂಭವಾಗಲಿದೆ.

41. ದಿವಂಗತ ಶ್ರೀ ನಿಜಲಿಂಗಪ್ಪನವರು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಒಣ ಭೂಮಿಗಳಿಗೆ ನೀರು ಹರಿಸುವ ಕನಸು ಕಂಡಿದ್ದರು. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಾಧ್ಯತೆಗಳ ಬಗ್ಗೆ ಪರೀಕ್ಷಿಸಲು ನಾನು ಉದ್ದೇಶಿಸಿದ್ದೇನೆ. ಮುಂದಿನ ಆರು ತಿಂಗಳಿನಲ್ಲಿ ಈ ಪರೀಕ್ಷೆ ಪೂರ್ಣಗೊಳ್ಳಲಿದೆ. ಈ ಯೋಜನೆ ಸಾದುವೆಂದು ಕಂಡುಬಂದರೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

42. 2001-02 ನೇ ಸಾಲಿನಲ್ಲಿ ಹಿರೇಹಳ್ಳ ಯೋಜನೆ, ಕೃಷ್ಣ ಮೇಲ್ದಂಡೆ ಯೋಜನೆಯ ಇಂಡಿ ಉಪ ಕಾಲುವೆ (64ನೇ ಕಿ.ಮೀ.ನಿಂದ 133 ಕಿ.ಮೀ) ಮತ್ತು ಹಳ್ಳಿ ಮೈಸೂರು ಏತ ನೀರಾವರಿ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಪ್ರತಿಷ್ಠಿತ ಯೋಜನೆಗಳಾದ ಅಲಮಟ್ಟಿ ಅಣೆಕಟ್ಟು, ಬೆಣ್ಣಿತೊರ, ಲೋವರ್ ಮುಲ್ಲಮರಿ, ಚುಲ್ಕಿ ನಾಲೆ, ಮಸ್ಕಿನಾಲೆ ಮತ್ತು ನಾರಾಯಣಪುರ ಬಲದಂಡೆ ಕಾಲುವೆಗಳನ್ನು 2002-03 ನೇ ಸಾಲಿನಲ್ಲಿ ರಾಷ್ಟ್ರಕ್ಕೆ ಸಮರ್ಪಿಸಲಾಗುವುದು.

43. ನೀರಾವರಿ ನಿರ್ವಹಣೆಯಲ್ಲಿ ರೈತರನ್ನು ತೊಡಗಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ. ಈವರೆಗೆ 1350 ನೀರಾವರಿ ಬಳಕೆದಾರರ ಸಹಕಾರ ಸಂಘಗಳು ನೋಂದಣಿಯಾಗಿದ್ದು 220 ಸಹಕಾರ ಸಂಘಗಳು ಈಗಾಗಲೆ ಒಪ್ಪಂದ ಪತ್ರಕ್ಕೆ ಸಹಿ ಮಾಡಿವೆ. 2002-03ನೇ ಸಾಲಿನಲ್ಲಿ ಉಳಿಕೆ ಕಾರ್ಯ ವಿಧಾನಗಳನ್ನು ಸಂಪೂರ್ಣಗೊಳಿಸಲಾಗುವುದು.

44. ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸ್ಪರ್ಧಾಕತೆಯನ್ನು ಜಾರಿಗೊಳಿಸಲು ನೀರಾವರಿ ಇಲಾಖೆಯು ರಾಷ್ಟ್ರದಲ್ಲಿಯೇ ಮಾರ್ಗದರ್ಶಿ ಪ್ರಯತ್ನವಾಗಿ ಇ-ಟೆಂಡರಿಂಗ್ ವ್ಯವಸ್ಥೆಯನ್ನು ಆರಂಭಿಸಿದೆ.

45. ತ್ವರಿತ ನೀರಾವರಿ ಫಲದಾಯಕ ಯೋಜನೆಯಡಿ (ಎ.ಐ.ಬಿ.ಪಿ) ಕರ್ನಾಟಕಕ್ಕೆ ಪ್ರಸಕ್ತ ವರ್ಷ 450 ಕೋಟಿ ರೂ.ಗಳು ದೊರೆತಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಸಂತಸದಿಂದ ತಿಳಿಸುತ್ತೇನೆ. ಮುಂಬರುವ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಅನುದಾನ ಪಡೆಯುತ್ತೇನೆಂಬ ಭರವಸೆ ನನಗಿದೆ.

46. ಸಮುದಾಯ ಸಹಭಾಗಿತ್ವದೊಂದಿಗೆ 5000 ಗ್ರಾಮ ಕೆರೆಗಳ ಹೂಳು ತೆಗೆದು ಅವುಗಳನ್ನು 1000 ಕೋಟಿ ರೂ.ಗಳ ವೆಚ್ಚದಲ್ಲಿ ಮುಂದಿನ ಐದು ವರ್ಷಗಳಲ್ಲಿ ದುರಸ್ತಿಗೊಳಿಸಲು ಸಮನ್ವಯ ಸಂಸ್ಥೆಯನ್ನಾಗಿ ಜಲ ಸಂವರ್ಧನಾ ಯೋಜನಾ ಸಂಘವನ್ನು ಸ್ಥಾಪಿಸಲಾಗಿದೆ.

ಗ್ರಾಮೀಣಾಭಿವೃದ್ಧಿ, ಸಮಾಜಕಲ್ಯಾಣ ಮತ್ತು ಉದ್ಯೋಗ

47. ನಮ್ಮ ಘೋಷಿತ ವಿಕೇಂದ್ರೀಕರಣದ ನೋಟದಂತೆ, ನಾವು ಗ್ರಾಮ ಪಂಚಾಯಿತಿಗಳನ್ನು ಶಕ್ತಗೊಳಿಸಲು ಸಕಲ ಪ್ರಯತ್ನಗಳನ್ನು ಮುಂದುವರಿಸಬೇಕಿದೆ. ಇನ್ನು

ಮುಂದೆ ಗ್ರಾಮ ಕೆರೆಗಳಿಂದ ಉತ್ಪತ್ತಿಯಾಗುವ ಆದಾಯವನ್ನು ಆಯಾ ಪಂಚಾಯತಿಗಳಿಗೆ ಬಿಡಲಾಗುವುದು. ಗ್ರಾಮ ಪಂಚಾಯಿತಿಗಳು ತೆರಿಗೆ ಮತ್ತು ಇತರೆ ಮೂಲಗಳಿಂದ ಸಂಗ್ರಹಿಸುವ ಹೆಚ್ಚುವರಿ ಆದಾಯಕ್ಕೂ ಪಂಚಾಯತ್ ಸಂಸ್ಥೆಗಳಿಗೆ ಬಿಡುಗಡೆ ಮಾಡುವ ಮುಕ್ತ ಅನುದಾನಕ್ಕೂ ಸಂಬಂಧ ಕಲ್ಪಿಸಲಾಗುವುದು. ಇದು ಸಂಪನ್ಮೂಲ ಸಂಗ್ರಹಣೆಗೆ ಉತ್ತೇಜನ ನೀಡುತ್ತದೆ ಎಂದು ನಾನು ನಂಬಿದ್ದೇನೆ.

48. ಪಂಚಾಯತ್ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ವಿವಿಧ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸಲು ನಾನು ಗ್ರಾಮೀಣ ಅಭಿವೃದ್ಧಿ ಸಲಹಾ ಮಂಡಳಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

49. ಸ್ಥಳೀಯ ಸಂಸ್ಥೆಗಳ ಆಡಳಿತ ಸಾಮರ್ಥ್ಯ ವೃದ್ಧಿಸಲು ಅನುವಾಗುವಂತೆ ನಾನು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ತರಬೇತಿ ಚಟುವಟಿಕೆಯ ವ್ಯಾಪ್ತಿ ವಿಸ್ತರಿಸಲು ಉದ್ದೇಶಿಸಿದ್ದೇನೆ. ಅಲ್ಲದೆ ಇದನ್ನು ಇಂತಹ ಚಟುವಟಿಕೆಗಳ ಸಮನ್ವಯ ಸಂಸ್ಥೆಯನ್ನಾಗಿ ಮಾಡಲಿದ್ದೇನೆ. 1000 ಗ್ರಾಮ ಪಂಚಾಯಿತಿಗಳು ರಾಜ್ಯ ಲೆಕ್ಕಪತ್ರಗಳ ನಿಯಮಗಳಿಗೆ ಹೊಂದಿಕೆಯಾಗುವಂತೆ ಆಧುನಿಕ ಲೆಕ್ಕಪತ್ರ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಿವೆ. ಅನ್‌ಸಾರಿಡ್ ಸಂಸ್ಥೆಯು ಈ ಚಟುವಟಿಕೆಗಳ ಅಭಿವೃದ್ಧಿ ಮತ್ತು ತರಬೇತಿ ಸಾಮಗ್ರಿಗಳ ಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿದೆ.

50. ಪಂಚಾಯತ್ ರಾಜ್ ಸಂಸ್ಥೆಗಳು ಉದ್ಯೋಗ ಆಧಾರಿತ ಯೋಜನೆಗಳನ್ನು ಕೈಗೆತ್ತಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಸ್ಥಿರ ಆಸ್ತಿಗಳನ್ನು ಸೃಜಿಸಲು *ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯು (ಎಸ್‌ಜಿಆರ್‌ವೈ)* ಅನುವು ಮಾಡಿಕೊಡುತ್ತದೆ. ಈ ಯೋಜನೆಯಡಿ 2002-03 ನೇ ಸಾಲಿನಲ್ಲಿ ನಾವು 289 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಿದ್ದೇವೆ. ಇದರಲ್ಲಿ ಅರ್ಧಭಾಗ ಭಾರತ ಸರ್ಕಾರ ಪೂರೈಸುವ ಅಕ್ಕಿ ಮತ್ತು ಗೋಧಿಯ ರೂಪದಲ್ಲಿರುತ್ತದೆ. ಉಳಿಕೆ 144 ಕೋಟಿ ರೂ.ಗಳು ನಗದು ನೆರವಾಗಿರುತ್ತದೆ. ಭಾರತ ಸರ್ಕಾರದ ನಗದು ಪಾಲು 110 ಕೋಟಿ ರೂ.ಗಳಾಗಿದ್ದರೆ ರಾಜ್ಯ ಸರ್ಕಾರದ ಪಾಲು 34 ಕೋಟಿ ರೂ.ಗಳಾಗಿರುತ್ತದೆ. ಈ ಯೋಜನೆಗೆ ಬರುವ ಪ್ರತಿಕ್ರಿಯೆಯನ್ನು ನೋಡಿಕೊಂಡು ನಾವು ಗಣನೀಯ ಪ್ರಮಾಣದಲ್ಲಿ ಅನುದಾನ ನೀಡಲಿದ್ದೇವೆ.

51. ಈ ಚಾಲನಾ ಕ್ರಮಗಳು ಭೂರಹಿತ ಕಾರ್ಮಿಕರಿಗೆ ಅತ್ಯಗತ್ಯವಾಗಿರುವ ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಇದೇ ಸಮಯದಲ್ಲಿ ಇವು ಪಂಚಾಯತ್ ರಾಜ್ ಸಂಸ್ಥೆಗಳ ಪರಿಣಾಮಕಾರತೆಯನ್ನು ಬಲಗೊಳಿಸುತ್ತದೆ.

52. ಆದ್ಯತೆಯ ಕ್ಷೇತ್ರಗಳಾದ ಅಂತರ್‌ಜಲ ಪುನಶ್ಚೇತನ, ಜಲಾನಯನ ಅಭಿವೃದ್ಧಿ ಯೋಜನೆಗಳ ಮೂಲಕ ಮಳೆ ನೀರು ಸಂಗ್ರಹಣೆ ಮತ್ತು ನವ ಗ್ರಾಮ ಕಾರ್ಯಕ್ರಮದಡಿ ಬಡಾವಣೆಗಳ ನಿರ್ಮಾಣ ಇವುಗಳನ್ನು ಎಸ್‌ಜಿಆರ್‌ವೈ ಯೋಜನೆಯಡಿ ಸೇರಿಸಲಾಗುವುದು.

53. ಸೂಕ್ತ ನಿರ್ವಹಣೆಯಿಲ್ಲದ ಗ್ರಾಮೀಣ ರಸ್ತೆಗಳು ಗಂಭೀರ ಸಮಸ್ಯೆಗಳಾಗಿವೆ. ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸುಮಾರು 1,04,000 ಕಿ.ಮೀ. ಗ್ರಾಮೀಣ ರಸ್ತೆಗಳು ಬರುತ್ತವೆ. ನಾನು ರಸ್ತೆ ನಿರ್ವಹಣಾ ವ್ಯವಸ್ಥೆಯನ್ನು ಸುಗಮಗೊಳಿಸಲು ಉದ್ದೇಶಿಸಿದ್ದು ಇದಕ್ಕಾಗಿ ಕ್ರಿಯಾ ಯೋಜನೆ ಸಿದ್ಧಗೊಳ್ಳುತ್ತಿದೆ. ಹಲವಾರು ಮೂಲಗಳಿಂದ ಸಂಪನ್ಮೂಲ ಒಗ್ಗೂಡಿಸಿ ಪ್ರತಿ ತಾಲ್ಲೂಕಿಗೆ ಒಂದು ಕೋಟಿ ರೂ.ಗಳಷ್ಟು ಹಣ ವೆಚ್ಚ ಮಾಡುವ ಕಾರ್ಯಕ್ರಮ ಇದಾಗಿದೆ.

54 ಬ್ಯಾಂಕುಗಳವರೇ ಉದ್ಯಮಶೀಲರಿಗೆ ತರಬೇತಿ ನೀಡುವ ಯಶಸ್ವಿ ಮಾದರಿ ಯೋಜನೆ 'ರುಡ್‌ಸೆಟಿ' ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಆರಂಭವಾಯಿತು. ಈ ರೀತಿ ಹಣಕಾಸು ಸಂಸ್ಥೆಗಳ ಸಹಯೋಗದೊಡನೆ ಕಾರ್ಯ ನಿರ್ವಹಿಸುವುದು ಶಕ್ತಿಯುತ ಮಾರ್ಗ ಎಂಬುದು ನನ್ನ ಸರ್ಕಾರದ ಬಲವಾದ ನಂಬಿಕೆ.

55. ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಹಣ ನೀಡಲು ಸಮ್ಮತಿಸುವ ಶಾಸಕರ ಕ್ಷೇತ್ರದಲ್ಲಿ 'ರುಡ್‌ಸೆಟಿ' ಕೇಂದ್ರಗಳನ್ನು ಸ್ಥಾಪಿಸುವ ವಿನೂತನ ಯೋಜನೆಯನ್ನು ನಾನು ಘೋಷಣೆ ಮಾಡುತ್ತಿದ್ದೇನೆ. ಈ ರುಡ್‌ಸೆಟಿ ಕೇಂದ್ರಗಳನ್ನು ಬ್ಯಾಂಕುಗಳು ಸ್ಥಾಪಿಸಿ ನಡೆಸುತ್ತವೆ. ಇದಕ್ಕೆ ಪ್ರತಿಯಾಗಿ ಪ್ರತಿ ರುಡ್‌ಸೆಟಿಗೆ 40 ಲಕ್ಷ ರೂ.ಗಳವರೆಗೆ ಪರಿಹಾರ ಉತ್ತೇಜನ ಧನವನ್ನು ಯಶಸ್ವಿ ತರಬೇತಿದಾರರಿಗೆ ನೀಡಿದ ಸಾಲಗಳ ಸಂಖ್ಯೆಯನ್ನು ಆಧರಿಸಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ನೀಡಲಾಗುವುದು.

56. ಈ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ನಾನು ಗೌರವಾನ್ವಿತ ಶಾಸಕರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ನಿಟ್ಟಿನಲ್ಲಿ ಸರ್ಕಾರ ಆಡಳಿತ ನೆರವನ್ನು ನೀಡುತ್ತದೆ.

57. ಈ ಮಾದರಿಯ ಪಾಲುದಾರಿಕೆ ಒಪ್ಪಂದವು ಗ್ರಾಮೀಣ ವಲಯದಲ್ಲಿ ಹೆಚ್ಚು ಸಾಲ ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಹೊಸ ಹುರುಪಿನಿಂದ ಮುನ್ನಡೆಯುತ್ತದೆ ಎಂಬ ವಿಶ್ವಾಸ ನನಗಿದೆ. ಈ ವಿನೂತನ ವಿಧಾನದಿಂದಾಗಿ ಸರ್ಕಾರವು ಸಾಲಗಳಿಗೆ ಸಹಾಯಧನ ನೀಡುವ ಬದಲಿಗೆ ನಂಬಿಗಸ್ಥ ಸಾಲ ಗ್ರಾಹಕರನ್ನು ಸೃಷ್ಟಿಸಲು ಬ್ಯಾಂಕುಗಳಿಗೆ ಸಹಾಯ ಒದಗಿಸುವ ಪಾತ್ರ ನಿರ್ವಹಿಸಲಿದೆ.

58. ನನ್ನ ಸರ್ಕಾರವು ಸಮಾಜದ ದುರ್ಬಲ ವರ್ಗವನ್ನು ಮೇಲೆತ್ತಲು ಬದ್ಧವಾಗಿದ್ದು ಇವರನ್ನು ಲಾಭದಾಯಕ ಉದ್ಯೋಗಕ್ಕೆ ಸಜ್ಜುಗೊಳಿಸುತ್ತಿದೆ. ಈ ನಿಟ್ಟಿನಲ್ಲಿ 25 ಸಾವಿರ ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯುವಕರಿಗೆ ಐಟಿಐ ಗಳಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ತರಬೇತಿ ನೀಡಿ ಉದ್ಯೋಗ ಅವಕಾಶ ಒದಗಿಸಲು ನಾನು ಉದ್ದೇಶಿಸಿದ್ದೇನೆ. ಮುಂದಿನ ಆರ್ಥಿಕ ವರ್ಷದಲ್ಲಿ 2000 ಶಿಕ್ಷಿತ ಯುವ ಉದ್ಯೋಗಿಗಳಿಗೆ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುವುದು.

59. ವಿದ್ಯಾರ್ಥಿನಿಲಯಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸಲು ವಿಶೇಷ ಪ್ರಯತ್ನ ಮಾಡಲಾಗುವುದು. ಅಪೂರ್ಣಗೊಂಡಿರುವ 172 ಹಾಸ್ಟೆಲ್ ಕಟ್ಟಡಗಳನ್ನು ಪೂರ್ಣಗೊಳಿಸುವ

ಜೊತೆಗೆ 2002-03ನೇ ಸಾಲಿನಲ್ಲಿ ನೂತನ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣವನ್ನು ಸಹ ಕೈಗೆತ್ತಿಕೊಳ್ಳಲಾಗುವುದು.

60. ದೌರ್ಜನ್ಯ ನಿಯಂತ್ರಣ ಕಾಯಿದೆ 1989 ರ ಅಡಿಯಲ್ಲಿ ಬರುವ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಿ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಲಾಗುವುದು.

61. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಭಾರತ ಸರ್ಕಾರದ ನೆರವಿನೊಂದಿಗೆ ಸಫಾಯಿ ಕರ್ಮಚಾರಿಗಳ ಪುನರ್‌ವಸತಿಗಾಗಿ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಿದೆ.

62. ಮುಂದಿನ ಆರ್ಥಿಕ ವರ್ಷದಲ್ಲಿ ಗಿರಿಜನ ಪ್ರದೇಶದ ಮೂಲಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು. ಗಿರಿಜನ ಉಪಯೋಜನೆಯಡಿ ವಸತಿ, ಶಿಕ್ಷಣ ಮತ್ತು ಸಣ್ಣ ನೀರಾವರಿಗೆ ವಿಶೇಷ ಗಮನ ನೀಡಲಾಗುವುದು. ವೈದ್ಯಕೀಯ ಸೌಲಭ್ಯಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಹಂತ ಹಂತವಾಗಿ ಸಂಚಾರಿ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು. ಗಿರಿಜನ ಹೆಣ್ಣುಮಕ್ಕಳ ಸಾಕ್ಷರತಾ ಮಟ್ಟವನ್ನು ವೃದ್ಧಿಸಲು ಮತ್ತು ಮೂಲ ಬುಡಕಟ್ಟು ಜನಾಂಗದ ಹೆಣ್ಣುಮಕ್ಕಳ ಶಿಕ್ಷಣವನ್ನು ಮುಂದುವರಿಸಲು ಗಮನ ಕೇಂದ್ರೀಕರಿಸಲಾಗುವುದು.

63. ಹಿಂದುಳಿದ ವರ್ಗಗಳ ಸಾಕ್ಷರತಾ ಮಟ್ಟವನ್ನು ಸುಧಾರಿಸಲು ಅನುಕೂಲವಾಗುವಂತೆ 140 ವಸತಿಗೃಹಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗುವುದು. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಸಣ್ಣ ಸಾಲ ನೀಡಿಕೆ ಕಾರ್ಯಕ್ರಮದಡಿ ಸ್ವಸಹಾಯ ತಂಡಗಳನ್ನು ರಚಿಸಿಕೊಳ್ಳುವ ಮಹಿಳಾ ಫಲಾನುಭವಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲಿದೆ.

64. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 36 ಮುರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳ ನಿರ್ಮಾಣವನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಆರಂಭಿಸಲಾಗುವುದು. ಈ ಉದ್ದೇಶಕ್ಕಾಗಿ ಹುಡ್ಕೊ ಸಂಸ್ಥೆಯಿಂದ 72 ಕೋಟಿ ರೂ.ಗಳ ಸಾಲ ಸೌಲಭ್ಯ ಪಡೆಯಲಾಗುವುದು.

65. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸಾಲ ನೀಡಿಕೆ ಕಾರ್ಯಕ್ರಮದಲ್ಲಿ 10,000 ಫಲಾನುಭವಿಗಳಿಗೆ ನೆರವು ನೀಡಲಿದೆ. ವಕ್ಫ್ ಮಂಡಳಿಗಳಿಗೆ ನೀಡುವ ಅನುದಾನವನ್ನು ದ್ವಿಗುಣಗೊಳಿಸಲು ಉದ್ದೇಶಿಸಿದ್ದು 2002-03ನೇ ಸಾಲಿಗೆ 12 ಕೋಟಿ ರೂ.ಗಳ ಅನುದಾನ ಹಂಚಿಕೆ ಮಾಡಲಾಗಿದೆ. ಹೀಗೆ ಹೆಚ್ಚು ಮಾಡಿದ ಅನುದಾನದಲ್ಲಿ ಸ್ವಲ್ಪ ಭಾಗವನ್ನು ಖಬರ್‌ಸ್ಥಾನ್ ಸೌಲಭ್ಯ ಕಲ್ಪಿಸಲು ಬಳಸಬೇಕು. ಹಜ್ ಕಟ್ಟಡದ ನಿರ್ಮಾಣಕ್ಕಾಗಿ ನಾನು ಮೂರು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

66. ಸ್ತ್ರೀಶಕ್ತಿ ಕಾರ್ಯಕ್ರಮವು ಅಪಾರ ಯಶಸ್ಸುಗಳಿಸಿದೆ. ನನ್ನ ಸರ್ಕಾರವು 2001-02 ನೇ ಸಾಲಿನಲ್ಲಿ 50,000 ಸ್ವಸಹಾಯ ತಂಡಗಳನ್ನು ರಚಿಸುವ ಗುರಿ ಇಟ್ಟುಕೊಂಡಿದ್ದನ್ನು ಮಾನ್ಯ ಸದಸ್ಯರು ನೆನಪು ಮಾಡಿಕೊಳ್ಳಬೇಕು. ಈಗ ವಾಸ್ತವವಾಗಿ 10,88,838

ಮಹಿಳೆಯರನ್ನೊಳಗೊಂಡ 74,512 ತಂಡಗಳು ರೂಪುಗೊಂಡಿವೆ. ನನ್ನ ಹಿಂದಿನ ಮುಂಗಡ ಪತ್ರದಲ್ಲಿ ನಿಗಧಿ ಮಾಡಿದ್ದ 5 ಕೋಟಿ ರೂ.ಗಳ ಸಂಗ್ರಹಣೆಗೆ ಎದುರಾಗಿ ಈ ತಂಡಗಳು 40.49 ಕೋಟಿ ರೂ.ಗಳನ್ನು ಉಳಿತಾಯ ಮಾಡಿದ್ದಾರೆ. ಈ ಯೋಜನೆಯ ಆವರ್ತ ನಿಧಿಗೆ ಮತ್ತು ತರಬೇತಿಗಾಗಿ 21 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಆಂದೋಲನದ ಬಗ್ಗೆ ನಮ್ಮ ಕೇಂದ್ರೀಕೃತ ಗಮನ ಮುಂದುವರಿಯಲಿದೆ. ಈ ತಂಡಗಳು ಹೆಚ್ಚು ಅನುಕೂಲ ಪಡೆಯಲು ಅನುವಾಗುವಂತೆ ಮುಂದಿನ ವರ್ಷ ಬ್ಯಾಂಕುಗಳಿಂದ 100 ಕೋಟಿ ರೂ.ಗಳಷ್ಟು ಸಾಲ ಸೌಲಭ್ಯ ಪಡೆಯುತ್ತಾರೆ ಎಂದು ನಿರೀಕ್ಷಿಸಿದ್ದೇನೆ.

67. ಮಕ್ಕಳ ಪೌಷ್ಠಿಕತೆ ನಮ್ಮ ಪರಮ ಆದ್ಯತೆಯಾಗಿದೆ. ಅಂಗನವಾಡಿ ಕೇಂದ್ರದಲ್ಲಿನ 0-3 ವರ್ಷದೊಳಗಿನ ವಯೋಮಾನದ ಮಕ್ಕಳಿಗೆ ಒದಗಿಸುತ್ತಿರುವ ತಿಂಡಿ ಮತ್ತು ಪೌಷ್ಠಿಕ ಆಹಾರದ ಜೊತೆಗೆ ಕರ್ನಾಟಕ ಹಾಲು ಒಕ್ಕೂಟದ ಮೂಲಕ ಹಾಲು ಒದಗಿಸುವ ನೂತನ ಯೋಜನೆಯನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ.

68. ಶೈಕ್ಷಣಿಕವಾಗಿ ಹಿಂದುಳಿದ ಗುಲ್ಬರ್ಗಾ, ಬೀದರ್, ರಾಯಚೂರು, ಬಿಜಾಪುರ, ಕೊಪ್ಪಳ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಅರ್ಹತೆ ಪಡೆದ ಎಲ್ಲ ಹೆಣ್ಣುಮಕ್ಕಳನ್ನು ವಿದ್ಯಾರ್ಥಿ ವೇತನ ಯೋಜನೆಯಡಿ ತರಲಾಗುವುದು.

69. ಈವರೆಗೂ ವಸತಿಯನ್ನು ಕೇವಲ ಕಲ್ಯಾಣ ಕಾರ್ಯಕ್ರಮವೆಂದು ಪರಿಗಣಿಸಲಾಗಿತ್ತು. ನನ್ನ ಸರ್ಕಾರವು ವಸತಿಯನ್ನು ಆರ್ಥಿಕ ಪ್ರಗತಿಯ ಚಾಲನಾ ಯಂತ್ರವೆಂದೇ ಪರಿಭಾವಿಸಿ ಹೆಚ್ಚಿನ ಆದ್ಯತೆ ನೀಡಿದೆ. ವಸತಿ ವಲಯವು ಉಕ್ಕು, ಸಿಮೆಂಟ್, ವಿದ್ಯುತ್ ಸರಕುಗಳು, ಶೌಚಾಲಯ ಉಪಕರಣ ಇತ್ಯಾದಿ ಕೈಗಾರಿಕೆಗಳ ಬೇಡಿಕೆಗೆ ಚೈತನ್ಯ ನೀಡುತ್ತದೆ. ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಸೃಷ್ಟಿಗೆ ಅವಕಾಶವನ್ನು ಸಹ ಕಲ್ಪಿಸುತ್ತದೆ. ಸರ್ಕಾರ ರಚಿಸಿರುವ ವಸತಿ ಕಾರ್ಯಪಡೆಯು ವಸತಿ ಕ್ಷೇತ್ರದಲ್ಲಿ ಖಾಸಗಿ ವಲಯದ ಹೆಚ್ಚು ಹೂಡಿಕೆಗೆ ಅನುಕೂಲ ಕಲ್ಪಿಸಲು ಹಲವಾರು ಶಿಫಾರಸ್ಸು ಮಾಡಿದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಶೀಘ್ರದಲ್ಲಿಯೇ ಸಮಗ್ರ ವಸತಿ ನೀತಿಯನ್ನು ಘೋಷಿಸಲಿದೆ. 'ಸರ್ವರಿಗೂ ಮನೆ' ಈ ವಸತಿ ನೀತಿಯ ಮೂಲ ಆಶಯವಾಗಿದೆ. ವಸತಿ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ಖರೀದಿಸುವುದರ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಲು ಸರ್ಕಾರವು ಅಗತ್ಯ ಶಾಸನಾತ್ಮಕ ಬದಲಾವಣೆಗಳನ್ನು ಕೈಗೊಳ್ಳಲಿದೆ.

70. ರಾಜ್ಯದ ವಸತಿ ರಹಿತರಿಗಾಗಿ 11 ಲಕ್ಷ ಮನೆಗಳನ್ನು ನಿರ್ಮಿಸುವ ತನ್ನ ಬದ್ಧತೆಯನ್ನು ಸರ್ಕಾರವು ಪುನರುಚ್ಚರಿಸುತ್ತದೆ. ರಾಜೀವ್ ಗಾಂಧೀ ಗ್ರಾಮೀಣ ವಸತಿ ನಿಗಮವು ಈಗಾಗಲೆ 2.78 ಲಕ್ಷ ಮನೆಗಳನ್ನು ನಿರ್ಮಿಸಿದೆ. ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಿಗಾಗಿ ಪ್ರಸಕ್ತ ವರ್ಷ ಒಟ್ಟಾರೆ 178 ಕೋಟಿ ರೂ.ಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

71. ಮುಂದಿನ ವರ್ಷ ದುರ್ಬಲ ವರ್ಗದವರಿಗಾಗಿ ಮತ್ತೆ 2 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ನನ್ನ ಸರ್ಕಾರವು ಪ್ರತೀ ವರ್ಷ ಪರಿಶಿಷ್ಟ

ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಂದು ಲಕ್ಷ ಮನೆಗಳನ್ನು ಒದಗಿಸಲು ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಈಗಿರುವ ನಿಯಮಗಳಂತೆ ಶೇಕಡಾ 30 ರಷ್ಟಕ್ಕೆ ಬದಲಾಗಿ ಶೇಕಡಾ 50 ರಷ್ಟು ಮನೆಗಳನ್ನು ಈ ಜನಾಂಗದ ಫಲಾನುಭವಿಗಳಿಗೆ ನೀಡಲಾಗುವುದು. ಈ ಕ್ರಮಗಳಿಂದಾಗಿ ಮುಂದಿನ ಮೂರು ವರ್ಷಗಳಲ್ಲಿ ರಾಜ್ಯದಲ್ಲಿನ ಪರಿಶಿಷ್ಟ ಜಾತಿ/ಪಂಗಡದ ವಸತಿ ರಹಿತ ಎಲ್ಲಾ ಕುಟುಂಬಗಳಿಗೆ ವಸತಿ ಸೌಲಭ್ಯ ದೊರೆಯಲಿದೆ ಎನ್ನುವ ನಂಬಿಕೆ ನನಗಿದೆ.

72. ವಸತಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗ್ರಾಮ ಪಂಚಾಯತ್‌ಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗುವುದು. ಈ ರೀತಿ ನಿರ್ಮಿಸುವ ಶೇಕಡಾ 40 ರಷ್ಟು ಮನೆಗಳ ಹಂಚಿಕೆಯನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗುವುದು. ಇದಕ್ಕೆ ಪೂರ್ವಭಾವಿಯಾಗಿ ಗ್ರಾಮ ಪಂಚಾಯತ್‌ಗಳು ಮನೆ ಬಯಸುವ ಗ್ರಾಮೀಣ ಬಡಜನರಿಗಾಗಿ ನಿಯಮಿತ ಉಳಿತಾಯ ಯೋಜನೆಯನ್ನು ರೂಪಿಸಿ ಅಗತ್ಯ ಹಣ ಸಂಗ್ರಹಿಸಬೇಕಾಗುತ್ತದೆ. ಬಡಜನರಿಗೆ ಗೃಹಸಾಲ ವಸೂಲಾತಿ ಹೊರೆಯಾಗದಂತೆ ಸಾಲ ಮರುಪಾವತಿ ವ್ಯವಸ್ಥೆಯನ್ನು ಸುಧಾರಿಸಲಾಗುವುದು.

73. ನಗರಗಳ ಅಡ್ಡಾದಿಡ್ಡಿ ಬೆಳವಣಿಗೆಯನ್ನು ನಿಯಂತ್ರಿಸಲು ಸಣ್ಣ ಪಟ್ಟಣಗಳನ್ನು ಅಭಿವೃದ್ಧಿಗೊಳಿಸುವುದು ಅತ್ಯವಶ್ಯವಾಗಿದೆ. 'ಮುಖ್ಯಮಂತ್ರಿಗಳ ಮಾದರಿ ಪಟ್ಟಣ ವಸತಿ ಕಾರ್ಯಕ್ರಮ' ಎನ್ನುವ ವಿನೂತನ ಯೋಜನೆಯಡಿ ಸಣ್ಣ ಪಟ್ಟಣಗಳಲ್ಲಿ ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಕರ್ನಾಟಕ ಗೃಹ ಮಂಡಳಿಯು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಸ್ವಯಂ ಹೂಡಿಕೆ ಆಧಾರದಲ್ಲಿ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಿದೆ.

74. ಕರ್ನಾಟಕ ಗೃಹ ಮಂಡಳಿಯು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಆದಾಯ ರೂಢಿಸುವ ಹೊಸ ಆಸ್ತಿಗಳ ನಿರ್ಮಾಣದತ್ತ ತನ್ನ ಗಮನವನ್ನು ಕೇಂದ್ರೀಕರಿಸಲಿದೆ. ಜಿಲ್ಲಾ ಕಚೇರಿಗಳ ಸಂಕೀರ್ಣ, ಮಿನಿ ವಿಧಾನಸೌಧಗಳ ನಿರ್ಮಾಣ, ಬಾಡಿಗೆ ವಸತಿಗಳ ನಿರ್ಮಾಣ ಮತ್ತು ಜಮೀನು ಮೀಸಲು ಕಾರ್ಯಕ್ರಮಗಳನ್ನು ಮಂಡಳಿಯು ಕೈಗೆತ್ತಿಕೊಳ್ಳಲಿದೆ.

75. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ನಿರ್ಮಲ ಜ್ಯೋತಿ ಯೋಜನೆಯ ಅನುಷ್ಠಾನವನ್ನು ಕೈಗೆತ್ತಿಕೊಂಡಿದೆ. ರಾಜ್ಯದ 21 ನಗರಗಳ ಸುಮಾರು 15 ಲಕ್ಷ ಕೊಳಗೇರಿ ನಿವಾಸಿಗಳಿಗೆ ಇದರ ಫಲ ದೊರೆಯಲಿದೆ. ಮಂಡಳಿಯು ಕೇಂದ್ರ ನೆರವಿನ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ 57.65 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರು ಮತ್ತು ಇತರೆ ನಗರಗಳಲ್ಲಿ 10,312 ಮನೆಗಳನ್ನು ನಿರ್ಮಿಸಲಿದೆ. ನಿರ್ಮಲ ಭಾರತ ಅಭಿಯಾನ ಯೋಜನೆಯಡಿ 18.54 ಕೋಟಿ ರೂ.ಗಳ ವೆಚ್ಚದಲ್ಲಿ 383 ಸಮುದಾಯ ಶೌಚಾಲಯಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಸೇವೆಗಳು: ಆರೋಗ್ಯ ಶಿಕ್ಷಣ ಮತ್ತು ನಾಗರೀಕ ಸೌಕರ್ಯಗಳು

76. ಪರ್ಯಾಯ ವೈದ್ಯಕೀಯ ಪದ್ಧತಿಗಳಿಗೆ ಪ್ರಾಮುಖ್ಯತೆ ನೀಡಲು ನಾನು ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಸಲಹಾ ಮಂಡಳಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

77. ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿ ಕಲ್ಯಾಣ ಸಮಿತಿಗಳನ್ನು ಸ್ಥಾಪಿಸಲು ಸಹ ನಾನು ಉದ್ದೇಶಿಸಿದ್ದೇನೆ. ಇದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲಿದ್ದು ಹೊರಗಿನಿಂದ ಕೊಡುಗೆಗಳನ್ನು ಸ್ವೀಕರಿಸಿ, ಇವುಗಳನ್ನು ಅಧಿಕಾರಿಗಳ ಮಿತ ನಿಯಂತ್ರಣದೊಂದಿಗೆ ಬಳಸಿಕೊಳ್ಳಲಿದೆ.

78. ಹುಬ್ಬಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಯಾತ್‌ಲ್ಯಾಬ್‌ನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಇದು ಉತ್ತರ ಕರ್ನಾಟಕದ ನಾಗರೀಕರಿಗೆ ಸೇವೆ ಒದಗಿಸಲಿದೆ.

79. ಕರ್ನಾಟಕವು ಈ ವರ್ಷ ಪೋಲಿಯೋದಿಂದ ಮುಕ್ತಗೊಳ್ಳಲಿದೆ. ಪೋಲಿಯೋವನ್ನು ರಾಜ್ಯದಿಂದ ತೊಡೆದು ಹಾಕುವ ಅಂತಿಮ ಹಂತದಲ್ಲಿ ನಾವಿದ್ದೇವೆ. ಪಲ್ಸ್ ಪೋಲಿಯೋ ನಿರೋಧಕ ಚುಚ್ಚುಮದ್ದು ನೀಡಿಕೆ ಆಂದೋಲನದ ಮೂಲಕ ಸರ್ಕಾರ ನಡೆಸಿದ ಸಂಘಟಿತ ಪ್ರಯತ್ನದ ಫಲ ಇದಾಗಿದೆ.

80. ನಮ್ಮ ಮುಂದಿನ ಗುರಿ-ಕ್ಷಯ. ಪರಿಷ್ಕೃತ ನವೀಕೃತ ರಾಷ್ಟ್ರೀಯ ಕ್ಷಯರೋಗ ನಿವಾರಣ ಕಾರ್ಯಕ್ರಮದಡಿ ಇನ್ನೂ 10 ಜಿಲ್ಲೆಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು.

81. ಹೆಚ್‌ಐವಿ/ಏಡ್ಸ್‌ಗಳು ಅಪಾಯದ ಕರೆ ಘಂಟೆಯನ್ನು ಬಾರಿಸುತ್ತಲೇ ಇವೆ. ಇದನ್ನು ತಡೆಗಟ್ಟಲು ಬಹು ಮಾದರಿ ಕಾರ್ಯಕ್ರಮಗಳು ಅಗತ್ಯವಾಗಿದೆ. ರಾಜ್ಯದಲ್ಲಿ ಈ ರೋಗವನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ನಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಲು ಉದ್ದೇಶಿಸಿದ್ದೇನೆ. 2002-03ನೇ ಸಾಲಿನಲ್ಲಿ ಏಡ್ಸ್ ರೋಗ ನಿಯಂತ್ರಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಹಣವನ್ನು ದ್ವಿಗುಣಗೊಳಿಸಿ 20 ಕೋಟಿ ರೂ.ಗಳಿಗೆ ಏರಿಸಬೇಕೆಂದು ರಾಷ್ಟ್ರೀಯ ಏಡ್ಸ್ ನಿವಾರಣ ಸಂಸ್ಥೆಗೆ ಪ್ರಸ್ತಾವನೆ ಕಳುಹಿಸಲು ರಾಜ್ಯವು ಉದ್ದೇಶಿಸಿದೆ. ಈ ಸಮಸ್ಯೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಾವು ಬೃಹತ್ ಆಂದೋಲನವನ್ನು ಹಮ್ಮಿಕೊಳ್ಳಬೇಕಾಗಿದೆ.

82. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಪಡೆಯ ಶಿಫಾರಸ್ಸುಗಳಿಗೆ ಅನುಗುಣವಾಗಿ ಆರೋಗ್ಯ ವಲಯಕ್ಕೆ ಹೆಚ್ಚು ಹೂಡಿಕೆ ಮಾಡಲು ನಾವು ಬದ್ಧರಾಗಿದ್ದೇವೆ. ಈ ನಿಟ್ಟಿನಲ್ಲಿ ಈಗಾಗಲೆ 875 ಕೋಟಿ ರೂ.ಗಳ ಯೋಜನೆಯನ್ನು ವಿಶ್ವಬ್ಯಾಂಕ್‌ನ ಮುಂದಿಡಲಾಗಿದ್ದು, ಅನುಮೋದನೆಯ ಅಂತಿಮ ಹಂತದಲ್ಲಿದೆ.

83. ಅಭಿವೃದ್ಧಿಗೆ ಶಿಕ್ಷಣವೇ ಅಡಿಗಲ್ಲು. ನನ್ನ ಸರ್ಕಾರವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಗರಿಷ್ಟ ಆದ್ಯತೆ ನೀಡಲು ಬದ್ಧವಾಗಿದೆ. ಈ ದಿಕ್ಕಿನಲ್ಲಿ ನಾನು ಕೆಲವು ಪುನರಾವರ್ತ ವೆಚ್ಚಗಳನ್ನು ಯೋಜನೇತರ ಬಾಬಿನಡಿ ತೆಗೆದುಕೊಂಡಿದ್ದು ಶಿಕ್ಷಣಕ್ಕೆ ಗಣನೀಯವಾಗಿ ಅನುದಾನ ಹೆಚ್ಚಿಸಲು ಉದ್ದೇಶಿಸಿದ್ದೇನೆ.

84. ಪ್ರಸಕ್ತ ವರ್ಷ ನನ್ನ ಸರ್ಕಾರವು ಆರಂಭಿಸಿದ ಪ್ರಮುಖ ಚಟುವಟಿಕೆಗಳಾದ *ಚಿಣ್ಣರ ಅಂಗಳ, ದತ್ತು ಯೋಜನೆ, ಜನ ಮೆಚ್ಚಿದ ಶಿಕ್ಷಕ, ಸರ್ವ ಶಿಕ್ಷಣ ಅಭಿಯಾನ* ಮತ್ತು *ಸಮುದಾಯದತ್ತ ಶಾಲೆ* ಇವುಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ನಾನು ಕಳೆದ ಎರಡು ವರ್ಷಗಳ ನಮ್ಮ ಸಾಧನೆಗಳನ್ನು ಒಗ್ಗೂಡಿಸಿ ಮುನ್ನಡೆಯಲು ನಿರ್ಧರಿಸಿದ್ದೇನೆ. ಆಯ್ದ ಸರ್ಕಾರಿ ಶಾಲೆಗಳಲ್ಲಿ ವೈಜ್ಞಾನಿಕ

ಉತ್ಕೃಷ್ಟ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಸರ್ಕಾರಿ ಶಾಲೆಗಳ ಏಳನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಸಮವಸ್ತ್ರ ಹಂಚುವ ಯೋಜನೆಯನ್ನು ವಿಸ್ತರಿಸಲಾಗುವುದು. ರಾಜ್ಯದ ವಾಯುವ್ಯ ಪ್ರಾಂತ್ಯದ ಹಿಂದುಳಿದ ಜಿಲ್ಲೆಗಳನ್ನು ರಾಜ್ಯದ ಇತರೆ ಭಾಗಗಳ ಶೈಕ್ಷಣಿಕ ಮಟ್ಟದ ಜೊತೆ ತರಲು ಕ್ರಮ ಕೈಗೊಳ್ಳಲಾಗುವುದು. ನಾವು ಈಗಾಗಲೇ ವಾಯುವ್ಯ ಪ್ರಾಂತ್ಯದ ಏಳು ಹಿಂದುಳಿದ ಜಿಲ್ಲೆಗಳಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯನ್ನು ಆರಂಭಿಸಿದ್ದೇವೆ. ಈ ಕಾರ್ಯಕ್ರಮಕ್ಕಾಗಿ ನಾನು 45 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

85. ಜನ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುವುದು. ಈ ಕಾರ್ಯಕ್ರಮಕ್ಕಾಗಿ ಭಾರತ ಸರ್ಕಾರದಿಂದ ನಾವು 75 ಕೋಟಿ ರೂ.ಗಳನ್ನು ನಿರೀಕ್ಷಿಸುತ್ತಿದ್ದು ರಾಜ್ಯದ ಪಾಲನ್ನು ಒದಗಿಸಲಾಗುವುದು.

86. ಬಹಳ ದಿನಗಳಿಂದ ಬಾಕಿ ಉಳಿದಿದ್ದ ಶಿಕ್ಷಣ ಅನುದಾನ ಪದ್ಧತಿಯ ಸಮಗ್ರ ಪುನರ್ ಪರಿಶೀಲನೆಯನ್ನು ಕೈಗೆತ್ತಿಕೊಳ್ಳಲಾಗುವುದು.

87. ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲ ಕ್ರೋಢೀಕರಿಸಿ ಹೊಸ ಕಾಲೇಜು ಕಟ್ಟಡಗಳು ಮತ್ತು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಕಾರ್ಯವನ್ನು ಮುಂದಿನ ವರ್ಷ ಕೈಗೆತ್ತಿಕೊಳ್ಳಲಾಗುವುದು. ಕಾಲೇಜುಗಳಲ್ಲಿರುವ ಕಂಪ್ಯೂಟರ್ ಸೌಲಭ್ಯವನ್ನು ಖಾಸಗಿ ವಲಯದ ನೆರವಿನೊಂದಿಗೆ ಮೇಲ್ದರ್ಜೆಗೇರಿಸಲಾಗುವುದು. ಸಿಬ್ಬಂದಿಗಳಿಗೆ ಸೇವಾ ಅವಧಿ ತರಬೇತಿ ನೀಡುವ ಮೂಲಕ ಬೋಧನಾ ಸಿಬ್ಬಂದಿಯ ಸಾಮರ್ಥ್ಯ ವೃದ್ಧಿಸಲಾಗುವುದು.

88. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 15 ಲಕ್ಷ ರೂ.ಗಳನ್ನು ನಿಗದಿಗೊಳಿಸಿದ್ದೇನೆ.

89. ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಹೆಸರಿನಲ್ಲಿ ಧಾರವಾಡ ವಿಶ್ವವಿದ್ಯಾಲಯದಲ್ಲಿ ಪೀಠವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

90. ಸಹಕಾರಿ ಚಳುವಳಿಯ ಅಧ್ಯಯನಕ್ಕಾಗಿ ದಿವಂಗತ ಕೆ.ಹೆಚ್. ಪಾಟೀಲರ ಹೆಸರಿನಲ್ಲಿ ರಾಜ್ಯದಲ್ಲಿ ಒಂದು ಪೀಠವನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ.

91. ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆಯೊಂದಿಗೆ ತರಬೇತಿ ಪಡೆದ ಪದವೀಧರರಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಇದಕ್ಕಾಗಿ ಹೆಚ್ಚು ಸರ್ಕಾರಿ ಕಾಲೇಜುಗಳಲ್ಲಿ ಜೈವಿಕ ತಂತ್ರಜ್ಞಾನ ಕೋರ್ಸ್‌ನ್ನು ಆರಂಭಿಸಲು ಉದ್ದೇಶಿಸಲಾಗಿದೆ.

92. ನಮ್ಮ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ರೂಢಿಸಲು ಮತ್ತು ತರ್ಕಬದ್ಧ ವೈಚಾರಿಕ ಸ್ಫೂರ್ತಿ ತುಂಬಲು ಧಾರವಾಡದಲ್ಲಿ ವಿಜ್ಞಾನ ನಗರಿಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ಯೋಜನೆಯ ರೂಪುರೇಷೆ ಮತ್ತು ಇತರೆ ಚಟುವಟಿಕೆಗಳಿಗಾಗಿ ನಾನು 20 ಲಕ್ಷ ರೂ.ಗಳನ್ನು ನಿಗದಿಗೊಳಿಸಿದ್ದೇನೆ.

93. ಕಳೆದ ಮುಂಗಡ ಪತ್ರದಲ್ಲಿ ನಾನು ಸೂಚಿಸಿದ್ದಂತೆ ವಿಶ್ವ ಬ್ಯಾಂಕ್ ನೆರವಿನ ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಕಾರ್ಯಕ್ರಮವಾದ 'ಜಲ-ನಿರ್ಮಲ' ಯೋಜನೆಯನ್ನು ಆರಂಭಿಸಲಾಗಿದೆ. ರಾಜ್ಯದ ಉತ್ತರ ಪ್ರಾಂತ್ಯದ 11 ಜಿಲ್ಲೆಗಳಲ್ಲಿ 1035 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯು ಸಮುದಾಯದ ಕೊಡುಗೆಯಾಗಿ 224 ಕೋಟಿ ರೂ.ಗಳನ್ನು ಮುಂದಿನ ಆರು ವರ್ಷಗಳಲ್ಲಿ ನಿರೀಕ್ಷಿಸುತ್ತಿದೆ. ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಅಗತ್ಯವಾದ ಕೊಡುಗೆ ನೀಡುವಂತೆ ಜನರನ್ನು ಪ್ರೇರೇಪಿಸಬೇಕೆಂದು ಮಾನ್ಯ ಸದಸ್ಯರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಈ ಯೋಜನೆಗಾಗಿ ಮುಂದಿನ ವರ್ಷಕ್ಕೆ 61 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ.

94. ಬೆಂಗಳೂರು ನಗರದ ಜನರ ನೀರಿನ ಬೇಡಿಕೆಯನ್ನು ಈಡೇರಿಸಲು ಕಾವೇರಿ ನಾಲ್ಕನೇ ಘಟ್ಟದ ಒಂದನೇ ಹಂತದ ಯೋಜನೆಯನ್ನು ಜಪಾನ್ ಅಂತರರಾಷ್ಟ್ರೀಯ ಸಹಕಾರ ಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಇದು 2002 ರ ಜೂನ್ ತಿಂಗಳಿನೊಳಗೆ ನಗರಕ್ಕೆ ಹೆಚ್ಚುವರಿಯಾಗಿ 270 ಎಂಎಲ್‌ಡಿ ನೀರನ್ನು ತರಲಿದೆ.

95. ಇಂಡೋ-ಫ್ರೆಂಚ್ ಪ್ರೋಟೋಕಾಲ್‌ನ ನೆರವಿನೊಂದಿಗೆ ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯು ಕೊಳಚೆ ನೀರು ಸಂರಕ್ಷಣಾ ಘಟಕಗಳ ನಿರ್ಮಾಣ ಕಾರ್ಯವನ್ನು ವೃಷಭಾವತಿ ಕಣಿವೆ ಮತ್ತು ಯಲಹಂಕಗಳಲ್ಲಿ ಕೈಗೆತ್ತಿಕೊಂಡಿದೆ. ಇಲ್ಲಿ ಸಂಸ್ಕರಿಸಿದ ನೀರನ್ನು ಕೈಗಾರಿಕೆಗಳಿಗೆ ಮತ್ತು ದೇವನಹಳ್ಳಿ ಬಳಿಯ ಉದ್ದೇಶಿತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪೂರೈಸಲಾಗುವುದು.

96. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 72 ನೀರು ಸರಬರಾಜು ಯೋಜನೆಗಳನ್ನು ಮತ್ತು ಏಳು ಒಳಚರಂಡಿ ಯೋಜನೆಗಳನ್ನು 798.52 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸುತ್ತಿದೆ. 2002-03 ಸಾಲಿನಲ್ಲಿ 25 ನೀರು ಪೂರೈಕೆ ಯೋಜನೆಗಳು ಕಾರ್ಯಾರಂಭಗೊಳ್ಳಲಿವೆ.

97. ಹಲವಾರು ವರ್ಷಗಳಿಂದ ನೀರು ಸರಬರಾಜು ಯೋಜನೆಗಳ ವೆಚ್ಚವು, ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳ ಜೊತೆ ಏರಿಕೆಯಾಗುತ್ತಲೇ ಇದೆ. ಭವಿಷ್ಯದ ನೀರು ಸರಬರಾಜು ಯೋಜನೆಗಳಿಗೆ ಅಪಾರ ಪ್ರಮಾಣದ ಸಂಪನ್ಮೂಲ ಬೇಕಾಗುತ್ತಿದ್ದು ಈ ವಲಯದಲ್ಲಿ ಹಣ ಹೂಡುವ ಬಗ್ಗೆ ಪುನರ್‌ನೋಟ ಬೀರಬೇಕಾಗಿದೆ. ಶುಲ್ಕ ವಿಧಿಸುವುದು ಮತ್ತು ಬಳಕೆದಾರರ ವೆಚ್ಚ ವಸೂಲಿ ಮಾಡುವುದು ಈಗ ಅನಿವಾರ್ಯವಾಗಿದೆ. ನನ್ನ ಸರ್ಕಾರವು ಬಡ ಜನತೆಯ ಹಿತರಕ್ಷಣೆಗೆ ಬದ್ಧವಾಗಿರುವುದರಿಂದ ನೀರು ಸರಬರಾಜು ಯೋಜನೆಗಳ ವೆಚ್ಚವನ್ನು ಶಕ್ತಿಯುಳ್ಳ ಜನರು ಹೊರಲೇಬೇಕಾಗಿದೆ. ಈ ನಿಟ್ಟಿನಲ್ಲಿ ನಾನು ಸಮಗ್ರ ನೀರು ನೀತಿಯನ್ನು ರೂಪಿಸಲು ಉದ್ದೇಶಿಸಿದ್ದೇನೆ.

98. ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು 25,000 ನಿವೇಶನಗಳನ್ನು ರಚಿಸಿ ವಿತರಿಸಿದೆ. ಇದಕ್ಕೂ ಮುಂಚೆ ಹಿಂದಿನ ಹತ್ತು ವರ್ಷಗಳಲ್ಲಿ ಕೇವಲ

3,400 ನಿವೇಶನ ವಿತರಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಸಾರ್ವಜನಿಕರಲ್ಲಿ ಏರಿಕೆಯಾಗುತ್ತಿರುವ ನಿವೇಶನ ಬೇಡಿಕೆಯನ್ನು ಈಡೇರಿಸಲು ಬಿಡಿಎ ಶ್ರಮಿಸುತ್ತದೆ. ಇದೇ ಸಮಯದಲ್ಲಿ ಯೋಜಿತ ಮತ್ತು ವ್ಯವಸ್ಥಿತ ಬಡಾವಣೆಗಳು ಮಾತ್ರ ಬೆಂಗಳೂರು ನಗರದಲ್ಲಿ ತಲೆಯೆತ್ತುವಂತೆ ನೋಡಿಕೊಳ್ಳುತ್ತದೆ. ಕ್ರಯ ಪತ್ರ ಸಮಾವೇಶಗಳ ಮೂಲಕ ಜನರಿಗೆ ಶುದ್ಧ ಕ್ರಯ ಪತ್ರಗಳನ್ನು ವಿತರಿಸುತ್ತಿರುವುದು ಬಿಡಿಎದ ವಿನೂತನ ಪ್ರಯೋಗವಾಗಿದೆ. ಕಳೆದ ಎರಡು ವರ್ಷಗಳಲ್ಲಿ 26,000 ಶುದ್ಧ ಕ್ರಯ ಮಾರಾಟ ಪತ್ರಗಳನ್ನು ವಿತರಿಸಲಾಗಿದೆ.

99. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಆರ್ಥಿಕ ಸದೃಢತೆಯಿಂದಾಗಿ ತನ್ನ ಸಂಪನ್ಮೂಲದಿಂದಲೇ ಸುಮಾರು 150 ಕೋಟಿ ರೂ.ಗಳ ವೆಚ್ಚದಲ್ಲಿ ಮೂಲ ಸೌಕರ್ಯ ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಿದೆ.

100. ನಾಗರಿಕ ಸೇವೆಯಲ್ಲಿ ಸುಧಾರಣೆ ತರಲು ಅನುವಾಗುವಂತೆ ಹನ್ನೊಂದನೆ ಹಣಕಾಸು ಆಯೋಗದ ಅನುದಾನದಲ್ಲಿ ರಾಜ್ಯದಲ್ಲಿರುವ ಪ್ರಮುಖ ಪ್ರಾದೇಶಿಕ ಸಾರಿಗೆ ಕಚೇರಿಗಳನ್ನು ಕಂಪ್ಯೂಟರೀಕರಿಸಲಾಗುವುದು. ವಾಹನಗಳಿಂದ ಉಂಟಾಗುವ ಪರಿಸರ ಹಾನಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಪರಿಸರ ವಾಹಿನಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು. ನನ್ನ ಭಾಷಣದ ಎರಡನೆ ಭಾಗದಲ್ಲಿ ಈ ಬಗ್ಗೆ ನಾನು ಹೆಚ್ಚು ಸಂಗತಿಗಳನ್ನು ಹೇಳಲಿದ್ದೇನೆ.

101. ದೆಹಲಿಯಲ್ಲಿ ಹಳೆಯ ವಾಹನಗಳನ್ನು ರಸ್ತೆಯಿಂದ ತೆಗೆದು ಹಾಕುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಬೆಂಗಳೂರು ನಗರ ಕೂಡ ಈ ಅಪಾಯವನ್ನು ಎದುರಿಸುತ್ತಿದೆ. ಮಾಲಿನ್ಯ ಕಡಿಮೆ ಮಾಡಲು, ಹಳೆಯ ವಾಹನಗಳ ಅಪಘಾತ ಸಂಭವ ತಪ್ಪಿಸಲು, ಹದಿನೈದು ವರ್ಷ ಮೀರಿದ ಸಾರಿಗೆ ವಾಹನಗಳ ಸಂಚಾರವನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಷೇಧಿಸಲಾಗುವುದು.

102. ಪ್ರಯಾಣಿಕರಿಗೆ ಹೆಚ್ಚು ಸೌಕರ್ಯ ಕಲ್ಪಿಸಲು ನೂತನ ಡಿಪೋಗಳು, ಶೌಚಾಲಯ ಮತ್ತು ಬಸ್ ನಿಲ್ದಾಣಗಳನ್ನು ರಾಜ್ಯದ ವಿವಿದೆಡೆಗಳಲ್ಲಿ 2002-03ನೇ ಸಾಲಿನಲ್ಲಿ ನಿರ್ಮಿಸಲಾಗುವುದು. ಬಸ್‌ಗಳ ಸಮೂಹಕ್ಕೆ ಸುಮಾರು 2000 ಹೊಸ ಬಸ್‌ಗಳನ್ನು ಸೇರಿಸಲಾಗುವುದು. ಇಂಟರ್‌ನೆಟ್ ಮತ್ತು ಖಾಸಗಿ ಏಜೆಂಟರುಗಳ ಮೂಲಕ ಸೀಟು ಕಾದಿರಿಸುವ ವ್ಯವಸ್ಥೆಯನ್ನು ಕೆಎಸ್‌ಆರ್‌ಟಿಸಿ ಒದಗಿಸಲಿದೆ.

103. ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಕೈಗೊಂಡ ಪಡಿತರ ಚೀಟಿಗಳ ಕಂಪ್ಯೂಟರೀಕರಣ ಅಪಾರ ಯಶಸ್ಸು ಸಾಧಿಸಿದೆ. ಇಲ್ಲಿ ಸುಮಾರು 13,000 ಕ್ಕೂ ಹೆಚ್ಚು ನಕಲಿ ಪಡಿತರ ಚೀಟಿಗಳನ್ನು ರದ್ದುಗೊಳಿಸಿದ್ದು ಇದರಿಂದ ಆಹಾರ ಸಹಾಯಧನದಲ್ಲಿ ಸುಮಾರು ಒಂದು ಕೋಟಿ ರೂ.ಗಳ ಉಳಿತಾಯ ಸಾಧ್ಯವಾಗಿದೆ. ಇದೇ ಮಾದರಿಯಲ್ಲಿ ಬೆಂಗಳೂರು ಅನೌಪಚಾರಿಕ ಪಡಿತರ ವಲಯದಲ್ಲಿ ಕೈಗೆತ್ತಿಕೊಂಡಿರುವ ಕಾರ್ಯಾಚರಣೆಯಲ್ಲಿ 2 ಲಕ್ಷ ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ನಿರೀಕ್ಷೆ ಇದೆ. ಈ ಕ್ರಮಗಳು ಆಹಾರ ಸಹಾಯಧನದ ಹೊರೆಯನ್ನು ನಿಯಂತ್ರಣದಲ್ಲಿಟ್ಟು ಅಗತ್ಯವುಳ್ಳ ಅಭಾಗ್ಯರಿಗೆ ಅವರ ಪಾಲನ್ನು ಒದಗಿಸುತ್ತವೆ.

104. ನಗರ ಪ್ರದೇಶಗಳ ಅನೌಪಚಾರಿಕ ಪಡಿತರ ವಲಯದಲ್ಲಿನ ಬಡತನ ರೇಖೆಯ ಮೇಲಿನ ಮತ್ತು ಬಡತನ ರೇಖೆಯ ಕೆಳಗಿನ ಕುಟುಂಬಗಳಿಗೆ ವಿತರಿಸಲು ಸೀಮೆ ಎಣ್ಣೆ ಕೂಪನ್‌ಗಳನ್ನು ಮುದ್ರಿಸಲಾಗಿದೆ. ಬೆಂಗಳೂರು ನಗರದಲ್ಲಿ ಆಹಾರ ಕೂಪನ್ ಮತ್ತು ಸೀಮೆಎಣ್ಣೆ ಕೂಪನ್‌ಗಳನ್ನು ಗಣಕೀಕೃತ ಪಡಿತರ ಚೀಟಿಯ ಜೊತೆ ನೀಡಿದ್ದು ದುರುಪಯೋಗ ಕಡಿಮೆ ಮಾಡುವ ನಿಟ್ಟಿನಲ್ಲಿ ಇದು ಮಹತ್ತರ ಹೆಜ್ಜೆಯಾಗಲಿದೆ. ಬಡತನ ರೇಖೆಯಿಂದ ಕೆಳಗಿರುವ ಕುಟುಂಬಗಳಿಗೆ ಆಹಾರ ಕೂಪನ್‌ಗಳನ್ನು ವ್ಯಾಪಕವಾಗಿ ವಿತರಿಸಲು ಉದ್ದೇಶಿಸಿದ್ದು ಇದರಿಂದ ಸಹಾಯಧನವನ್ನು ಉತ್ತಮವಾಗಿ ನಿರ್ದೇಶಿಸಬಹುದಾಗಿದೆ.

ಕೈಗಾರಿಕೆ, ವಾಣಿಜ್ಯ ಮತ್ತು ಮೂಲ ಸೌಲಭ್ಯಗಳು

105. ಸರ್ಕಾರದ ನೂತನ ಕೈಗಾರಿಕಾ ನೀತಿ 2001ರಲ್ಲಿ ತಂತ್ರಜ್ಞಾನದ ಮೇಲ್ದರ್ಜೆ, ಆಧುನೀಕರಣ, ಮೂಲಸೌಲಭ್ಯಕ್ಕೆ ಬೆಂಬಲ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ನೆರವು ಒದಗಿಸಲು ಹೆಚ್ಚು ಒತ್ತು ನೀಡಲಾಗಿದೆ. ನೂತನ ಕೈಗಾರಿಕೆಗಳ ಆರಂಭ ಮತ್ತು ಕಾರ್ಯಾಚರಣೆಗೆ ಅನುವಾಗುವಂತೆ ನಿಯಮಗಳ ಸರಳೀಕರಣ ಮತ್ತು ನಿಯಂತ್ರಣ ಸಡಿಲಿಕೆ ಈ ಕೈಗಾರಿಕಾ ನೀತಿಯ ಗುಣವಾಗಿದೆ. ಸೂಕ್ತ ಕಾಯಿದೆಯ ಮೂಲಕ ಈಗ ವ್ಯಾಪಾರಿ ಪರಿಸರದ ಮೇಲಿರುವ ನಿಯಂತ್ರಣಗಳನ್ನು ತೆಗೆದುಹಾಕಲು ಕ್ರಮ ಕೈಗೊಳ್ಳಲಾಗುವುದು.

106. ಜವಳಿ ವಲಯಕ್ಕೆ ಹೊಸ ಚೈತನ್ಯ ನೀಡಲು ರಾಷ್ಟ್ರೀಯ ಜವಳಿ ನೀತಿ 2000 ದ ಮಾದರಿಯಲ್ಲಿ ರಾಜ್ಯ ಜವಳಿ ನೀತಿಯನ್ನು ಸಹ ರೂಪಿಸಲು ಉದ್ದೇಶಿಸಲಾಗಿದೆ.

107. ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಸಿದ್ಧ ಉಡುಪು ಪಾರ್ಕ್‌ನ ಕಾರ್ಯ ಪ್ರಗತಿಯಲ್ಲಿದೆ. ಈ ಪಾರ್ಕ್‌ಗೆ ಅಗತ್ಯವಾದ 150 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಇದು 20,000 ಕ್ಕೂ ಹೆಚ್ಚು ಗ್ರಾಮೀಣರಿಗೆ ಉದ್ಯೋಗ ಒದಗಿಸಲಿದೆ.

108. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ರೇಷ್ಮೆ ಉದ್ಯಮ ಉತ್ತಮ ಅವಕಾಶ ಒದಗಿಸುತ್ತಿದೆ. ಮುಕ್ತ ಆರ್ಥಿಕ ನೀತಿಯ ಪರಿಣಾಮದಿಂದಾಗಿ ಈ ಉದ್ಯಮದ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯ ಗುಣಮಟ್ಟದೊಡನೆ ಸ್ಪರ್ಧಿಸಲು ಅನುವಾಗುವಂತೆ ನಮ್ಮ ರೇಷ್ಮೆಯ ಗುಣಮಟ್ಟ ಮತ್ತು ವೈವಿಧ್ಯತೆಯನ್ನು ನಾವು ಸುಧಾರಿಸಿಕೊಳ್ಳಬೇಕಾಗಿದೆ. ಅತ್ಯುತ್ತಮ ದರ್ಜೆಯ 10 ಸಾವಿರ ಮೆಟ್ರಿಕ್ ಟನ್ ಬೈವೋಲ್ಟಿನ್ ರೇಷ್ಮೆಯನ್ನು ಈ ದಶಕದಲ್ಲಿ ಉತ್ಪಾದಿಸಲು ಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿದೆ. ಸ್ವಿಸ್ ಸಂಸ್ಥೆಯ ನೆರವಿನಿಂದ ನೂತನ ಬೈವೋಲ್ಟಿನ್ ರೇಷ್ಮೆ ತಳಿಯನ್ನು ಪರಿಚಯಿಸಿ, ಜನಪ್ರಿಯಗೊಳಿಸಲು ಸೆರಿ-2000 ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಖಾಸಗಿ ರೇಷ್ಮೆ ಗ್ರೇನೆಜುಗಳಲ್ಲಿ ರೇಷ್ಮೆ ಮೊಟ್ಟೆ ಪ್ರಮಾಣೀಕರಿಸುವುದನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ.

109. ರೇಷ್ಮೆ ಗೂಡು ಮಾರಾಟದಲ್ಲಿ ಪಾರದರ್ಶಕತೆ ಮತ್ತು ಉತ್ತಮ ಬೆಲೆ ದೊರಕಿಸಲು ಆನ್-ಲೈನ್ ಮಾದರಿ ಮಾರಾಟ ವ್ಯವಸ್ಥೆಯನ್ನು ಜಾರಿಗೆ ತರಲು ನಾನು ಉದ್ದೇಶಿಸಿದ್ದೇನೆ. ಇದು ಮಧ್ಯವರ್ತಿಗಳನ್ನು ತೆಗೆದುಹಾಕಿ ರೈತರು ಮತ್ತು ನೇಕಾರರನ್ನು ಹತ್ತಿರಕ್ಕೆ ತರಲಿದೆ.

110. ಸಕ್ಕರೆ ಉದ್ಯಮವು ತೊಂದರೆಯ ದಿನಗಳಲ್ಲಿ ಸಾಗುತ್ತಿದೆ. ಈ ಉದ್ಯಮದ ತೊಂದರೆಗಳನ್ನು ನಿವಾರಿಸಲು ನನ್ನ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಸಕ್ಕರೆ ಕಾರ್ಖಾನೆಗಳು ಪಾವತಿಸುವ ಖರೀದಿ ತೆರಿಗೆ ಹಣದಿಂದ ಕಬ್ಬು ಬೆಳೆಗಾರರಿಗೆ ಉತ್ತೇಜಕ ಬೆಲೆ ನೀಡುವುದನ್ನು ಮುಂದುವರಿಸಲಾಗಿದೆ. ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ಪ್ರತಿ ಮೆಗಾವ್ಯಾಟ್ ವಿದ್ಯುತ್ತಿಗೆ 25 ಲಕ್ಷ ರೂ.ಗಳ ಬಂಡವಾಳ ಸಹಾಯಧನ ನೀಡುವ ಯೋಜನೆಯನ್ನು ವಿಸ್ತರಿಸಲಾಗಿದೆ. ರಫ್ತಿನ ಮೇಲೆ ಖರೀದಿ ತೆರಿಗೆ ಪಾವತಿಗೆ ವಿನಾಯಿತಿ ನೀಡಲಾಗಿದೆ ಮತ್ತು ಪ್ರವೇಶ ತೆರಿಗೆಯಲ್ಲಿ ಕಡಿತ ಮಾಡಲಾಗಿದೆ. ಬಿಕ್ಕಟ್ಟಿನಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೆರವು ನೀಡಲು ಸಕ್ಕರೆ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗುವುದು. ಈ ನಿಧಿಗೆ ರಾಜ್ಯ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳು ಸಮಾನ ಅನುದಾನ ನೀಡಲಿವೆ.

111. ದಕ್ಷಿಣ ಭಾಗದ ಜಿಲ್ಲೆಗಳ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಅನುಕೂಲಕ್ಕಾಗಿ ಮಂಡ್ಯದಲ್ಲಿ ಸಕ್ಕರೆ ಸಂಸ್ಥೆಯ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

112. ಮಾಹಿತಿ ತಂತ್ರಜ್ಞಾನದ ಅನುಕೂಲಗಳನ್ನು ಹೆಚ್ಚು ವ್ಯಾಪಕಗೊಳಿಸಲು ನನ್ನ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಈ ವರ್ಷ ನಾವು 'ಇ-ಆಡಳಿತ ತಂತ್ರ'ವನ್ನು ಘೋಷಣೆ ಮಾಡುತ್ತಿದ್ದೇವೆ. ಇದು ಸೇವೆಯ ಗುಣಮಟ್ಟವನ್ನು ಸುಧಾರಿಸುತ್ತದೆ. ಮತ್ತು ನಾಗರೀಕರಿಗೆ ಸುಲಭವಾಗಿ ಮಾಹಿತಿ ದೊರಕಿಸುತ್ತದೆ. ಕನಿಷ್ಟ ಐದು ಪ್ರಮುಖ ಸರ್ಕಾರಿ ಸೇವಾ ಸೌಲಭ್ಯಗಳನ್ನು ಆನ್-ಲೈನ್‌ನಲ್ಲಿ ಒದಗಿಸುವುದು ನನ್ನ ಗುರಿಯಾಗಿದೆ. ಇ-ಆಡಳಿತಕ್ಕಾಗಿ ನಾನು ಐದು ಕೋಟಿ ರೂ.ಗಳನ್ನು ನಿಗದಿ ಮಾಡಿದ್ದೇನೆ.

113. ನನ್ನ ಸರ್ಕಾರವು ಈಗಾಗಲೇ ಗ್ರಾಮೀಣ ಯುವಕರಿಗಾಗಿ ಯುವ ಡಾಟ್‌ಕಾಮ್ ಯೋಜನೆಯನ್ನು ಜಾರಿಗೊಳಿಸಿದೆ. ಈ ವರ್ಷ ನಾನು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಇನ್‌ಫಾರ್ಮೇಷನ್ ಕಿಯೋಸ್ಕ್‌ಗಳು, ಸೈಬರ್ ಕೆಫೆ, ಅಲ್ಪ ವೆಚ್ಚದ ಸಂಪರ್ಕಉಪಕರಣ ಇತ್ಯಾದಿಗಳನ್ನು ಬಳಸಿಕೊಂಡು ಗ್ರಾಮೀಣ ಚಟುವಟಿಕೆಗಳನ್ನು ಚುರುಕುಗೊಳಿಸಲು ಯೋಜಿಸಿದ್ದೇನೆ.

114. ರಾಜ್ಯದಲ್ಲಿ ಹಾರ್ಡ್‌ವೇರ್ ಉತ್ಪಾದನೆಯನ್ನು ಉತ್ತೇಜಿಸಲು ನಾನು ದೇವನಹಳ್ಳಿ ಬಳಿ ಹಾರ್ಡ್‌ವೇರ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲೆಯೆತ್ತುತ್ತಿರುವುದರಿಂದ ಈ ಹಾರ್ಡ್‌ವೇರ್ ಪಾರ್ಕ್ ಜಾಗತಿಕ ಮಾರುಕಟ್ಟೆಯ ಗಮನ ಸೆಳೆದು ಹಾರ್ಡ್‌ವೇರ್ ರಫ್ತಿಗೆ ಚೈತನ್ಯ ನೀಡಲಿದೆ ಎನ್ನುವ ನಿರೀಕ್ಷೆಯಿಟ್ಟುಕೊಂಡಿದ್ದೇನೆ.

115. ಸಹಸ್ರಮಾನದ ಜೈವಿಕ ತಂತ್ರಜ್ಞಾನ ನೀತಿಯಲ್ಲಿ ಭರವಸೆ ನೀಡಿದ್ದಂತೆ ನಾವು ಧಾರವಾಡದಲ್ಲಿ ಕೃಷಿ-ಜೈವಿಕ ತಂತ್ರಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ಐದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಈ ವರ್ಷ ಮಾಹಿತಿ ತಂತ್ರಜ್ಞಾನ ಇಲಾಖೆಯು ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲಿದ್ದು. ಇಲ್ಲಿ ಸಾಮಾನ್ಯ ಸೌಲಭ್ಯ ಕೇಂದ್ರಗಳು ಮತ್ತು ಪರಿಪೋಷಣಾ ಕೇಂದ್ರಗಳು ಇರುತ್ತವೆ.

116. ಕೈಗಾರಿಕೆ ಮತ್ತು ವಾಣಿಜ್ಯದ ಪ್ರಗತಿಯು ಮೂಲ ಸೌಲಭ್ಯದ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಹೆಚ್ಚುತ್ತಿರುವ ಜಾಗತೀಕರಣ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ರಿಯಾಯಿತಿ ಮತ್ತು ವಿನಾಯಿತಿಯಂತಹ ಪದ್ಧತಿಯಿಂದ ದೂರ ಸರಿದು ಪ್ರಮುಖ ಮೂಲ ಸೌಲಭ್ಯಗಳಿಗೆ ನೆರವು ನೀಡಿ ಕೈಗಾರಿಕಾವಲಯಕ್ಕೆ ಸುಧಾರಣೆ ತರಬೇಕು.

117. ಕರ್ನಾಟಕದ ರೈಲು ಯೋಜನೆಗಳ ಅಭಿವೃದ್ಧಿಗೆ ಕೆ-ರೈಡ್ ಸಂಸ್ಥೆಯನ್ನು ಯೋಜನಾ ಅಭಿವೃದ್ಧಿ ಕಂಪನಿಯನ್ನಾಗಿ ಸ್ಥಾಪಿಸಲಾಗಿದೆ. ಅಗತ್ಯವಿರುವ ಕಡೆ ಖಾಸಗಿ ವಲಯದ ಸಹಭಾಗಿತ್ವದೊಂದಿಗೆ ಪ್ರತ್ಯೇಕ ರೈಲು ಮೂಲ ಸೌಲಭ್ಯ ಯೋಜನೆಗಳನ್ನು ಈ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುವುದು. ಮಂಗಳೂರು ಗೇಜ್ ಪರಿವರ್ತನೆ ಯೋಜನೆಯನ್ನು ಮುಂದಿನ ವರ್ಷ ಕೈಗೆತ್ತಿಕೊಳ್ಳುತ್ತಿದ್ದು ವಿಶೇಷ ಉದ್ದಿಶ್ಯ ಸಂಸ್ಥೆಯ ಮೂಲಕ ಇದನ್ನು ಅನುಷ್ಠಾನಗೊಳಿಸಲಾಗುವುದು. ಈ ಯೋಜನೆ 2005ರ ವೇಳೆಗೆ ಸಂಪೂರ್ಣಗೊಳ್ಳಲಿದ್ದು ವಿಶೇಷ ಉದ್ದಿಶ್ಯದ ಕಂಪನಿಯ ಮೂಲಕ ನಡೆಸಲಾಗುವುದು. ಸೋಲಾಪುರ-ಗದಗ ಗೇಜ್ ಪರಿವರ್ತನೆ ಯೋಜನೆ ಸಹ 2005 ರ ವೇಳೆಗೆ ಸಂಪೂರ್ಣಗೊಳ್ಳುತ್ತದೆ ಎನ್ನುವ ಭರವಸೆ ನನಗಿದೆ. ಈ ಎರಡೂ ಯೋಜನೆಗಳಿಗೆ ನಾನು ಕ್ರಮವಾಗಿ 15 ಕೋಟಿ ಮತ್ತು 20 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

118. ಈ ಯೋಜನೆಗಳ ಜೊತೆಗೆ ಕೊಟ್ಟೂರು-ಹರಿಹರ, ಬೆಂಗಳೂರು-ಕೆಂಗೇರಿ ಮತ್ತು ಕೆಂಗೇರಿ-ರಾಮನಗರ ಯೋಜನೆಗಳಿಗೆ ರಾಜ್ಯವು ಯೋಜನೆಯ ಮೂರನೆ ಎರಡು ಭಾಗದಷ್ಟು ಹಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ನೀಡಬೇಕಾಗಿದೆ. ಇದಕ್ಕಾಗಿ ನಾನು ಆಯವ್ಯಯದಲ್ಲಿ 10 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

119. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯ ನಿರ್ಮಾಣಕ್ಕಾಗಿ ಜಂಟಿ ಪಾಲುದಾರರನ್ನಾಗಿ ಸೀಮನ್ಸ್, ಜೂರಿಚ್ ಏರ್‌ಪೋರ್ಟ್, ಎಲ್‌ಅಂಡ್‌ಟಿ ಕಂಪನಿಗಳನ್ನೊಳಗೊಂಡ ಒಕ್ಕೂಟವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸೆಪ್ಟೆಂಬರ್‌ನಲ್ಲಿ ಹಣಕಾಸು ವ್ಯವಹಾರಗಳು ಅಂತಿಮಗೊಂಡು ಅಕ್ಟೋಬರ್ 2002 ರಲ್ಲಿ ನಿಲ್ದಾಣದ ಕಾಮಗಾರಿ ಆರಂಭವಾಗುವ ನಿರೀಕ್ಷೆಯನ್ನು ಬಿ.ಐ.ಎ.ಎಲ್ ಇಟ್ಟುಕೊಂಡಿದೆ. ವಿಮಾನ ನಿಲ್ದಾಣದ ನಿರ್ಮಾಣ ಮಾರ್ಚ್ 2005 ರ ವೇಳೆಗೆ ಪೂರ್ಣಗೊಳ್ಳಲಿದೆ. ವಿಮಾನ ನಿಲ್ದಾಣಕ್ಕೆ 1150 ಕೋಟಿ ರೂ.ಗಳ ಅಂದಾಜು ವೆಚ್ಚ ತಗುಲಲಿದೆ. ಇದು ಸಾರಿಗೆ ಮೂಲ ಸೌಲಭ್ಯ ವಲಯದಲ್ಲಿ ಅತೀ ಹೆಚ್ಚಿನ ಬಂಡವಾಳ ಹೂಡಿದ ಯೋಜನೆಯಾಗಿದೆ. ಹಾಲಿ ಇರುವ 22 ಲಕ್ಷ ಪ್ರಯಾಣಿಕರ ಸಂಖ್ಯೆ 2005ರ ವೇಳೆಗೆ 40 ಲಕ್ಷಕ್ಕೆ ಏರುವ ನಿರೀಕ್ಷೆ

ಇದ್ದು ಇದು 25,000ಕ್ಕೂ ಹೆಚ್ಚು ಕುಶಲ ಮತ್ತು ಅರೆಕುಶಲ ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸಲಿದೆ. ರಾಜ್ಯ ಸರ್ಕಾರವು 375 ಕೋಟಿ ರೂ.ಗಳ ನೆರವನ್ನು ಒದಗಿಸಲು ಒಪ್ಪಿಕೊಂಡಿದೆ. ಕೇಂದ್ರದ ಮುಂಗಡಪತ್ರದಲ್ಲಿ ಘೋಷಿಸಿರುವ ಕೆಲವು ರಿಯಾಯಿತಿಗಳ ಹಿನ್ನೆಲೆಯಲ್ಲಿ ಈ ಹಣವನ್ನು ಒದಗಿಸುವ ಸಂಬಂಧ ವಿಧಿ ವಿಧಾನಗಳನ್ನು ಪರಿಶೀಲಿಸಲಾಗುತ್ತಿದೆ. ಮುಂದಿನ ಸಾಲಿನಲ್ಲಿ ನಾನು ಈ ಯೋಜನೆಗಾಗಿ 86.50 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

120. ಅಬಕಾರಿ ಶುಲ್ಕ, ಮೋಟಾರು ವಾಹನ ತೆರಿಗೆ ಮತ್ತು ನೋಂದಣಿ ಶುಲ್ಕದ ಮೇಲೆ ಮೂಲಸೌಲಭ್ಯ ಕರವನ್ನು ಮತ್ತೆ ಎರಡು ವರ್ಷಗಳವರೆಗೆ ಮುಂದುವರಿಸಲು ನಾನು ಉದ್ದೇಶಿಸಿದ್ದೇನೆ. ಮಾರಾಟ ತೆರಿಗೆಯ ಮೇಲಿನ ಕರವನ್ನು ಈಗ ರದ್ದುಗೊಳಿಸುತ್ತಿದ್ದು ಅದನ್ನು ಮೂಲ ತೆರಿಗೆಯ ಜೊತೆಯಲ್ಲಿಯೇ ಸೇರಿಸಲಾಗುವುದು. ಆದಾಗ್ಯೂ ಮೂಲಸೌಲಭ್ಯ ಚಾಲನಾ ನಿಧಿಗೆ ಹಿಂದೆ ನಿಗದಿಗೊಳಿಸಿರುವಂತೆ ಹಣವನ್ನು ಒಗ್ಗೂಡಿಸಲು ನಾನು ಸರ್ಕಾರಿ ರಾಜಸ್ವದಿಂದ 143 ಕೋಟಿ ರೂ.ಗಳನ್ನು ಮೂಲಸೌಲಭ್ಯ ಚಾಲನಾ ನಿಧಿಗೆ ವರ್ಗಾಯಿಸಲು ಉದ್ದೇಶಿಸಿದ್ದೇನೆ. ಈ ನಿಧಿಯ ಒಟ್ಟಾರೆ ಸಂಗ್ರಹಣೆಯಲ್ಲಿ $1/3$ ಭಾಗವನ್ನು ಎಂದಿನಂತೆ ಬಿ.ಎಂ.ಆರ್.ಟಿ.ಎಲ್.ಗೆ ನಿಗದಿಪಡಿಸಲಾಗುವುದು. ಉಳಿಕೆ $2/3$ ಭಾಗವನ್ನು ರಾಜ್ಯದ ಇತರೆ ವಿವಿಧ ಮೂಲಸೌಲಭ್ಯ ಯೋಜನೆಗಳಿಗೆ ಬಳಸಲಾಗುವುದು. ಇದಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

121. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯು (ಕೆ.ಎಸ್.ಹೆಚ್.ಐ.ಪಿ.) ವಿಶ್ವ ಬ್ಯಾಂಕ್ ನೆರವಿನೊಡನೆ ಆರಂಭವಾಗಿದೆ. ಈ ಕಾರ್ಯಕ್ರಮದಡಿ 2269 ಕಿ.ಮೀ. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಖಾಸಗಿ ವಲಯದ ಸಹಯೋಗದೊಂದಿಗೆ ರಸ್ತೆ ನಿರ್ವಹಣೆಯ ಸಾಧ್ಯತೆಯನ್ನು ನನ್ನ ಸರ್ಕಾರ ಪರಿಗಣಿಸುತ್ತಿದೆ.

122. ನಬಾರ್ಡ್ ನೆರವಿನ ಯೋಜನೆಯಡಿ 164 ಕೋಟಿ ರೂ.ಗಳ ವೆಚ್ಚದಲ್ಲಿ 2252 ಕಿ.ಮೀ ಗ್ರಾಮೀಣ ರಸ್ತೆಗಳನ್ನು ದುರಸ್ಥಿಪಡಿಸಲಾಗಿದೆ ಮತ್ತು 56 ಸೇತುವೆಗಳನ್ನು ನಿರ್ಮಿಸಲಾಗಿದೆ. ಕೇಂದ್ರ ರಸ್ತೆ ನಿಧಿ ಯೋಜನೆಯಲ್ಲಿ 86 ಪ್ರಮುಖ ಜಿಲ್ಲಾ ರಸ್ತೆಗಳ ದುರಸ್ಥಿಯನ್ನು 65 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಹುಡ್ಕೋ ನೆರವಿನಿಂದ 123 ಸೇತುವೆಗಳನ್ನು ನಿರ್ಮಿಸಿದೆ. ಇನ್ನೂ 25 ಸೇತುವೆಗಳು ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿವೆ. ಬೇಲೂರು-ಬಿಳಿಕೆರೆ ರಸ್ತೆ ಅಭಿವೃದ್ಧಿಯನ್ನು ಮತ್ತು ಜೇವರ್ಗಿ-ಬಿಜಾಪುರ ರಾಜ್ಯ ಹೆದ್ದಾರಿಗಳನ್ನು 250 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಂಡಿದೆ. ಇದೇ ಸಂಸ್ಥೆಯು ಗುಲ್ಬರ್ಗ ನಗರದ ವರ್ತುಲ ರಸ್ತೆಯನ್ನು ಸಹ ನಿರ್ಮಿಸುತ್ತಿದೆ.

123. ಮಂಡ್ಯ ಜಿಲ್ಲೆಯ ಎಲ್ಲ ರಸ್ತೆಗಳ ಸುಧಾರಣೆಗಾಗಿ ಪ್ರಾಯೋಗಿಕವಾಗಿ ನಾನು ಒಟ್ಟು 300 ಕೋಟಿ ರೂ.ಗಳ ಯೋಜನೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ಮುಂದಿನ ವರ್ಷ 40 ಕೋಟಿ ರೂ.ಗಳನ್ನು

ನಿಗದಿಪಡಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಈ ಮಾದರಿಯನ್ನು ಇತರೆ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು.

124. ವಿದ್ಯುತ್-ಆಧುನಿಕ ಅರ್ಥವ್ಯವಸ್ಥೆಯ ಜೀವನಾಡಿ. ಈ ವಲಯವು ರಾಜ್ಯದ ಆರ್ಥಿಕ ಸ್ವಾಸ್ಥ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈಗ ನಾವು ವಿದ್ಯುತ್ ಸಹಾಯಧನಕ್ಕೆ ಕಡಿವಾಣ ಹಾಕದಿದ್ದರೆ ಸಾಮಾಜಿಕ ವಲಯದ ಹೂಡಿಕೆಗೆ ನಮ್ಮಲ್ಲಿ ಅಲ್ಪ ಸಂಪನ್ಮೂಲವಷ್ಟೇ ಉಳಿಯುತ್ತದೆ. ಆದ್ದರಿಂದ ಆರ್ಥಿಕ ಪುನರ್‌ರಚನಾ ಯೋಜನೆಗೆ ಅನುಗುಣವಾಗಿ ವಿದ್ಯುತ್ ವಲಯವನ್ನು ಸುಧಾರಣೆ ಮಾಡುವುದು ಈಗ ಅನಿವಾರ್ಯವಾಗಿದೆ. ಈ ಕ್ಲಿಷ್ಟ ಕಾರ್ಯದಲ್ಲಿ ನಾನು ಸದನದ ಸಹಕಾರವನ್ನು ಬಯಸುತ್ತೇನೆ.

125. ಆದಾಗ್ಯೂ, ವಿದ್ಯುತ್ ಸುಧಾರಣಾ ಪ್ರಕ್ರಿಯೆಗಳು ರೈತ ಸಮುದಾಯವನ್ನು ನಡುನೀರಿನಲ್ಲಿ ಕೈಬಿಡುವುದಿಲ್ಲ ಎನ್ನುವ ಭರವಸೆಯನ್ನು ನಾನು ಮಾನ್ಯ ಸದಸ್ಯರುಗಳಿಗೆ ನೀಡುತ್ತೇನೆ. ಈ ಪರಿಸ್ಥಿತಿಯನ್ನು ಅರಿತು ನಾನು ವಿದ್ಯುತ್ ಸಹಾಯಧನಕ್ಕಾಗಿ ಮುಂದಿನ ವರ್ಷ 2339 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

126. ಈಗಾಗಲೆ ಚಾಲನೆ ನೀಡಿರುವ ಸುಧಾರಣೆಗಳ ಜೊತೆಗೆ ನಾಲ್ಕು ವಿದ್ಯುತ್ ವಿತರಣಾ ಕಂಪನಿಗಳನ್ನು ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಾ ಕೇಂದ್ರ ಸ್ಥಾನದಲ್ಲಿ ಸ್ಥಾಪಿಸಲು ನಾನು ಉದ್ದೇಶಿಸಿದ್ದು ಇವುಗಳನ್ನು ಖಾಸಗೀಕರಿಸಲಾಗುವುದು.

127. ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ನಷ್ಟಗಳನ್ನು ತಡೆಗಟ್ಟಲು ವಿದ್ಯುತ್ (ಕರ್ನಾಟಕ ತಿದ್ದುಪಡಿ) ಕಾಯಿದೆ 2001ನ್ನು ಕಠಿಣ ದಂಡನಾ ಕ್ರಮಗಳೊಂದಿಗೆ ಜಾರಿಗೊಳಿಸಲಾಗಿದೆ. ಆದಾಗ್ಯೂ ಈ ಅಪರಾಧಿಗಳನ್ನು ದಂಡಿಸುವ ಮೊದಲು, ಅಂಗೀಕೃತ ಯೋಜನೆಯ ರೀತ್ಯಾ ಅನಧಿಕೃತ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸುವ ಅಂತಿಮ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಸಾರ್ವಜನಿಕರಲ್ಲಿ ವಿನಂತಿಸುತ್ತೇನೆ.

128. ಬೂದು ಮತ್ತು ಕಪ್ಪು ವಲಯಗಳಲ್ಲಿರುವ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಒಂದು ಅವಧಿಯ ಕ್ರಮವಾಗಿ ಸಕ್ರಮಗೊಳಿಸಲು ನಾನು ಉದ್ದೇಶಿಸಿದ್ದೇನೆ.

129. ಮೂರು ವರ್ಷದ ಮೀಟರು ಅಳವಡಿಕೆ ಕಾರ್ಯಕ್ರಮ ರಾಜ್ಯದಲ್ಲಿ ಆರಂಭವಾಗಿದೆ. ಈಗ ಮೀಟರು ಅಳವಡಿಸಿ ಕೊಳ್ಳದ ಹೊರತು ಯಾವುದೇ ಹೊಸ ಗ್ರಾಹಕರಿಗೆ ವಿದ್ಯುತ್ ಸಂಪರ್ಕವನ್ನು ನೀಡುತ್ತಿಲ್ಲ. ಈ ಕ್ರಮಗಳು ವಿದ್ಯುತ್ ಪೋಲು ಮತ್ತು ವಾಣಿಜ್ಯ ನಷ್ಟ ತಡೆಗಟ್ಟುವ ಹಾದಿಯನ್ನು ಸುಗಮಗೊಳಿಸುತ್ತವೆ ಎಂದು ನಿರೀಕ್ಷಿಸಲಾಗಿದೆ. ಸಾರ್ವತ್ರಿಕ ಮೀಟರೀಕರಣದಿಂದ ವಿದ್ಯುತ್ ಲೆಕ್ಕ ಪರಿಶೋಧನೆಗೆ ನೆರವಾಗಲಿದ್ದು ಈ ಬಗ್ಗೆ ರಾಷ್ಟ್ರೀಯ ಒಮ್ಮತ ಮೂಡಿದೆ.

130. ಅದಕ್ಷ ಪಂಪ್‌ಸೆಟ್‌ಗಳು ಮತ್ತು ಉಪಕರಣಗಳು ವಿದ್ಯುತ್ ನಷ್ಟಕ್ಕೆ ಕಾರಣವಾಗುತ್ತಿವೆ ಎನ್ನುವುದು ರಾಷ್ಟ್ರವ್ಯಾಪಿ ಅನುಭವವಾಗಿದೆ. ಆದ್ದರಿಂದ ರೈತರಿಗೆ ಸರಬರಾಜು ಮಾಡುವ ವಿದ್ಯುತ್‌ಗೆ ಮೀಟರ್ ಅಳವಡಿಸಿ ಅವರು ವಾಸ್ತವವಾಗಿ ಬಳಸುವ ವಿದ್ಯುತ್‌ಗೆ ರಿಯಾಯಿತಿ ದರದಲ್ಲಿ ಶುಲ್ಕ ವಿಧಿಸಲು ಉದ್ದೇಶಿಸಲಾಗಿದೆ. ಹಾಗೆಯೆ ಹಾರ್ಸ್‌ಪವರ್ ಆಧಾರಿತ

ಸಮಾನ ಹಂತದ ದರಗಳನ್ನು ಲೆಕ್ಕ ಹಾಕಿ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ರೈತರಿಂದ ವಸೂಲು ಮಾಡಲಾಗುವುದು. ಇದು ರೈತರು ತಮ್ಮ ಪಂಪ್‌ಸೆಟ್‌ಗಳನ್ನು ದಕ್ಷತೆಯಿಂದ ಬಳಸಿ ವಿದ್ಯುತ್ ಬಳಕೆಯಲ್ಲಿ ಉಳಿತಾಯ ಸಾಧಿಸಲು ಉತ್ತೇಜನ ನೀಡುತ್ತದೆ.

131. ಗ್ರಾಹಕರಿಂದ ಅಪಾರ ಪ್ರಮಾಣದ ಬಾಕಿ ಬರಬೇಕಾಗಿದ್ದು ಇದು ಕೆಪಿಟಿಸಿಎಲ್‌ನ ಆರ್ಥಿಕ ಸ್ವಾಸ್ಥ್ಯವನ್ನು ಹದಗೆಡಿಸಿದೆ. ಇದನ್ನು ಸುಧಾರಿಸುವ ಕಾರ್ಯದಲ್ಲಿ ಸೂಕ್ತ ಉತ್ತೇಜನಗಳನ್ನು ಅಳವಡಿಸಲಾಗಿದ್ದು ಸ್ಥಳೀಯ ಸಂಸ್ಥೆಗಳು ಇದರಲ್ಲಿ ಪಾಲ್ಗೊಳ್ಳಬೇಕೆಂದು ನಾನು ಬಯಸುತ್ತಿದ್ದೇನೆ. ಯೋಜನೆಯ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು.

132. ಪ್ರಸಕ್ತ ವರ್ಷ 467 ಮೆಗಾವಾಟ್ ವಿದ್ಯುತ್ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಲಾಗಿದೆ. ನನ್ನ ಸರ್ಕಾರವು ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮುಂದುವರಿಸುತ್ತದೆ. ಪ್ರಸಕ್ತ ವರ್ಷ 290 ಮೆಗಾವಾಟ್‌ನ ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರ ಮತ್ತು 500 ಮೆಗಾವಾಟ್‌ನ ಬಳ್ಳಾರಿ ಶಾಖೋತ್ಪನ್ನ ಕೇಂದ್ರವನ್ನು ಆರಂಭಿಸಲಾಗಿದೆ. ಮುಂಬರುವ ವರ್ಷ ವಿದ್ಯುತ್ ಜಾಲಕ್ಕೆ 339 ಮೆಗಾವಾಟ್‌ನ್ನು ಸೇರಿಸಲು ಉದ್ದೇಶಿಸಲಾಗಿದೆ.

133. ರಾಜ್ಯದ ವಿದ್ಯುತ್ ವಿತರಣಾ ಮತ್ತು ಪ್ರಸರಣಾ ವ್ಯವಸ್ಥೆಯನ್ನು ಬಲಪಡಿಸಲು ಕೆಪಿಟಿಸಿಎಲ್ ಹೂಡಿಕೆ ಮಾಡಲಿದೆ. ಕರ್ನಾಟಕವು ವಿದ್ಯುತ್ ವಲಯ ಸುಧಾರಣೆಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವುದರ ಜೊತೆಗೆ ಗಣನೀಯ ಪ್ರಗತಿಯನ್ನು ಸಾಧಿಸಿದೆ. ರಾಜ್ಯವು ಭಾರತ ಸರ್ಕಾರದ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ಅನುಕೂಲ ಪಡೆದು ಪ್ರಮುಖ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲಿದೆ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ

134. ಈ ನಿಧಿಯ ಅನುದಾನ ಹೆಚ್ಚು ಮಾಡಬೇಕೆಂದು ಮಾನ್ಯ ಸದಸ್ಯರಿಂದ ನನಗೆ ಅಪಾರ ಸಂಖ್ಯೆಯ ಮನವಿಗಳು ಬರುತ್ತಿವೆ. ಆದ್ದರಿಂದ ನಾನು 2002-03 ನೇ ಸಾಲಿನಲ್ಲಿ ಈ ಅನುದಾನವನ್ನು ಪ್ರತೀ ಶಾಸಕರಿಗೆ 25 ಲಕ್ಷ ರೂ.ಗಳಿಂದ 40 ಲಕ್ಷ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ 120 ಕೋಟಿ ರೂ.ಗಳ ಅನುದಾನವನ್ನು ನಿಗದಿಗೊಳಿಸಿದ್ದೇನೆ.

135. ಮಾನ್ಯ ಸದಸ್ಯರುಗಳು ತಮ್ಮ ಕ್ಷೇತ್ರಗಳಲ್ಲಿನ ಕಾಮಗಾರಿಗಳನ್ನು ನಿಯಮಗಳಿಗೆ ಅನುಸಾರವಾಗಿ ಕೈಗೆತ್ತಿಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಈ ನಿಧಿಯನ್ನು ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಬೇಕೆಂದು ನಾನು ನಿರೀಕ್ಷಿಸುತ್ತಿದ್ದೇನೆ.

ಪ್ರಕೃತಿ, ಜೀವಿಶಾಸ್ತ್ರ ಮತ್ತು ಪರಿಸರ

136. ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಆ ಮೂಲಕ ಸ್ಥಳೀಯ ಜನರನ್ನು ಅರಣ್ಯ ನಿರ್ವಹಣೆ ಮತ್ತು ಆದರಿಂದಾಗುವ ಲಾಭದ ಹಂಚಿಕೆಯಲ್ಲಿ ತೊಡಗಿಸುವ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದೆ. ಈವರೆಗೆ ರಾಜ್ಯದಲ್ಲಿ ಸುಮಾರು 2800 ಸಮಿತಿಗಳನ್ನು ರಚಿಸಲಾಗಿದೆ. ಅರಣ್ಯ ಸಂಪತ್ತನ್ನು ಸೂಕ್ತವಾಗಿ ಬಳಸಿಕೊಳ್ಳಲು ಸರ್ಕಾರವು ತನ್ನ ಕಾರ್ಯಕ್ರಮಗಳನ್ನು ಹೆಚ್ಚು ಚುರುಕುಗೊಳಿಸುತ್ತದೆ.

137. ಈ ಹಿಂದೆ ಆರಂಭಿಸಿದ್ದ 'ವನವಿಕಾಸ' ಯೋಜನೆಗೆ ಸಾರ್ವಜನಿಕರಿಂದ ವ್ಯಾಪಕ ಬೆಂಬಲ ದೊರೆತಿದೆ. ಈ ಯೋಜನೆಯನ್ನು ಮತ್ತಷ್ಟು ಪ್ರದೇಶಗಳಿಗೆ ವಿಸ್ತರಿಸಲು ನಾನು ಮೂರು ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

138. ಬೆಂಗಳೂರು ನಗರದಲ್ಲಿರುವ ಕೆರೆಗಳ ಅಭಿವೃದ್ಧಿ ಮತ್ತು ಪುನರುಜ್ಜೀವನಕ್ಕಾಗಿ ಭಾರತ ಸರ್ಕಾರದ ಅನುದಾನ ಬಳಸಿಕೊಂಡು ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು.

139. ಹತ್ತನೇ ಯೋಜನೆಯ ಅವಧಿಯಲ್ಲಿ ಪ್ರಮುಖ ಪರಿಸರ ಸಮಸ್ಯೆಗಳ ಬಗ್ಗೆ ಗಮನಹರಿಸಲು ಅನುಕೂಲವಾಗುವಂತೆ ಕರ್ನಾಟಕ ಪರಿಸರದ ಸ್ಥಿತಿಗತಿ ಕುರಿತ ವರದಿಯನ್ನು ಮುಂದಿನ ವರ್ಷ ಸಿದ್ಧಪಡಿಸಲಾಗುವುದು.

140. ಪರಿಸರ ಕ್ಷೇತ್ರದಲ್ಲಿ ಶ್ರೇಷ್ಠತೆ ಮೆರೆದವರಿಗೆ ಈಗ ನೀಡುತ್ತಿರುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಪರಿಸರದ ಸಮಗ್ರ ಅಭಿವೃದ್ಧಿಗಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿ ಅಥವಾ ಸಂಸ್ಥೆಗಳನ್ನು ಗೌರವಿಸಲು 'ಪರಿಸರಶ್ರೀ' ಎನ್ನುವ ನೂತನ ಪ್ರಶಸ್ತಿಯನ್ನು ಸ್ಥಾಪಿಸಲಾಗುವುದು.

ಆಡಳಿತ ಮತ್ತು ನಿಯಂತ್ರಣ

141. ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಬೇಕೆನ್ನುವುದು ಬಹಳ ದಿನಗಳ ಬೇಡಿಕೆಯಾಗಿದೆ. ಇದಕ್ಕಾಗಿ ನಾನು 10 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ. ಅಗತ್ಯಬಿದ್ದರೆ ಇನ್ನೂ ಹೆಚ್ಚುವರಿ ಹಂಚಿಕೆಯನ್ನು ಮಾಡಲಾಗುವುದು.

142. ಕರ್ನಾಟಕವು ಶಾಂತಿಪ್ರಿಯ ರಾಜ್ಯ. ಹೀಗೆಂದು ನಾವು ಮೈಮರೆಯುವಂತಿಲ್ಲ. ಪೊಲೀಸ್ ಪಡೆಯನ್ನು ಆಧುನೀಕರಿಸುವ ಮತ್ತು ಅವರು ನಾಗರೀಕರಿಗೆ ನೀಡುವ ಸೇವೆಯನ್ನು ಪರಿಣಾಮಕಾರಿಗೊಳಿಸುವ ನಮ್ಮ ಪ್ರಯತ್ನಗಳು ಮುಂದುವರಿಯುತ್ತವೆ.

143. ಕಳೆದ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರವು ಪೊಲೀಸ್ ಪಡೆಯ ಆಧುನೀಕರಣಕ್ಕಾಗಿ 215 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಇದರಲ್ಲಿ ಭಾರತ ಸರ್ಕಾರದ 140 ಕೋಟಿ ರೂ.ಗಳು ಸೇರಿದೆ. ಪೊಲೀಸ್ ವಸತಿಗಾಗಿ ರಾಜ್ಯ ಸರ್ಕಾರವು ಕರ್ನಾಟಕ ಪೊಲೀಸ್ ವಸತಿ ನಿಗಮದ ಮೂಲಕ ತನ್ನ ಪಾಲಿನ ಅನುದಾನವನ್ನು ನೀಡುತ್ತಿದೆ. ಮುಂಬರುವ ವರ್ಷದಲ್ಲಿ ರಾಜ್ಯವು ಪೊಲೀಸ್ ಪಡೆಯ ಆಧುನೀಕರಣಕ್ಕಾಗಿ 135 ಕೋಟಿ ರೂ.ಗಳನ್ನು ವೆಚ್ಚ ಮಾಡಲಿದೆ. ಇದರಲ್ಲಿ ರಾಜ್ಯದ ಕೊಡುಗೆ 60 ಕೋಟಿ ರೂ.ಗಳಾಗಿದೆ.

144. ಕಳೆದ ಮುಂಗಡ ಪತ್ರದಲ್ಲಿ ನಾನು ವಾಗ್ದಾನ ನೀಡಿದ್ದಂತೆ 'ಭೂಮಿ' ಕಾರ್ಯಕ್ರಮವು ರಾಜ್ಯದ ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯಾರಂಭ ಮಾಡಿದೆ. ಇಡೀ ರಾಷ್ಟ್ರದಲ್ಲಿ ಇಂತಹ ಅಪರೂಪದ ಸಾಧನೆ ಮಾಡಿರುವ ರಾಜ್ಯ ಕರ್ನಾಟಕ ಒಂದೇ ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಹೆಮ್ಮೆಯೆನಿಸುತ್ತದೆ.

145. 2002-03ನೇ ಸಾಲಿನಲ್ಲಿ 10 'ಭೂಮಿ' ಜಿಲ್ಲಾ ಮಾಹಿತಿ ಕೇಂದ್ರಗಳು ಕಾರ್ಯಾರಂಭ ಮಾಡಲಿದ್ದು ಆ ಜಿಲ್ಲೆಯ ಎಲ್ಲಾ ಭೂದಾಖಲೆಗಳು ಇಲ್ಲಿ ದೊರೆಯಲಿವೆ. ಈ 'ಭೂಮಿ' ಮಾಹಿತಿ ಕೇಂದ್ರಗಳಿಂದ ಪ್ರಮುಖ ಸಾಲ ನೀಡಿಕೆ ಸಂಸ್ಥೆಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸುವ ಪ್ರಯತ್ನಗಳನ್ನು ನಡೆಸಲಾಗುವುದು.

146. ತಾಲ್ಲೂಕು ಮಟ್ಟದಲ್ಲಿ 'ಭೂಮಿ' ಕಾರ್ಯಕ್ರಮದ ಯಶಸ್ಸಿನ ನಂತರ ಹೋಬಳಿ ಮಟ್ಟಕ್ಕೂ ಇದನ್ನು ವಿಕೇಂದ್ರೀಕರಿಸಬೇಕೆಂದು ಒತ್ತಾಯ ಹಲವಾರು ವಲಯಗಳಿಂದ ಕೇಳಿಬರುತ್ತಿದೆ. ಅದರಂತೆ, 'ಭೂಮಿ' ಯೋಜನೆಯನ್ನು ಆಯ್ದ 100 ಹೋಬಳಿಗಳಿಗೆ ಖಾಸಗಿ ವಲಯದ ಪಾಲುದಾರಿಕೆಯೊಂದಿಗೆ ವಿಕೇಂದ್ರೀಕರಿಸಲಾಗುವುದು.

147. ಎಲ್ಲ ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಒಪ್ಪಿಕೊಳ್ಳಲಾಗುವುದು. ಇದಕ್ಕಾಗಿ ಪ್ರಸ್ತುತ ಜಾರಿಯಲ್ಲಿರುವ ಮಾರ್ಗದರ್ಶಿ ಸೂತ್ರಗಳನ್ನು ಮಾರ್ಪಡಿಸಲಾಗುವುದು.

148. ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524.256 ಮೀಟರುಗಳಿಗೆ ಏರಿಸುವ ತನ್ನ ನಿರ್ಧಾರಕ್ಕೆ ಸರ್ಕಾರವು ಬದ್ಧವಾಗಿದೆ. ರಾಜ್ಯವು ಕೃಷ್ಣಾ ನದಿ ನೀರಿನಲ್ಲಿ ತನ್ನ ನ್ಯಾಯಬದ್ಧ ಪಾಲನ್ನು ಪಡೆಯಲು ಹಾಗೂ ಹೆಚ್ಚುವರಿ ನೀರಿನ ಹಂಚಿಕೆ ಮಾಡಲು ನ್ಯಾಯ ಮಂಡಳಿಯನ್ನು ರಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಿದೆ. 525 ಮೀಟರ್‌ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲಕೋಟೆಯ ಭಾಗಗಳನ್ನು ಭಾದಿತ ಪ್ರದೇಶ ಎಂದು ಪರಿಗಣಿಸಲಾಗುವುದು. ಭಾದಿತ ಪ್ರದೇಶಗಳನ್ನು ಹಂತ ಹಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದು. 525 ಮೀಟರಿಗಿಂತ ಹೆಚ್ಚಿನ ಮಟ್ಟದಲ್ಲಿಯ ನಗರದ ಭಾಗಗಳು ಅಭಿವೃದ್ಧಿಯಿಂದ ವಂಚಿತವಾಗದಂತೆ ಹಾಲಿ ಜಾರಿಯಲ್ಲಿರುವ ನಿಯಮಗಳನ್ನು ಸಡಿಲಗೊಳಿಸಲಾಗುವುದು.

149. ಸಾರ್ವಜನಿಕರಿಂದ ಖೋಟಾ ಛಾಪಾ ಕಾಗದಗಳ ಬಳಕೆಯಾಗುವುದನ್ನು ತಡೆಗಟ್ಟಲು ಅನುವಾಗುವಂತೆ ಕರ್ನಾಟಕ ಸ್ಟಾಂಪ್ ಕಾಯಿದೆ 1957ಕ್ಕೆ ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಈಗ ಸ್ಟಾಂಪ್ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಮತ್ತು ಖಜಾನೆಯ ಚಲನ್ ಮೂಲಕ ಪಾವತಿಸಬಹುದಾಗಿದೆ. ಆದ್ದರಿಂದ ಛಾಪಾ ಕಾಗದದ ಬಳಕೆ ಈಗ ಕಡ್ಡಾಯವೇನೂ ಅಲ್ಲ. ದಾಖಲೆಗಳನ್ನು ಬಿಳಿ ಹಾಳೆಯ ಮೇಲೆ ಬರೆದು ನಂತರ ಅಗತ್ಯ ಶುಲ್ಕ ಪಾವತಿ ಮಾಡಿ ದಾಖಲೆಗಳನ್ನು ದೃಢೀಕರಿಸಿಕೊಳ್ಳಬಹುದಾಗಿದೆ.

150. ಆದಾಗ್ಯೂ, ನಕಲಿ ಛಾಪಾ ಕಾಗದದ ಚಲಾವಣೆಯನ್ನು ತೊಡೆದುಹಾಕಲು ಮುಂದಿನ ವರ್ಷದಿಂದ ನಾನು ಛಾಪಾ ಕಾಗದಗಳ ಬಳಕೆಯನ್ನೇ ರದ್ದುಗೊಳಿಸಲು ಉದ್ದೇಶಿಸಿದ್ದೇನೆ. ವಿವರಗಳನ್ನು ಮುಂದೆ ನೀಡಲಾಗುವುದು.

151. ಆಡಳಿತ ವೆಚ್ಚವನ್ನು ನಿಯಂತ್ರಿಸುವಲ್ಲಿ ನನ್ನ ಸರ್ಕಾರಕ್ಕೆ ಅಪಾರ ಕಾಳಜಿಯಿದೆ. ಆಡಳಿತ ವೆಚ್ಚ ನಿಯಂತ್ರಣಕ್ಕಾಗಿ ಹಲವಾರು ಅಲ್ಪಾವಧಿ ಕ್ರಮಗಳ ಜೊತೆಗೆ ದೀರ್ಘ ಸುಧಾರಣೆಗಳ ಬಗ್ಗೆ ಸಮಗ್ರ ನಿಲುವನ್ನು ತಳೆಯಲು ಅನುವಾಗುವಂತೆ ಆಡಳಿತ ಸುಧಾರಣಾ ಆಯೋಗವನ್ನು ಸ್ಥಾಪಿಸಲಾಗಿತ್ತು. ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು

ಪರಿಶೀಲಿಸಲಾಗುತ್ತಿದ್ದು ನಾನು ತಕ್ಷಣದಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುತ್ತಿದ್ದೇನೆ.

♦ ಈಗಿರುವಂತೆ ಪ್ರತಿ ಐದು ವರ್ಷಗಳ ಬದಲಿಗೆ ಪ್ರತಿ 10 ವರ್ಷಗಳಿಗೊಮ್ಮೆ ವೇತನ ಆಯೋಗವನ್ನು ರಚಿಸಲಿದೆ.

♦ ಆಡಳಿತದಲ್ಲಿ ಗುಣಮಟ್ಟ ಸುಧಾರಿಸಲು ದಕ್ಷತಾ ಮಟ್ಟ ಗುರುತಿಸುವ ಪರೀಕ್ಷೆಗಳನ್ನು ಜಾರಿಗೊಳಿಸಲಾಗುವುದು.

♦ ಸರಕು ಖರೀದಿ ಇಲಾಖೆಯು ತನ್ನ ಬಳಕೆ ಮೌಲ್ಯವನ್ನು ಕಳೆದುಕೊಂಡಿದ್ದು ನಾನು ಅದನ್ನು ರದ್ದುಗೊಳಿಸಲು ಉದ್ದೇಶಿಸಿದ್ದೇನೆ.

♦ ಸೇವೆಯಲ್ಲಿರುವ ಸರ್ಕಾರಿ ಸಿಬ್ಬಂದಿಗಳಿಗೆ ಸರ್ಕಾರೇತರ ವಲಯಗಳಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗುವುದು. ಸರ್ಕಾರದ ಹೊರಗಡೆಯಿಂದ ವೃತ್ತಿಪರರ ಪ್ರವೇಶಕ್ಕೆ ಉತ್ತೇಜನ ನೀಡಲಾಗುವುದು. ಅಗತ್ಯ ಬಿದ್ದರೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗುವುದು.

♦ ಭಾರತ ಸರ್ಕಾರವು ಸ್ವಯಂ ನಿವೃತ್ತಿ ಯೋಜನೆಯನ್ನು ಘೋಷಿಸಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರದಲ್ಲೂ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗುವುದು.

♦ ಸರ್ಕಾರವು ಮುಂದೆ ರೂಪಿಸಲಿರುವ ನಿಯಮಗಳಿಗೆ ಅನುಸಾರವಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಇಲಾಖೆಗಳಿಗೆ ಉತ್ತೇಜಿಸಲಾಗುವುದು.

♦ ವಿಳಂಬವನ್ನು ತಡೆಗಟ್ಟಲು ಮತ್ತು ಆಡಳಿತವನ್ನು ಹೆಚ್ಚು ಪ್ರತಿಸ್ಪಂದಿಗೊಳಿಸಲು ಅನುವಾಗುವಂತೆ ಕೆಲವು ಆಯ್ದ ಇಲಾಖೆಯ ಆಯುಕ್ತರುಗಳನ್ನು ಸರ್ಕಾರದ ವಿಶೇಷ ಕಾರ್ಯದರ್ಶಿಗಳನ್ನಾಗಿ ನೇಮಿಸಲು ಉದ್ದೇಶಿಸಿದ್ದೇನೆ.

♦ ವಿವಿಧ ಇಲಾಖೆಗಳಲ್ಲಿನ 3962 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಅಗತ್ಯವಾದ ಅಧಿಸೂಚನೆಯನ್ನು ಹೊರಡಿಸಲಾಗುವುದು.

♦ ಶಿಕ್ಷಕರನ್ನು ಹೊರತು ಪಡಿಸಿದ ಇತರೆ ಸರ್ಕಾರಿ ನೌಕರರು ರಾಜ್ಯದ ವೇತನ ಶ್ರೇಣಿಯ ಮೊದಲನೆ ಹನ್ನೊಂದು ಸ್ಥಾನಗಳಲ್ಲಿ ಹುದ್ದೆಗಳನ್ನು ಹೊಂದಿದ್ದು 20 ವರ್ಷಗಳ ಸೇವಾವಧಿಯಲ್ಲಿ ಒಂದೂ ಮುಂಬಡ್ತಿಯನ್ನು ಪಡೆಯದಿದ್ದರೆ ಅವರು 1-4-2002 ರಿಂದ ಅನ್ವಯವಾಗುವಂತೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪಡೆಯಲಿದ್ದಾರೆ.

♦ ದಿನಾಂಕ 1-4-2002 ರಿಂದ ಅನ್ವಯವಾಗುವಂತೆ ಮನೆ ಬಾಡಿಗೆ ಭತ್ಯೆಯನ್ನು ಪರಿಷ್ಕರಿಸಲಾಗುವುದು.

ಎ, ಬಿ, ಬಿ2 ವರ್ಗೀಕೃತ - ಶೇಕಡಾ 11 ರಿಂದ 13

ನಗರಗಳಲ್ಲಿ

ಡಿ ವರ್ಗೀಕೃತ ನಗರಗಳಲ್ಲಿ - ಶೇಕಡಾ 4 ರಿಂದ 5

ಇ ವರ್ಗೀಕೃತ ನಗರಗಳಲ್ಲಿ - ಶೇಕಡಾ 3 ರಿಂದ 4

ಪರಂಪರೆ, ಸಂಸ್ಕೃತಿ ಮತ್ತು ಜೀವನ ವಿಕಾಸ

152. ಮುಂಬರುವ 2006 ನೇ ಇಸವಿಯಲ್ಲಿ ಕರ್ನಾಟಕ ರಾಜ್ಯಕ್ಕೆ 50 ಸಂವತ್ಸರಗಳು ಪೂರ್ಣಗೊಳ್ಳಲಿವೆ. ಇದು ನಮ್ಮೆಲ್ಲರಿಗೂ ಹೆಮ್ಮೆಯ ಕ್ಷಣವಾಗಲಿದೆ. ಈ ಸುವರ್ಣ ಮಹೋತ್ಸವದ ಆಚರಣೆಯನ್ನು ಸ್ಮರಣೀಯವನ್ನಾಗಿಸಲು ನನ್ನ ಅಧ್ಯಕ್ಷತೆಯ ಉನ್ನತ ಅಧಿಕಾರದ ಸಮಿತಿಯು ಅಗತ್ಯ ಚಾಲನೆ ನೀಡಲಿದೆ.

153. ಎಲ್ಲಾ ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ವರ್ಗೀಕರಿಸಿ, ಪಟ್ಟಿ ಮಾಡಿ, ಕಂಪ್ಯೂಟರೀಕರಿಸಿ ಅಂತಿಮವಾಗಿ ಅಂತರಜಾಲದಲ್ಲಿಟ್ಟು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಸುಲಭವಾಗಿ ಮಾಹಿತಿ ದೊರೆಯುವಂತೆ ಮಾಡಲಾಗುವುದು. ಇದೇ ಮಾದರಿಯಲ್ಲಿ ಅಪರೂಪದ ಹಿಂದಿನ ಗೆಜೆಟ್‌ಗಳು, ಪತ್ರಾಗಾರ ಹಾಗೂ ಇತರೆ ಮೌಲಿಕ ಮತ್ತು ಕುತೂಹಲಭರಿತ ದಾಖಲೆಗಳನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸಿ ಅವುಗಳನ್ನು ಅಂತರ್‌ಜಾಲದಲ್ಲಿ ಇಡಲಾಗುವುದು.

154. ಗಡಿನಾಡು ಕನ್ನಡಿಗರ ಅಭಿವೃದ್ಧಿ ಬಗ್ಗೆ ವರದಿ ಸಲ್ಲಿಸಲು ಡಾ॥ ಬರಗೂರು ರಾಮಚಂದ್ರಪ್ಪನವರು ಪಟ್ಟಿರುವ ಪರಿಶ್ರಮಕ್ಕೆ ನಾನು ಪ್ರಶಂಸೆ ವ್ಯಕ್ತಪಡಿಸುತ್ತೇನೆ. ಇದರ ಅನುಷ್ಠಾನದ ಮೇಲುಸ್ತುವಾರಿಯನ್ನು ವಹಿಸಬೇಕೆಂದು ನಾನು ಅವರಲ್ಲಿ ವಿನಂತಿಸುತ್ತೇನೆ.

155. ಆಧುನಿಕ ಪ್ರದರ್ಶನ ಕಲೆಗಳ ದಾಳಿಯಿಂದಾಗಿ ನಮ್ಮ ಪರಂಪರಾಗತ ಸಂಗೀತ ಮತ್ತು ಇತರ ಜನಪದ ಕಲಾ ಪ್ರಾಕಾರಗಳು ಅನಾದರಣೆಗೆ ಒಳಗಾಗಿವೆ. ಇದೇ ಪ್ರವೃತ್ತಿ ಮುಂದುವರಿದರೆ ಇವು ನಶಿಸಿ ಹೋಗುವ ಅಪಾಯವೂ ಇದೆ. ಆದ್ದರಿಂದ ಪರಂಪಾರಿಕ ಕಲಾವಿದರಿಗೆ ಪ್ರೋತ್ಸಾಹ ನೀಡಿ ಈ ಕಲಾ ಪ್ರಾಕಾರಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ಅಗತ್ಯವಾಗಿದೆ. ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ನಾನು 'ಪರಂಪರೆ' ಎನ್ನುವ ನೂತನ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇನೆ.

156. ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 2002-03 ನೇ ಸಾಲಿಗೆ ಒಟ್ಟಾರೆ ಅನುದಾನವನ್ನು 24 ಕೋಟಿ ರೂ.ಗಳಿಂದ 29 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

157. ಪ್ರತಿ ವರ್ಷ 20 ಗುಣಮಟ್ಟದ ಚಲನಚಿತ್ರಗಳಿಗೆ 10 ಲಕ್ಷ ರೂ.ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಚಲನಚಿತ್ರ ಮಾಧ್ಯಮದ ಅತ್ಯುತ್ತಮ ಕಲಾವಿದರು ಮತ್ತು ತಂತ್ರಜ್ಞರನ್ನು ಪ್ರತಿ ವರ್ಷ ಗೌರವಿಸಲಾಗುತ್ತಿದೆ. ಸಂಪೂರ್ಣವಾಗಿ ರಾಜ್ಯದಲ್ಲಿಯೇ ನಿರ್ಮಿಸಿದ ಕನ್ನಡ ಚಲನ ಚಿತ್ರಗಳಿಗೆ ಮನರಂಜನಾ ತೆರಿಗೆ ವಿನಾಯಿತಿಯನ್ನು ನೀಡಲಾಗುತ್ತಿದೆ. ದಿನಾಂಕ 1-4-2002 ರಿಂದ ರಿಮೇಕ್ ಚಲನಚಿತ್ರಗಳು ಮನರಂಜನೆ ತೆರಿಗೆ ವಿನಾಯಿತಿಗೆ ಅರ್ಹತೆ ಪಡೆಯುವುದಿಲ್ಲ.

158. ಸರ್ಕಾರದ ಅಲ್ಪ ಸಂಪನ್ಮೂಲವನ್ನು ಆಯ್ದು ಸ್ಥಳಗಳಲ್ಲಿ ಮಾತ್ರ ವೆಚ್ಚ ಮಾಡಿ ಖಾಸಗಿ ವಲಯದ ಜೊತೆ ಕೈಗೂಡಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸುವುದು ನಮ್ಮ ಕಾರ್ಯತಂತ್ರವಾಗಿದೆ. ಆತಿಥ್ಯದಂತಹ ಕ್ಷೇತ್ರಗಳಿಂದ ಕ್ರಮೇಣ ಹಿಂದೆ ಸರಿದು ಇವುಗಳನ್ನು ಖಾಸಗಿ ವಲಯದ ನಿರ್ವಹಣೆಗೆ ವಹಿಸಿ ಮೂಲ ಸೌಲಭ್ಯಗಳನ್ನು ಸೃಜಿಸುವತ್ತ ಸರ್ಕಾರವು ತನ್ನ ಗಮನ ಕೇಂದ್ರೀಕರಿಸಲಿದೆ. ಪ್ರವಾಸೋದ್ಯಮ ಇಲಾಖೆ ಮತ್ತು ಕೆಎಸ್‌ಟಿಡಿಸಿಗಳು ತಮ್ಮ ವಸತಿ ಸೌಲಭ್ಯಗಳ ನಿರ್ವಹಣೆಯನ್ನು ಖಾಸಗೀಕರಿಸಲು ಆರಂಭಿಸಿದ್ದು ಈ ಕಾರ್ಯಾಚರಣೆಯನ್ನು ಸಂಪೂರ್ಣಗೊಳಿಸಲು ಉದ್ದೇಶಿಸಿವೆ.

159. ಉತ್ತಮ ನಿರ್ವಹಣೆ ಮತ್ತು ಅಭಿವೃದ್ಧಿಗೆ ಅನುಕೂಲವಾಗುವಂತೆ ನಂದಿಬೆಟ್ಟ, ಕೆಮ್ಮಣ್ಣುಗುಂಡಿ ಅತಿಥಿ ಗೃಹಗಳನ್ನು ಮತ್ತು ಬೃಂದಾವನ ಉದ್ಯಾನವನ್ನು ನಾನು ಪ್ರವಾಸೋದ್ಯಮ ಇಲಾಖೆಗೆ ವರ್ಗಾಯಿಸಲು ಉದ್ದೇಶಿಸಿದ್ದೇನೆ. ಗಾಲಿಯ ಮೇಲಿನ ಅರಮನೆಯನ್ನು ಮುಂದಿನ ವರ್ಷದಿಂದ ಕೆಎಸ್‌ಟಿಡಿಸಿ ಮತ್ತು ರೈಲ್ವೇ ಇಲಾಖೆಗಳು ಜಂಟಿ ಸಹಯೋಗದಲ್ಲಿ ನಡೆಸಲು ಸರ್ಕಾರ ಉದ್ದೇಶಿಸಿದೆ.

160. ವನ್ಯಜೀವಿ ಮತ್ತು ಕರಾವಳಿ ಸಂಚಾರ ಪ್ರವಾಸಗಳನ್ನು ಪ್ರೋತ್ಸಾಹಿಸಲಾಗುವುದು. 2002 ನೇ ವರ್ಷವನ್ನು ಪರಿಸರ-ಪ್ರವಾಸೋದ್ಯಮ ವರ್ಷ ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಘೋಷಿಸಲಾಗಿದೆ. ಈ ವಲಯದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವಂತಹ ಚಟುವಟಿಕೆಗಳಿಗೆ ಚಾಲನೆ ನೀಡಲು ನಾವು ಉದ್ದೇಶಿಸಿದ್ದೇವೆ.

161. ಭಾರತ ಸರ್ಕಾರವು ಹಂಪೆಯನ್ನು ಅಂತರರಾಷ್ಟ್ರೀಯ ತಾಣವನ್ನಾಗಿ ಅಭಿವೃದ್ಧಿಪಡಿಸುವುದಾಗಿ ಘೋಷಿಸಿದೆ. ನಾವು ಹಂಪೆಯ ಸಮಗ್ರ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಹಂಪಿ ಜಾಗತಿಕ ಪರಂಪರಾ ನಿರ್ವಹಣಾ ಪ್ರಾಧಿಕಾರವನ್ನು ಸ್ಥಾಪಿಸಲಿದ್ದೇವೆ.

162. ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡಲು ನಾನು 2002-03ನೇ ಸಾಲಿನಲ್ಲಿ ಅನುದಾನ ಹಂಚಿಕೆಯನ್ನು 12 ಕೋಟಿ ರೂ.ಗಳಿಂದ 18 ಕೋಟಿ ರೂ.ಗಳಿಗೆ ಏರಿಸುತ್ತಿದ್ದೇನೆ.

163. ಗೌರವಾನ್ವಿತ ಸದಸ್ಯರೆ, ನಾನು ಈಗಾಗಲೆ ಹೇಳಿರುವಂತೆ ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯ ಉತ್ಕೃಷ್ಟತೆಗೆ ಅನುಗುಣವಾಗಿ ಮಾನವೀಯ, ಸಮೃದ್ಧಶೀಲ ಮತ್ತು ಕರುಣಾಪೂರಿತ ಸಮಾಜ ನಿರ್ಮಾಣ ನನ್ನ ಸರ್ಕಾರದ ಆಶಯವಾಗಿದ್ದು ಈ ಗುರಿ ಸಾಧನೆಗೆ ನಾನು ನಿಮ್ಮೆಲ್ಲರ ಬೆಂಬಲ ಮತ್ತು ಸಹಕಾರವನ್ನು ಕೋರುತ್ತೇನೆ.

164. ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ.

165. ಮಧ್ಯಮ ಅವಧಿಯ ಆರ್ಥಿಕ ಯೋಜನೆಯಲ್ಲಿ ಹೇಳಿದಂತೆ (ಮೀಡಿಯಂ ಟರ್ಮ್ ಫಿಸ್ಕಲ್ ಪ್ಲಾನ್) ಆರ್ಥಿಕ ಸಮತೋಲನವನ್ನು ಸಾಧಿಸುವಲ್ಲಿ ಸಮಗ್ರ ತೆರಿಗೆ ಸುಧಾರಣೆಗಳ ಮೂಲಕ ತೆರಿಗೆಯ ಪ್ಲವನತೆಯ ಸುಧಾರಣೆಯು ಒಂದು ನಿರ್ಣಾಯಕ ಹೆಜ್ಜೆಯಾಗಿದೆ. ಇಲ್ಲಿ ಗಮನ ಹರಿಸಬೇಕಾದ ಸೂಕ್ಷ್ಮ ವಿಷಯಗಳೆಂದರೆ - ವಿಸ್ತಾರದಲ್ಲಿ ಸುಧಾರಣೆ ಹಾಗೂ ವಿನಾಯಿತಿಗಳನ್ನು ಕಡಿಮೆ ಮಾಡುವುದರ ಮೂಲಕ ತೆರಿಗೆ ಮೂಲ

ವಿಸ್ತರಿಸುವುದು ತೆರಿಗೆ ರಚನೆಯನ್ನು ಸುಧಾರಣಗೊಳಿಸಿ ತೆರಿಗೆ ಪಾಲನೆಯನ್ನು ಹೆಚ್ಚಿಸುವುದು ಮತ್ತು ತೆರಿಗೆ ಆಡಳಿತ ಹಾಗೂ ಜಾರಿ ಕ್ರಮಗಳನ್ನು ಬಲಗೊಳಿಸುವುದು. ತೆರಿಗೆ ಸುಧಾರಣಾ ಆಯೋಗವು ಎರಡು ವರದಿಗಳನ್ನು ಸಲ್ಲಿಸಿದ್ದು ಅವು ಅನೇಕ ಉಪಯುಕ್ತ ಹಾಗೂ ಪ್ರಾಯೋಗಿಕ ಶಿಫಾರಸ್ಸುಗಳನ್ನು ಒಳಗೊಂಡಿವೆ. ಈ ಸಲಹೆಗಳ ಮತ್ತು ಇತರೆ ಪ್ರತಿಕ್ರಿಯೆಗಳ ಆಧಾರದ ಮೇಲೆ ನಾವು ತೆರಿಗೆ ರಚನೆಯನ್ನು ಸರಳವಾಗಿಸುವ ಹಾಗೂ ಸುಧಾರಣೆಗೊಳಿಸಿ ತೆರಿಗೆ ಪದ್ಧತಿಯನ್ನು ಹೆಚ್ಚು ಬಳಕೆದಾರ-ಮೈತ್ರಿಯುತವಾಗಿಯೂ ಮತ್ತು ಸ್ವಯಂ ಪಾಲನಾ ಉತ್ತೇಜಕವಾಗಿ ಮಾಡುತ್ತಾ ತೆರಿಗೆ ಆದಾಯದ ವೃದ್ಧಿಯನ್ನು ಹೆಚ್ಚಿಸಲು ಈಗ ಮಂಡಿಸುವ ಪ್ರಸ್ತಾವನೆಗಳನ್ನು ರೂಪಿಸಿದ್ದೇವೆ.

ವಾಣಿಜ್ಯ ತೆರಿಗೆಗಳು :

166. ವಾಣಿಜ್ಯ ತೆರಿಗೆ ಆದಾಯವು ರಾಜ್ಯದ ಆದಾಯದ ಪ್ರಮುಖ ಮೂಲವಾಗಿ ಮುಂದುವರಿದಿದೆ. ಈ ತೆರಿಗೆ ಆದಾಯವನ್ನು ಹೆಚ್ಚು ಉತ್ಪಾದಕತೆ ಹೊಂದುವಂತೆ ಹಾಗೂ ಆರ್ಥಿಕ ಆಯ್ಕೆಗಳ ಮೇಲೆ ಈ ತೆರಿಗೆಗಳ ಪ್ರಭಾವವನ್ನು ಕಡಿಮೆ ಮಾಡಲು ಹಾಗೂ ತನ್ಮೂಲಕ ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಹಿನ್ನಡೆ ಉಂಟಾಗದಂತೆ ನೋಡಿಕೊಳ್ಳಲು ಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವದು ನಮ್ಮ ಪ್ರಯತ್ನವಾಗಿದೆ. ನಾವು ತೆರಿಗೆ ವಿಧಾನವನ್ನು ಸರಳ ಹಾಗೂ ಪಾರದರ್ಶಕಗೊಳಿಸಬೇಕಿದೆ. ತೆರಿಗೆ ವಿಧಾನಗಳನ್ನು ಸರಳೀಕರಿಸಲು ಯೋಗ್ಯ ವಲಯಗಳಿಗೆ ತೆರಿಗೆ ರಿಯಾಯಿತಿ ನೀಡಲು ಹಾಗೂ ವ್ಯಾಪಾರ ಉದ್ದಿಮೆಗಳು ಅತೀ ಕಡಿಮೆ ವೆಚ್ಚದಲ್ಲಿ ತೆರಿಗೆ ಸ್ವಯಂ ಪಾಲನೆಯನ್ನು ಅನುಸರಿಸಲು ಉತ್ತೇಜಿಸುವ ಪರಿಸರವನ್ನುಂಟು ಮಾಡಲು ನಾವು ಪ್ರಯತ್ನಿಸಿದ್ದೇವೆ. ಆಂತರಿಕ ಪರೋಕ್ಷ ತೆರಿಗೆಗಳ ವ್ಯವಸ್ಥೆ ಸುಧಾರಣೆ ತರಲು ರಾಷ್ಟ್ರೀಯ ಮಟ್ಟದಲ್ಲಿ ಮಾಡಿದ ಪ್ರಯತ್ನಗಳು ಒಂದು ನಿರ್ಣಾಯಕ ಹಂತವನ್ನು ತಲುಪಿವೆ. ಕನಿಷ್ಟ ತೆರಿಗೆ ದರಗಳನ್ನು ಅರ್ಥವತ್ತಾಗಿಸಲು ಹಾಗೂ ರಾಜ್ಯ ರಾಜ್ಯಗಳ ಮಧ್ಯೆ ಅಂತರ ರಾಜ್ಯ ವ್ಯಾಪಾರದಲ್ಲಿ ಅಹಿತಕರ ತೆರಿಗೆ ದರಗಳ ಯುದ್ಧವನ್ನು ತಗ್ಗಿಸಲು ಮತ್ತು ರಾಜ್ಯಗಳ ವಿತ್ತ ಮಂತ್ರಿಗಳ ಪ್ರದತ್ತ ಅಧಿಕಾರ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಅಂಗೀಕರಿಸಿ ಕೇಂದ್ರ ಸರ್ಕಾರವು ಕೇಂದ್ರ ಮಾರಾಟ ತೆರಿಗೆ ಕಾನೂನಿಗೆ ತಿದ್ದುಪಡಿ ಮಾಡಲು ಪ್ರಸ್ತಾಪಿಸಿದೆ.

167. ಮಾನ್ಯ ಸಭಾಧ್ಯಕ್ಷರೇ, ಕೇಂದ್ರ ಮಾರಾಟ ತೆರಿಗೆ ಕಾನೂನಿನ ತಿದ್ದುಪಡಿ ಮಾಡುವುದರಲ್ಲಿ ಆದ ವಿಳಂಬವು ಮೌಲ್ಯವರ್ಧಿತ ತೆರಿಗೆ ಪದ್ಧತಿ ಅನುಷ್ಠಾನವನ್ನು ಹಿಂದೆ ನಿರ್ಣಯಿಸಿದ ಏಪ್ರಿಲ್ 2002 ರಿಂದ ಏಪ್ರಿಲ್ 2003 ಕ್ಕೆ ಮುಂದೂಡುವದಕ್ಕೆ ಇರುವ ಕಾರಣಗಳಲ್ಲಿ ಒಂದಾಗಿದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ರಾಜ್ಯದ ಆಂತರಿಕ ಆರ್ಥಿಕ ವರಮಾನದಲ್ಲಿ ತೃತೀಯ ಆರ್ಥಿಕ ವಲಯದ ಪಾಲು ಏರುತ್ತಿದೆ. ಈ ವಲಯದಿಂದ ರಾಜಸ್ವವನ್ನು ಸೇವಾ ತೆರಿಗೆ ಮೂಲಕ ಮಾತ್ರ ವೃದ್ಧಿಸುವ ಸಾಧ್ಯವಿದೆ. ಏಪ್ರಿಲ್ 2003 ರಿಂದ ಜಾರಿಗೆ ಬರಲಿರುವ ಮೌಲ್ಯವರ್ಧಿತ ತೆರಿಗೆ ಪದ್ಧತಿ ಅಡಿಯಲ್ಲಿ ರಾಜ್ಯಗಳು ಸೇವೆಗಳನ್ನು ಕೂಡ ತರಲು ಮತ್ತು ಈ ತೆರಿಗೆ ಆದಾಯವನ್ನು ರಾಜ್ಯಗಳೇ ಇಟ್ಟುಕೊಳ್ಳಲು ಕೇಂದ್ರ ಸರ್ಕಾರವನ್ನು ಕೋರುತ್ತೇನೆ. ತೆರಿಗೆ ಆದಾಯದಲ್ಲಿ ವೃದ್ಧಿಯಲ್ಲಿ ಕಾಣುತ್ತಿರುವ

ಹಿನ್ನಡೆಯನ್ನು ತಡೆಗಟ್ಟುವುದರಲ್ಲಿ ಇದು ಸಹಾಯಕ್ಕೆ ಬರುತ್ತದೆ. ವಿವಿಧ ಹಂತಗಳಲ್ಲಿ ಸರಕುಗಳ ಮೌಲ್ಯದ ವರ್ಧನೆಯಲ್ಲಿ ಸೇವೆಗಳು ಗಣನೀಯ ಪಾತ್ರ ಹೊಂದಿರುವುದರಿಂದ ಇದು ತಾರ್ಕಿಕವಾಗಿರುವುದಲ್ಲದೆ ಒಂದು ಸಂಪೂರ್ಣ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ತರಲು ಅನುಕೂಲವಾಗುತ್ತದೆ. ರಾಜ್ಯವು ಮೌಲ್ಯವರ್ಧಿತ ತೆರಿಗೆ ಪದ್ಧತಿ ಅನುಷ್ಠಾನಗೊಳಿಸುವತ್ತ ಸುಭದ್ರ ಹೆಜ್ಜೆಗಳನ್ನು ಇಡುತ್ತಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಯಶಸ್ವಿ ಮೌಲ್ಯವರ್ಧಿತ ತೆರಿಗೆ ಪದ್ಧತಿ ಅನುಷ್ಠಾನಕ್ಕಾಗಿ ಸೂಕ್ತ ಅಡಿಪಾಯ ನಿರ್ಮಿಸಲು ರಾಜ್ಯ ಸರ್ಕಾರವು ವಿಶ್ವ ಬ್ಯಾಂಕ್‌ನಿಂದ ಪಡೆದ ತಾಂತ್ರಿಕ ಬೆಂಬಲವು ಅತ್ಯಂತ ಸಹಾಯಕಾರಿಯಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಪರಿಣಿತರಿಂದ ಮೌಲ್ಯವರ್ಧಿತ ತೆರಿಗೆಯ ವ್ಯವಹಾರ ಕ್ರಮಗಳು, ನಿರ್ವಹಣಾ ಬದಲಾವಣೆ, ಸುಧಾರಣೆ ಇತ್ಯಾದಿಗಳಲ್ಲಿ ಪರಿಣಿತಿಯ ಸುಧಾರಣೆ ಇತ್ಯಾದಿಗಳಲ್ಲಿ (ಮನೋಭಾವ ಹಾಗೂ ವರ್ತನೆಗಳನ್ನು ಸೇರಿ) ತರಬೇತಿ ನೀಡಲಾಗುತ್ತಿದೆ. ಮಾದರಿ ಮೌಲ್ಯವರ್ಧಿತ ತೆರಿಗೆ ಕಾನೂ ನನ್ನು ಹೊರತರಲಾಗಿದೆ. ಇದು ವಾಣಿಜ್ಯ ಮತ್ತು ಉದ್ಯಮ ವಲಯಗಳಿಂದ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಪಡೆದಿದೆ. ಪ್ರಸ್ತಾಪಿತ ವ್ಯಾಟ್ ಪದ್ಧತಿಯ ವಿನ್ಯಾಸವನ್ನು ತೋರಿಸುವ ಒಂದು ವ್ಯಾಟ್ ಕಾರ್ಯ ನೀತಿಯ ಕರಡು ಪ್ರತಿಯನ್ನು ಸನ್ಮಾನ್ಯ ಸದಸ್ಯರಲ್ಲಿ ಅವರ ಅಮೂಲ್ಯ ಸಲಹೆಗಳಿಗಾಗಿ ವಿತರಿಸಲಾಗುವುದು.

168. ಈ ವರ್ಷದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ನಾಗರಿಕರ ಸನ್ನದು(ಸಿಟಿಝುನ್ಸ್ ಚಾರ್ಟರ್) ಒಂದನ್ನು ಹೊರತರಲಿದೆ. ಇದು ವ್ಯಾಪಾರ ಮತ್ತು ಉದ್ದಿಮೆಗಳು ಇಲಾಖೆಯಿಂದ ಆಪೇಕ್ಷಿಸಬಹುದಾದ ಸೇವೆಗಳ ಸ್ಪಷ್ಟ ವಿವರಗಳನ್ನು ಒಳಗೊಂಡಿರುತ್ತದೆ.

169. ಕಳೆದ ವರ್ಷ ನಾನು ತೆರಿಗೆಯ ರಚನೆಯನ್ನು ಸುಧಾರಣೆಗೊಳಿಸಲು ಹಾಗೂ ವ್ಯಾಟ್ ಅನುಷ್ಠಾನಕ್ಕೆ ವಾತಾವರಣ ಸೃಷ್ಟಿಸಲು ಕೆಲವು ಕ್ರಮಗಳನ್ನು ಜಾರಿ ಮಾಡಿದ್ದೆ. ಸ್ವಯಂ ಕರನಿರ್ಧರಣೆ ಯೋಜನೆ ಹಾಗೂ ವಾರ್ಷಿಕ ನಮೂನೆಗಳ ಒಂದು ಬಾರಿ ಅಂಗೀಕಾರ ಯೋಜನೆಗಳು ವ್ಯಾಪಾರಿ ವೃಂದದಿಂದ ಸ್ವಾಗತಿಸಲ್ಪಟ್ಟಿವೆ ಮತ್ತು ಕರನಿರ್ಧರಣೆ ಬಾಕಿಯನ್ನು ಕಡಿಮೆಗೊಳಿಸುವ ಉದ್ದೇಶವನ್ನು ಸಫಲವಾಗಿಸಿವೆ. ಈ ವರ್ಷ ನಾನು ತೆರಿಗೆ ವಿಧಿಸುವಿಕೆ ಹಾಗೂ ಅದರ ನಿರ್ವಹಣೆ ವಿಷಯಗಳಲ್ಲಿ ಗಣನೀಯ ಸುಧಾರಣೆ ಕ್ರಮಗಳನ್ನು ಪ್ರಸ್ತಾಪಿಸುತ್ತೇನೆ.

ಮಾರಾಟ ತೆರಿಗೆ

ಸುಧಾರಣೆ ಕ್ರಮಗಳು

ವಿವಿಧ ತೆರಿಗೆಗಳ ರದ್ದತಿ

170. ವಹಿವಾಟು ತೆರಿಗೆ ರದ್ದತಿಯು ವ್ಯಾಪಾರ ಮತ್ತು ಉದ್ದಿಮೆಗಳ ಬಹುಕಾಲದ ಬೇಡಿಕೆಯಾಗಿದೆ. ಏರು ದರಗಳ ಮತ್ತು ವಸೂಲು ಮಾಡಲಾಗದ ಹಾಗೂ ಈ ತೆರಿಗೆಯು ವ್ಯಾಪಾರದ ಸಹಜ ಸಾಮಾನ್ಯ ಬೆಳವಣಿಗೆಗೆ ತಡೆಯಾಗಿದೆ ಹಾಗೂ ಕಡಿಮೆ ಮತ್ತು ನಿಗದಿತ ಲಾಭಾಂಶ ಇರುವ ಎರಡನೇ ಹಾಗೂ ತದನಂತರದ ವರ್ತಕರ ಮೇಲೆ

ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ವಾದಿಸಲಾಗುತ್ತಿದೆ. ಅದೇ ರೀತಿ ಸೆಸ್ ಮತ್ತು ಪ್ರವೇಶ ತೆರಿಗೆಗಳನ್ನು ಮಾರಾಟ ತೆರಿಗೆ ಜೊತೆಗೆ ವಿಲೀನಗೊಳಿಸುವ ಮೂಲಕ ರದ್ದುಗೊಳಿಸುವ ಕೋರಿಕೆಗಳು ಇವೆ. ಸೆಸ್ ಒಂದು ತೊಡೆದುಹಾಕಬಹುದಾದ ಅಧಿಕ ತೆರಿಗೆಯಾಗಿದ್ದು, ಕಚ್ಚಾ ವಸ್ತುಗಳ ಮೇಲಿನ ಪ್ರವೇಶ ತೆರಿಗೆಯು ಕ್ಯಾಸ್ಕೇಡಿಂಗ್ (ತೆರಿಗೆಯ ಮೇಲೆ ತೆರಿಗೆ ಬೀಳುವ) ಪರಿಣಾಮ ಬೀರುತ್ತದೆ ಎಂದು ವಾದಿಸಲಾಗುತ್ತಿದೆ. ತೆರಿಗೆ ಸುಧಾರಣಾ ಆಯೋಗವೂ ಸಹ ಮಾರಾಟ ತೆರಿಗೆ ದರಗಳ ಸಮನ್ವಯೀಕರಣ ಹಾಗೂ ತೆರಿಗೆಗಳ ವಿಲೀನಗಳನ್ನು ಶಿಫಾರಸ್ಸು ಮಾಡಿದೆ.

171. ನಾನು ಈ ವಿಷಯವನ್ನು ಬಹು ಎಚ್ಚರದಿಂದ ಪರಿಶೀಲಿಸಿದ್ದೇನೆ. ವಿವಿಧ ತೆರಿಗೆಗಳನ್ನು ರದ್ದು ಮಾಡುವುದು, ಹಾಗೂ ಸರಳೀಕರಣಗೊಳಿಸುವ ಕ್ರಮಗಳು ಮೌಲ್ಯವರ್ಧಿತ ತೆರಿಗೆ ಪದ್ಧತಿಯ ಅನುಷ್ಠಾನದ ಮೊದಲೇ ಆಗಬೇಕಿದೆ. ಸ್ವಯಂ ತೆರಿಗೆ ಪಾಲನೆಯನ್ನು ಪ್ರೋತ್ಸಾಹಿಸಲು, ಆರ್ಥಿಕ ಚಟುವಟಿಕೆಗಳನ್ನು ಬೆಳಸಲು ಹಾಗೂ ಭಾವೀ ಬಂಡವಾಳದಾರರನ್ನು ಆಕರ್ಷಿಸಲು ನಾವು ಈಗ ನಮ್ಮ ತೆರಿಗೆಗಳನ್ನು ಪಾರದರ್ಶಕ ಹಾಗೂ ಸರಳಗೊಳಿಸುವ ಕಾಲ ಬಂದಿದೆ. ಈ ದಿಸೆಯಲ್ಲಿ ನಾನು ವಹಿವಾಟು ತೆರಿಗೆ ಹಾಗೂ ಸೆಸ್ ರದ್ದತಿಯನ್ನು ಪ್ರಸ್ತಾಪಿಸಲು ಸಂತೋಷಪಡುತ್ತೇನೆ. ತಂಬಾಕು ಉತ್ಪನ್ನಗಳಲ್ಲಿ ಮತ್ತು ಮದ್ಯಪಾನೀಯಗಳಲ್ಲಿ ಉಪಯೋಗಿಸುವ ಕಚ್ಚಾ ಸಾಮಗ್ರಿಯನ್ನು ಹೊರತುಪಡಿಸಿ ಇತರೆ ಎಲ್ಲಾ ಕಚ್ಚಾ ಸಾಮಗ್ರಿಗಳ ಮೇಲೆ ವಿಧಿಸಲಾಗುತ್ತಿರುವ ಶೇಕಡ 1 ಪ್ರವೇಶ ತೆರಿಗೆಯನ್ನು ರದ್ದು ಮಾಡಲು ಕೂಡ ನಾನು ಪ್ರಸ್ತಾಪಿಸುತ್ತೇನೆ. ಅಲ್ಲದೆ ಪ್ಯಾಕಿಂಗ್ ವಸ್ತುಗಳ ಮೇಲಿನ ಪ್ರವೇಶ ತೆರಿಗೆಯನ್ನು ರದ್ದುಗೊಳಿಸಲು ನಾನು ಪ್ರಸ್ತಾಪಿಸುತ್ತೇನೆ.

172. ಈ ಮೇಲಿನ ಪ್ರಸ್ತಾವನೆಗಳ ಕಾರಣದಿಂದಾಗಿ ಸರಕುಗಳ ಮರು ವಿಂಗಡಣೆ ಹಾಗೂ ತೆರಿಗೆ ದರಗಳ ಸಮನ್ವಯೀಕರಣ ಅವಶ್ಯವಾಗುತ್ತದೆ. ಚಿನ್ನ ಮತ್ತು ಬೆಳ್ಳಿಯ ಗಟ್ಟಿ ಹಾಗೂ ಬೆಲ್ಲದ ಮೇಲೆ ಶೇಕಡ 1 ರಂತೆ ಮತ್ತು ಪೆಟ್ರೋಲ್ ಮತ್ತು ಡೀಸಲ್ ಮೇಲಿನ ತೆರಿಗೆಯನ್ನು ಹೆಚ್ಚಿನ ದರದಲ್ಲಿ ಮುಂದುವರಿಸುತ್ತಾ ಶೇಕಡ 10 ರ ತೆರಿಗೆ ದರವನ್ನು ರದ್ದುಗೊಳಿಸಲು ಹಾಗೂ ಬಹುತೇಕ ಸರಕುಗಳನ್ನು ಶೇಕಡ 2, 4, 8, 12 ಮತ್ತು 15 ತೆರಿಗೆ ದರದ ವರ್ಗಗಳಲ್ಲಿ ಮರುವಿಂಗಡಿಸಲು ಪ್ರಸ್ತಾಪಿಸುತ್ತೇನೆ. ಕೆಲವೇ ಸರಕುಗಳನ್ನು ಶೇಕಡ 20 ರ ದರದ ಗುಂಪಿನಲ್ಲಿ ಇರಿಸಲು ಪ್ರಸ್ತಾಪಿಸಿದೆ. ತಂಬಾಕು ಉತ್ಪನ್ನಗಳು, ಮಾದಕ ವಸ್ತುಗಳಂತಹ ಕೆಲವು ಸರಕುಗಳನ್ನು ಶೇಕಡ 25ರ ಗುಂಪಿನಲ್ಲಿ ವರ್ಗೀಕರಿಸಲು ಪ್ರಸ್ತಾಪಿಸಿದೆ. ಈ ಪ್ರಸ್ತಾವಿತ ಬದಲಾವಣೆ ದರಗಳನ್ನು ಅನುಬಂಧ 1 ರಲ್ಲಿ ತೋರಿಸಿದೆ.

173. ತೆರಿಗೆ ದರಗಳ ಈ ಮರುನಿಷ್ಕರಣೆಯಲ್ಲಿ ನಾನು ಸಾಮಾನ್ಯ ಸರಕುಗಳಾದ ಗೋಧಿಹಿಟ್ಟು, ಮೈದಾ, ಮತ್ತು ರವೆ, ಒಣಮೆಣಸಿನಕಾಯಿ, ಛತ್ರಿ, ಸೌದೆ, ಇದ್ದಿಲು, ತೆಂಗಿನನಾರಿನ ಉತ್ಪನ್ನಗಳು, ಖಾದ್ಯ ತೈಲ, ಅಗರ ಬತ್ತಿ, ಕಡ್ಡಿಪೆಟ್ಟಿಗೆ, ಟೂತ್ ಪೇಸ್ಟ್, ಟೂತ್ ಪೌಡರ್, ಬೈಸಿಕಲ್, ಮುಂತಾದವುಗಳ ಮೇಲಿನ ಪ್ರಸ್ತುತ ಮೂಲ ತೆರಿಗೆ ದರಗಳನ್ನು ಬದಲಾಯಿಸಿಲ್ಲ. ಅದರಂತೆ ಕೃಷಿ ಸಂಬಂಧಿತ ಸರಕುಗಳಾದ ಅಡಿಕೆ, ಕಾಫಿ

ಬೀಜ, ರಾಸಾಯನಿಕ ಗೊಬ್ಬರಗಳು, ಕೀಟ ನಾಶಕಗಳು, ಟ್ರಾಕ್ಟರ್ ಸಹಿತ ಕೃಷಿ ಉಪಕರಣಗಳು ಮೇಲಿನ ಕಡಿಮೆ ತೆರಿಗೆ ದರಗಳನ್ನು ಮುಂದುವರಿಸಲು ನಾನು ಪ್ರಸ್ತಾವಿಸುತ್ತೇನೆ. ಮೂಲತಃ ಕಚ್ಚಾ ಸಾಮಗ್ರಿಗಳಾಗಿ ಉಪಯೋಗಿಸಲ್ಪಡುವ. ಚಿಕೋರಿ, ತಾಮ್ರದ ಗಟ್ಟಿಗಳು, ಅದಿರುಗಳು, ಕೋಕೋ ಕಾಯಿ, ಬೀಜ ಹಾಗೂ ಪುಡಿ, ಹಾಗೂ ಹುಣಿಸೆ ಹಣ್ಣು, ಇತ್ಯಾದಿಗಳ ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ ಇಳಿಸಲು ನಾನು ಪ್ರಸ್ತಾಪಿಸುತ್ತೇನೆ. ಇದರಿಂದ ಈ ಸರಕುಗಳ ಮೇಲಿನ ಚಾಲ್ತಿ ತೆರಿಗೆ ದರಗಳನ್ನು ಶೇಕಡ 1.6 ಮತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇಳಿತವಾಗಿದೆ. ಅಲ್ಲದೆ ಒಂದೇ ಪ್ರಕಾರದ ವಸ್ತುಗಳಿದ್ದರೂ ಬೇರೆ ಬೇರೆ ತೆರಿಗೆ ದರಗಳಿರುವ ಕನ್ನಡಕದ ಹಾಗೂ ತಂಪು ಕನ್ನಡಕಗಳು, ಮೋಟಾರು ವಾಹನಗಳ ಎಲ್ಲ ತೆರನ ಬಿಡಿ ಭಾಗಗಳು ಮತ್ತು ಉಪಭಾಗಗಳನ್ನು ಮರುವರ್ಗೀಕರಿಸಿ ಲೆಕ್ಕ ಪತ್ರವಿಡಲು ಅನುಕೂಲವಾಗುವಂತೆ ಒಂದೇ ತೆರಿಗೆ ದರದಡಿಯಲ್ಲಿ ವರ್ಗೀಕರಿಸಲು ನಾನು ಪ್ರಸ್ತಾಪಿಸುತ್ತೇನೆ. ಮಣ್ಣು ಸರಿಸುವ ಯಂತ್ರಗಳು, ಯಂತ್ರೋಪಕರಣಗಳು, ಕಾಗದ, ಮೋಟಾರು ವಾಹನಗಳು ಮತ್ತು ಬಿಡಿಭಾಗಗಳು, ಎಕ್ಸಸರೀಸ್, ಆಡಿಯೋ ಮತ್ತು ವೀಡಿಯೋ ಕ್ಯಾಸೆಟ್ ಗಳಂಥ ತೆರಿಗೆ ಸಂವೇದನಾಶೀಲ ಸರಕುಗಳನ್ನು ಈಗಿನ ತೆರಿಗೆ ದರಗಳಲ್ಲೇ ಮುಂದುವರಿಸಲಾಗಿದೆ. ಆದಾಗ್ಯೂ ಸಿಮೆಂಟ್, ಲಿಫ್ಟ್, ಎಲಿವೇಟರ್ ಗಳಂಥ ಸರಕುಗಳ ಮೇಲೆ ಸದ್ಯದ ತೆರಿಗೆ ದರವನ್ನು ಮುಂದುವರಿಸುವುದಲ್ಲದೆ ವ್ಯಾಪಾರ ಪಲ್ಲಟವಾಗುವದನ್ನು ತಡೆಯಲು ಪ್ರವೇಶ ತೆರಿಗೆಯನ್ನು ವಿಧಿಸಲು ಮತ್ತು ಹೆಚ್ಚಿಸಲು ನಾನು ಪ್ರಸ್ತಾಪಿಸುತ್ತೇನೆ.

174. ಈ ಮೇಲಿನ ಸುಧಾರಣಾ ಕ್ರಮಗಳ ಬೆಲೆ ಸುಮಾರು 200 ಕೋಟಿ ರೂಪಾಯಿಗಳಷ್ಟು ತಗಲುತ್ತದೆ. ಆದಾಗ್ಯೂ ನಮ್ಮ ಸರ್ಕಾರವು ರಾಜ್ಯದ ಆರ್ಥಿಕ ವ್ಯವಸ್ಥೆ ಒಟ್ಟಾರೆ ಹಿತಾಸಕ್ತಿಯ ದೃಷ್ಟಿಯಿಂದ ಸುಧಾರಣೆಗಳನ್ನು ಜಾರಿಗೆ ತರಲು ಬದ್ಧವಾಗಿದೆ.

175. ಪ್ರಸ್ತುತದಲ್ಲಿ ಸರ್ಕಾರಿ ಇಲಾಖೆಗಳು, ಶಾಸನಬದ್ಧ ಮಂಡಳಿಗಳು, ಮತ್ತಿತರ ಸಂಸ್ಥೆಗಳ ಖರೀದಿಗಳ ಮೇಲೆ ಶೇಕಡ 4 ರಂತೆ ತೆರಿಗೆ ಮತ್ತು ಸೆಸ್ ಮತ್ತು ಅಲ್ಲದೆ ಮಾರಾಟಗಾರರು ತೆರುವ ವಹಿವಾಟು ತೆರಿಗೆ ಕೂಡ ಬೀಳುತ್ತದೆ. (ಚಾಲ್ತಿ ತೆರಿಗೆ ದರವು ಶೇಕಡ 5.7 ರಿಂದ ಶೇಕಡ 7.2 ರವರೆಗೆ ಇರುತ್ತದೆ) ಆದರೂ ಸ್ಥಳೀಯ ಖರೀದಿಗಳನ್ನು ಪ್ರೋತ್ಸಾಹಿಸಲು ವಿವಿಧ ತೆರಿಗೆಗಳನ್ನು ವಿಲೀನಗೊಳಿಸಿ ಅವರ ಖರೀದಿಗಳ ಮೇಲೆ ಶೇಕಡ 5ರ ತೆರಿಗೆ ದರ ನಿಗದಿಪಡಿಸಲು ನಾನು ಪ್ರಸ್ತಾಪಿಸುತ್ತೇನೆ.

176. ಸಾಮಾನ್ಯ ಬಳಕೆಯ ಅನೇಕ ಸರಕುಗಳ ಮೇಲೆ ವಿಧಿಸಲು ಈಗ ಪ್ರಸ್ತಾವಿಸಿದ ತೆರಿಗೆ ದರಗಳು ವಾಸ್ತವಿಕವಾಗಿ ಚಾಲ್ತಿಯಲ್ಲಿರುವ ಈಗಿನ ದರಗಳಿಗಿಂತ ಬಹುಪಾಲು ಕಡಿಮೆಯಾಗಲಿವೆ. ಈ ತೆರಿಗೆ ಇಳಿತದ ಲಾಭಗಳನ್ನು ಬಳಕೆದಾರರಿಗೆ ತಲುಪಿಸುವಂತೆ ನಾನು ವಾಣಿಜ್ಯ ಮತ್ತು ಉದ್ಯಮಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

177. ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಉತ್ಪಾದನೆ ಹಾಗೂ ವಿತರಣೆಯ ಎಲ್ಲಾ ಹಂತಗಳ ಮೇಲೆ ಬಹು ಹಂತದಲ್ಲಿ ತೆರಿಗೆ ವಿಧಿಸಬೇಕಾಗುತ್ತದೆ.ವ್ಯಾಪಾರಿ ವಲಯದಲ್ಲಿರುವ ಎರಡನೇ ಹಾಗೂ ತದನಂತರದ ವರ್ತಕರು ಈಗ ಸಂಗ್ರಹಿಸಲಾಗದ ಶೇಕಡ 1 ರಷ್ಟು

ವಹಿವಾಟು ತೆರಿಗೆಯನ್ನು ಪಾವತಿಸುತ್ತಿದ್ದು, ಮೌಲ್ಯವರ್ಧಿತ ತೆರಿಗೆ ಪದ್ಧತಿಯಲ್ಲಿ ಅವರು ಹೆಚ್ಚಿನ ತೆರಿಗೆ ಆದರೆ ವಸೂಲು ಮಾಡಬಹುದಾದ ತೆರಿಗೆ ಪಾವತಿಸಬೇಕಾಗುತ್ತದೆ. ಒಂದು ಮಧ್ಯಂತರ ಕ್ರಮವಾಗಿ ಹಾಗೂ ವರ್ತಕರನ್ನು ವ್ಯಾಟ್ ಪದ್ಧತಿಗೆ ಸುಲಭವಾಗಿ ಹೊಂದಿಕೊಳ್ಳುವಂತೆ ತಯಾರು ಮಾಡಲು ನಾನು ಒಂದು ವಸೂಲುಮಾಡಬಹುದಾದ, ಶೇಕಡ 1.5ರ ಮರು ಮಾರಾಟ ತೆರಿಗೆಯನ್ನು ಜಾರಿಗೆ ತರಲು ನಾನು ಪ್ರಸ್ತಾಪಿಸುತ್ತೇನೆ. ಆದಾಗ್ಯೂ ಎರಡನೇ ಹಾಗೂ ತದನಂತರದ ಮಾರಾಟದ ಮೇಲೆ ಕರವಿನಾಯಿತಿ ಇರುವ ಬಹಳಷ್ಟು ಸರಕುಗಳಿಗೆ ಈ ಸಂಗ್ರಹಿಸಬಹುದಾದ ಹೊಸ ತೆರಿಗೆಯಿಂದ ವಿನಾಯಿತಿ ನೀಡಲು ಪ್ರಸ್ತಾವಿಸಿದೆ. ಈ ಸಂಗ್ರಹಿಸಬಹುದಾದ ಹೊಸ ತೆರಿಗೆ ವಿಧಿಸುವಿಕೆಯು ಸಮಗ್ರ ವರ್ತಕ ವೃಂದವು ಅವರು ಮಾಡುವ ಎಲ್ಲಾ ಮಾರಾಟಗಳ ಮೇಲೆ ಬಿಲ್ಲುಗಳನ್ನು ನೀಡುವಂತೆ ಪ್ರೇರೇಪಿಸುತ್ತದೆ ನಾನು ಆಶಿಸುತ್ತೇನೆ.

178. ತಮ್ಮ ಎಲ್ಲ ಖರೀದಿಗಳ ಬಗ್ಗೆ ಬಿಲ್ಲುಗಳನ್ನು ಕೇಳಲು ನಾನು ಬಳಕೆದಾರರನ್ನು ಕೋರುತ್ತೇನೆ.

179. ಅಧಿಸೂಚನೆಗಳ ಮೂಲಕ ನೀಡಲಾಗಿರುವ ತೆರಿಗೆ ವಿನಾಯಿತಿ ಮತ್ತು ರಿಯಾಯಿತಿಗಳನ್ನು ಬಹುಪಾಲು ಮುಂದುವರೆಸಲು ನಾನು ಪ್ರಸ್ತಾಪಿಸುತ್ತೇನೆ.

ಬ್ಯಾಂಕುಗಳ ಮೂಲಕ ತೆರಿಗೆ ಸಂಗ್ರಹಣೆ

180. ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯ ನಂತರ ಬ್ಯಾಂಕುಗಳ ಮೂಲಕ ತೆರಿಗೆ ಸಂಗ್ರಹಣೆಯನ್ನು ಮಾಡುವ ಒಂದು ಪದ್ಧತಿಯನ್ನು ಅನುಷ್ಠಾನಕ್ಕೆ ತರಲು ನಾನು ಪ್ರಸ್ತಾಪಿಸುತ್ತೇನೆ. ಇದರಿಂದ ಇಲಾಖೆಯ ಅನುತ್ಪಾದಕ ಪತ್ರ ಕಾರ್ಯನಿರ್ವಹಣೆ ಕಡಿಮೆಯಾಗುತ್ತದೆ ಹಾಗೂ ರಾಜಸ್ವ ಸಂಗ್ರಹಣೆಯ ಕಾರ್ಯವು ಚುರುಕುಗೊಳ್ಳುತ್ತದೆ.

ಮಧ್ಯಂತರ ತನಿಖಾ ಠಾಣೆಗಳ ರದ್ಧತಿ

181. ಸರಕುಗಳ ಮುಕ್ತ ಸಾಗಾಟಕ್ಕೆ ಅಡಚಣೆ ಉಂಟು ಮಾಡುತ್ತಿರುವ ಸದ್ಯದ ತುಮಕೂರಿನ ಶಿರಾ ಗೇಟ್, ಚಾರ್ಮಾಡಿ, ಶ್ರೀರಂಗಪಟ್ಟಣ ಮತ್ತು ಗುಂಡ್ಯದಲ್ಲಿರುವ ನಾಲ್ಕು ಮಧ್ಯಂತರ ತನಿಖಾ ಠಾಣೆಗಳನ್ನು ನಾನು ರದ್ದುಪಡಿಸಲು ಪ್ರಸ್ತಾಪಿಸುತ್ತೇನೆ. ಇವುಗಳನ್ನು ನಾನು ರಾಜ್ಯದ ಗಡಿಗಳಲ್ಲಿ ಮರುಸ್ಥಾಪನೆ ಮಾಡುತ್ತೇನೆ.

ಆಡಳಿತಾತ್ಮಕ ಸುಧಾರಣೆಗಳು

182. ಇಲಾಖೆಯಲ್ಲಿನ ಮಾನವ ಶಕ್ತಿಯನ್ನು ಇನ್ನು ಉತ್ತಮವಾಗಿ ಬಳಸಿಕೊಂಡು ಇಲಾಖೆಯ ದಕ್ಷತೆಯನ್ನು ಹೆಚ್ಚಿಸಲು ಹೂಗೂ ವ್ಯಾಟ್ ಪದ್ಧತಿಗಾಗಿ ಇಲಾಖೆಯನ್ನು ಸಿದ್ಧ ಪಡಿಸಲು,

(ಅ) ಇಲಾಖೆಯನ್ನು ಕರ್ತವ್ಯಾತ್ಮಕ ಸಂಸ್ಥೆಯ ತತ್ವಗಳ ಮೇಲೆ ಮರು ರೂಪಿಸಲು,

(ಆ) ಸರಕುಗಳ ವರ್ಗೀಕರಣ, ತೆರಿಗೆ ದರಗಳು ಮತ್ತು ವಹಿವಾಟಿನ ತೆರಿಗೆ ಬಾಧ್ಯತೆಯ ಕುರಿತು ಶಾಸನಬದ್ಧ ಸ್ಪಷ್ಟೀಕರಣ ನೀಡುವದಕ್ಕಾಗಿ ಅಪರ ಆಯುಕ್ತರ ಸಮಿತಿಯೊಂದನ್ನು ರಚಿಸಲು,

(ಇ) ಗುಪ್ತವಾರ್ತೆ ಮತ್ತು ಸಂಯೋಜನೆ ಚಟುವಟಿಕೆಗಳು, ಅಂತರರಾಜ್ಯ ತನಿಖೆಗಳು, ಜಾಗೃತಿದಳ, ಲೆಕ್ಕಪರಿಶೋಧನೆ, ಅಡ್ಡಪರಿಶೀಲನೆ ಹಾಗೂ ಕರವಸೂಲಿ ವಿಭಾಗಗಳನ್ನು ಮರುನಿಯೋಜನೆ ಮತ್ತು ಹೆಚ್ಚಳದ (ಅಧಿಕಾರಿಗಳ ಮತ್ತು ಸಿಬ್ಬಂದಿ) ಹಾಗೂ ಹೆಚ್ಚಿನ ವಾಹನಗಳ ಮೂಲಕ ಬಲಗೊಳಿಸಲು,

(ಈ) ಅಧಿಕಾರ ಕಾರ್ಯ ನಿರ್ವಹಣೆ ವಿಕೇಂದ್ರೀಕರಣದ ಅಂಗವಾಗಿ ಬೆಂಗಳೂರಿನ ಹೊರಗೆ ತಲಾ ಒಬ್ಬ ಅಪರ ಆಯುಕ್ತರುಗಳ ಅಧೀನದಲ್ಲಿ ಎರಡು ವಲಯಗಳನ್ನು ಸೃಷ್ಟಿಸಲು ಮತ್ತು ಎಲ್ಲಾ ಅಪರ ಆಯುಕ್ತರುಗಳಿಗೆ ಇನ್ನೂ ಹೆಚ್ಚಿನ ಶಾಸನಬದ್ಧ ಹಾಗೂ ಆಡಳಿತಾತ್ಮಕ ಅಧಿಕಾರಗಳನ್ನು ನೀಡಲು,

ನಾನು ಪ್ರಸ್ತಾಪಿಸುತೇನೆ.

ಔದ್ಯೋಗಿಕ ಕಚ್ಚಾ ಸಾಮಗ್ರಿಗಳ ಮೇಲಿನ ತೆರಿಗೆ ಸರಳೀಕರಣ

183. ಮೌಲ್ಯವರ್ಧಿತ ತೆರಿಗೆ ಪದ್ಧತಿ ಅಡಿಯಲ್ಲಿರುವ ತೆರಿಗೆ ರಿಬೇಟಿಂಗ್ ಯೋಜನೆಗೆ ವಾಣಿಜ್ಯ ಮತ್ತು ಉದ್ಯಮಿಗಳನ್ನು ಸಿದ್ದಪಡಿಸಲು ಹಿಂದಿನ ಆಯವ್ಯಯದಲ್ಲಿ ನಾನು ಔದ್ಯೋಗಿಕ ಕಚ್ಚಾಸಾಮಗ್ರಿಗಳ ಮೇಲೆ ಒಂದು ಹೊಸ ಲೆಕ್ಕಪತ್ರ ಆಧಾರಿತ ರಿಬೇಟಿಂಗ್ ಯೋಜನೆಯೊಂದನ್ನು ಜಾರಿಗೊಳಿಸಿದ್ದೆ. ಆದರೆ ದುರಾದೃಷ್ಟವಷಾತ್ ಚಿಕ್ಕ ಬಂಡವಾಳ ಹೂಡಿಕೆಯ ಮೇಲೆ ಕೈಗಾರಿಕೆ ನಡೆಸುತ್ತಿರುವ ಉದ್ಯಮಿಗಳ ವಲಯವು ಈ ಹೊಸ ಪದ್ಧತಿಗೆ ಹೊಂದಿಕೊಳ್ಳಲಾಗಲಿಲ್ಲ ಹಾಗೂ ಸೆಪ್ಟಂಬರ್ 2001 ರಲ್ಲಿ ನಾನು ಅವರಿಗೆ ಹಳೆಯ ಘೋಷಣಾ ಪತ್ರ ಆಧಾರಿತ ತೆರಿಗೆ ರಿಯಾಯಿತಿಯ ಆಯ್ಕೆಯನ್ನು ನೀಡಬೇಕಾಯಿತು.

184. ನಾನು ಈ ಘೋಷಣಾ ಪತ್ರ ಆಧಾರಿತ ರಿಯಾಯಿತಿ ಪಡೆಯುವ ಹಳೆಯ ಪದ್ಧತಿಯನ್ನು ಮರುಜಾರಿಗೊಳಿಸುವ ಪ್ರಸ್ತಾಪಿಸುತ್ತೇನೆ. ವ್ಯಾಪಾರ ಪಲ್ಲಟವಾಗುವದನ್ನು ಕಡಿಮೆ ಮಾಡಲು ಉತ್ಪಾದಕರು ಕಟ್ಟಿಗೆ, ಬಿದಿರು ಮತ್ತು ಮರಮುಟ್ಟುಗಳನ್ನು ವಿನಾಯಿತಿ ದರದಲ್ಲಿ ಖರೀದಿಸಲು ಅನುವು ಮಾಡಿಕೊಡಲು ನಾನು ಪ್ರಸ್ತಾಪಿಸುತ್ತೇನೆ. ಖರೀದಿ ಹಂತದ ಮೇಲೆ ತೆರಿಗೆ ಬೀಳುವ ಅದಿರು ಮತ್ತು ಇತರ ಕಚ್ಚಾ ಸಾಮಗ್ರಿಗಳು ಹಾಗೂ ನೋಂದಣಿ ಇಲ್ಲದ ವರ್ತಕರಿಂದ ಖರೀದಿಸಿದ ಕಚ್ಚಾ ಸಾಮಾನುಗಳ ಮೇಲೆ ಕೂಡ ತೆರಿಗೆ ರಿಯಾಯಿತಿಯನ್ನು ವಿಸ್ತರಿಸಲು ಸಹ ಪ್ರಸ್ತಾಪಿಸುತ್ತೇನೆ. ಔದ್ಯೋಗಿಕ ಘಟಕಗಳಿಗೆ ಪರಿಹಾರ ಕ್ರಮವಾಗಿ 1 ಕೋಟಿಗಿಂತಲೂ ಹೆಚ್ಚು ವಹಿವಾಟು ಇರುವ ನೋಂದಣಿದಾರರಿಗೆ ಇಲಾಖೆಯಿಂದ ಪಡೆಯಲಾಗುತ್ತಿರುವ ನಮೂನೆ 37ರ ಬದಲಾಗಿ ಅವರದೇ ಸ್ವಯಂ ಘೋಷಣಾ ಪತ್ರಗಳನ್ನು ಬಳಸಲು ಅನುಮತಿ ನೀಡಲು ಪ್ರಸ್ತಾಪಿಸುತ್ತೇನೆ. ಸರಕಾರವು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಿರುವ ವಿದ್ಯುನ್ಮಾನ ಆಡಳಿತದ ಅಂಗವಾಗಿ ಇಲಾಖೆಯು ಅವಶ್ಯ ಇರುವಲ್ಲಿ ನಮೂನೆ 37 ಘೋಷಣಾ ಪತ್ರಗಳನ್ನು ಆನ್-ಲೈನ್ ವಿತರಿಸುತ್ತದೆ.

185. ಈ ಮೇಲೆ ಹೇಳಿದ ಕೆಲವು ತೆರಿಗೆಗಳ ರದ್ದತಿಯನ್ನು ಗಮನದಲ್ಲಿರಿಸಿಕೊಂಡು ನಾನು ಎಲ್ಲಾ ಔದ್ಯೋಗಿಕ ಕಚ್ಚಾಸಾಮಗ್ರಿಗಳ ಮೇಲೆ ಶೇಕಡ 4 ರ ಒಂದೇ ದರವನ್ನು ನಿಗದಿಪಡಿಸಲು ಪ್ರಸ್ತಾಪಿಸುತ್ತೇನೆ. ಇದು ಚಾಲ್ತಿಯಲ್ಲಿರುವ ತೆರಿಗೆ ದರಕ್ಕಿಂತ ಕಡಿಮೆಯದಾಗಿದೆ.

ಪರಿಹಾರಗಳು ಮತ್ತು ರಿಯಾಯಿತಿಗಳು

ರಫ್ತು ಘಟಕಗಳು- ರಫ್ತು ಸಂಸ್ಥೆಗಳು

186. ಕಳೆದ ವರ್ಷದ ಪತ್ರದಲ್ಲಿ ನಾನು, ರಾಜ್ಯದಿಂದ ರಫ್ತುಗಳು ಹೆಚ್ಚು ಸ್ಪರ್ಧಾತ್ಮಕವಾಗುವಂತೆ ಮಾಡುವ ಉದ್ದೇಶದಿಂದ ರಾಜ್ಯದಲ್ಲಿನ ಉತ್ಪಾದಕರು ನೇರವಾಗಿ ಅಥವಾ ರಫ್ತುದಾರರ ಮೂಲಕ ಸರಕುಗಳನ್ನು ರಫ್ತುಮಾಡಿದರೆ ಆ ಸರಕುಗಳ ಉತ್ಪಾದನೆಯಲ್ಲಿ ಬಳಸಲಾದ ಕಚ್ಚಾ ಸಾಮಗ್ರಿ ಹಾಗೂ ಬಿಡಿಭಾಗಗಳ ಮೇಲೆ ನೀಡಿದ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳನ್ನು ಮರುಪಾವತಿಸುವ ಪ್ರಯೋಜನವನ್ನು ನೀಡಿದ್ದೆ. ಇದಲ್ಲದೆ ಸರ್ಕಾರವು ಶೇಕಡ 100 ರಫ್ತು ಘಟಕಗಳಿಗೆ ಅವು ಖರೀದಿಸುವ ಕಚ್ಚಾ ಸಾಮಗ್ರಿ ಹಾಗೂ ಬಿಡಿಭಾಗಗಳ ಮೇಲಿನ ಮಾರಾಟ ತೆರಿಗೆ ಹಾಗೂ ಪ್ರವೇಶ ತೆರಿಗೆಯಿಂದ ವಿನಾಯಿತಿಯನ್ನು ನೀಡಿತ್ತು. ನಾನು ಪ್ರಸ್ತುತ ವರ್ಷದಲ್ಲೂ ಸಹ ಈ ರಿಯಾಯಿತಿಗಳನ್ನು ಮುಂದುವರಿಸಲು ಪ್ರಸ್ತಾಪಿಸುತ್ತೇನೆ.

ಖಾದ್ಯ ತೈಲ ಉದ್ಯಮಕ್ಕೆ ಸೆಟ್-ಆಫ್ ಸೌಲಭ್ಯ

187. ತಾವು ಉತ್ಪಾದಿಸಿದ ಖಾದ್ಯ ತೈಲ ಹಾಗೂ ಹಿಂಡಿಗಳ ಮೇಲೆ ನೀಡಬೇಕಾದ ತೆರಿಗೆಯಲ್ಲಿ ಎಣ್ಣೆಕಾಳುಗಳ ಮೇಲೆ ನೀಡಿದ ತೆರಿಗೆಯನ್ನು ಕಡಿತ ಮಾಡಲು ಹಾಗೂ ಸ್ಪರ್ಧಿಸಲು ಅನುವಾಗುವಂತೆ ಮಾಡಲು ವಿನಂತಿಸಿ ಈ ಉದ್ಯಮವು ಪ್ರತಿನಿಧಿಸುತ್ತಲೇ ಇಂತಹ ಸೌಲಭ್ಯವನ್ನು ಪಡೆಯುತ್ತಿರುವ ನೆರೆ ರಾಜ್ಯಗಳಲ್ಲಿಯ ಉತ್ಪಾದಕರ ಜೊತೆ ನಾನು ತೆರಿಗೆ ಸೆಟ್-ಆಫ್ ಸೌಲಭ್ಯವನ್ನು ಈ ಉದ್ಯಮಕ್ಕೆ ವಿಸ್ತರಿಸಲು ಪ್ರಸ್ತಾಪಿಸುತ್ತಿದ್ದೇನೆ. ಈ ಯೋಜನೆಯು ಸರಳವಾಗಿ ನಡೆಯಲು ಮತ್ತು ಕನಿಷ್ಠ ದರವನ್ನು ಅನುಸರಿಸಲು ನಾನು ಎಣ್ಣೆಕಾಳುಗಳ ಮೇಲೆ ತೆರಿಗೆ ಭಾದ್ಯತೆಯ ಹಂತದ ಸೂಕ್ತ ಮಾರ್ಪಾಟಿನೊಂದಿಗೆ ಅವುಗಳ ಮೇಲಿನ ತೆರಿಗೆ ದರವನ್ನು ಶೇಕಡ 4 ಕ್ಕೆ ಪರಿಷ್ಕರಿಸಲು ನಾನು ಪ್ರಸ್ತಾಪಿಸುತ್ತೇನೆ. ಖಾದ್ಯ ತೈಲ ಉದ್ದಿಮೆಯು ಈ ಸೌಲಭ್ಯದ ಲಾಭ ಪಡೆದು ತಮ್ಮ ತೆರಿಗೆ ಪಾಲನೆಯನ್ನು ಸುಧಾರಿಸುತ್ತಾರೆಂದು ನಂಬಿದ್ದೇನೆ. ಇವರ ತೆರಿಗೆ ಪಾಲನೆಯನ್ನು ನಾನು ಆಗಾಗ್ಗೆ ಪರಿಶೀಲನೆ ಮಾಡಲು ಉದ್ದೇಶಿಸಿದ್ದೇನೆ.

188. ತೆರಿಗೆ ಮತ್ತು ಇತರ ಪರಿಹಾರಗಳ ವಿಷಯದಲ್ಲಿ ನನ್ನ ಸರಕಾರವು ವಾಣಿಜ್ಯ ಉದ್ಯಮಗಳ ಕೋರಿಕೆಗಳಿಗೆ ಸ್ಪಂದಿಸಿದೆ. ತೆರಿಗೆ ಪರಿಹಾರಗಳ ಬಗ್ಗೆ ಸ್ವೀಕೃತವಾದ ಕೋರಿಕೆಗಳ ಸೂಕ್ತ ಪರಿಶೀಲನೆ ನಂತರ ನಾನು ಈ ಕೆಳಗಿನ ಪರಿಹಾರಗಳನ್ನು ಮತ್ತು ರಿಯಾಯಿತಿಗಳನ್ನು ನೀಡಲು ಪ್ರಸ್ತಾಪಿಸುತ್ತೇನೆ.

(1) ಸ್ಪ್ರಿಂಕಲರ್ ಮತ್ತು ಹನಿ ನೀರಾವರಿ ಸಾಧನಗಳ ಮೇಲಿನ ಮಾರಾಟ ತೆರಿಗೆ,

(2) ಮುಂದಿನ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ಉಪಯೋಗಿಸಲು ಮೀನುಗಾರರಿಗೆ ಪೂರೈಸುವ 50 ಸಾವಿರ ಕಿಲೋ ಲೀಟರ್ ಡೀಸಲ್ ಮೇಲಿನ ಮಾರಾಟ ತೆರಿಗೆ ಈ ಯೋಜನೆಯನ್ನು ಮೀನುಗಾರಿಕೆ ಇಲಾಖೆ ನಿರ್ವಹಿಸುವುದು.

ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

189. ತಯಾರಿಕರಿಗೆ ತೊಂದರೆಯಾಗಿರುವ ಲಘು ಪಾನೀಯಗಳ ಎರಡನೇ ಮತ್ತು ತದನಂತರ ಮಾರಾಟದ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾಪಿಸುತ್ತೇನೆ.

190. ಕ್ಯಾನ್ಸರ್, ಏಡ್ಸ್ ಮತ್ತು ಮೂತ್ರಪಿಂಡ ಕಸಿ ಇವುಗಳ ಚಿಕಿತ್ಸೆಯಲ್ಲಿ ಉಪಯೋಗಿಸುವ ಕೆಲವು ಔಷಧಿಗಳ ಮೇಲೆ ತೆರಿಗೆ ವಿನಾಯಿತಿ ಮುಂದುವರಿಸಲು ಪ್ರಸ್ತಾಪಿಸುತ್ತೇನೆ. ಅಲ್ಲದೆ ಮೂರ್ಛೆ ರೋಗ ಚಿಕಿತ್ಸೆಯಲ್ಲಿ ಕೆಲವು ನಿರ್ದಿಷ್ಟ ಔಷಧಿಗಳಿಗೆ ತೆರಿಗೆ ವಿನಾಯಿತಿ ನಾನು ಪ್ರಸ್ತಾವಿಸುತ್ತೇನೆ.

191. ನಾನು ಈ ಕೆಳಕಂಡ ವಸ್ತುಗಳ ಮೇಲೆ ತೆರಿಗೆ ಕಡಿತ ಉಪಯೋಗಿಸುವ ಪ್ರಸ್ತಾವಿಸುತ್ತೇನೆ.

(ಅ) ಮೊಬೈಲ್ ಫೋನ್‌ಗಳ ಬಿಡಿಭಾಗಗಳ ಮತ್ತು ಸಾಧನ ಸಾಮಗ್ರಿಗಳು, ಸಿಮ್ ಕಾರ್ಡುಗಳು, ಸ್ಮಾರ್ಟ್ ಕಾರ್ಡುಗಳು ಮೇಲಿನ ತೆರಿಗೆಯನ್ನು ಇಂತಹುದೇ ಎಲೆಕ್ಟ್ರಾನಿಕ್ ಸರಕುಗಳ ಸರಿಸಮಾನವಾಗಿ ಶೇಕಡ 4 ಕ್ಕೆ,

(ಆ) ಬಜೆ (ಕ್ಯಾಲಿಮಸ್ ರೂಟ್) - ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ,

(ಇ) ಮುಖ್ಯವಾಗಿ ಉತ್ತರ ಕರ್ನಾಟಕದ ರೈತರಿಗೆ ಪರಿಹಾರ ಕ್ರಮವಾಗಿ ಮತ್ತು ವ್ಯಾಪಾರ ಪಲ್ಲಟ ತಡೆಯಲು ಬೇಳೆಕಾಳುಗಳು - ಮೇಲಿನ ತೆರಿಗೆಯನ್ನು ಶೇಕಡ 1 ಕ್ಕೆ,

(ಈ) ಹರಳು ಎಣ್ಣೆ - ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ,

(ಉ) ಗೋಧಿಯ ಹೊಟ್ಟು ಮತ್ತು ಧೂಳಿನ ಮೇಲಿನ ತೆರಿಗೆಯನ್ನು - ಶೇಕಡ 2 ಕ್ಕೆ,

(ಊ) ಹೊರ ರಾಜ್ಯದ ಉತ್ಪಾದಕರು ರಾಜ್ಯದಲ್ಲಿ ವಿಕ್ರಿ ಮಾಡುವಂತೆ ಪ್ರೇರೇಪಿಸಲು ಅಲ್ಯೂಮಿನಿಯಂ ಗಟ್ಟಿಗಳು, ಬಿಲ್ಲೆಟ್‌ಗಳು, ವೈರ್ ರಾಡ್‌ಗಳು ನಮೂನೆ 37ರ ಘೋಷಣಾ ಪತ್ರದ ಆಧಾರದ ಮಾರಾಟಗಳ ಮೇಲಿನ ತೆರಿಗೆಯನ್ನು - ಶೇಕಡ 2 ಕ್ಕೆ ಇಳಿಸಲು ಹಾಗೂ ಈ ತೆರಿಗೆ ರಿಯಾಯಿತಿ ಕಾಲಕಾಲಕ್ಕೆ ಪರಿಶೀಲಿಸಲು ಮತ್ತು

(ಎ) ಕೆಲವು ಮಾಹಿತಿ ತಂತ್ರಜ್ಞಾನ ಉತ್ಪಾದನೆಗಳು ಅನುಬಂಧ 2 ರಲ್ಲಿರುವ ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ ಇಳಿಸಲು ನಾವು ಪ್ರಸ್ತಾವಿಸುತ್ತೇನೆ.

192. ಹೋಟೆಲ್ ದಾರರು ಮತ್ತು ರೆಸ್ಟೋರೆಂಟ್‌ದಾರರಿಗೆ ಸಮನಾಗಿ ಮಾದಕ ಪಾನೀಯಗಳನ್ನು ಸರಬರಾಜು ಮಾಡುವ ಹೋಟಲ್ ಮತ್ತು ರೆಸ್ಟೋರೆಂಟ್ ಗಳನ್ನು ಬಿಟ್ಟು ಇತರೆ ಕಡೆ ಸರಬರಾಜು ಮಾಡುವ ಎಲ್ಲಾ ಆಹಾರ ಸರಬರಾಜುದಾರರಿಗೆ (ಕೇಟರರ್ಸ್) ರಾಜಿ ತೆರಿಗೆಯ ಸೌಲಭ್ಯವನ್ನು ವಿಸ್ತರಿಸಲು ನಾನು ಪ್ರಸ್ತಾವಿಸುತ್ತೇನೆ. ಅಲ್ಲದೆ ನೋಂದಾಯಿತ ಕ್ಲಬ್ ಗಳಲ್ಲಿ ಆಹಾರ ಸರಬರಾಜು ಮಾಡುವ ಸರಬರಾಜುದಾರರಿಗೆ ಮತ್ತು ಇತರರಿಗೂ ಸಹ ರಾಜಿ ತೆರಿಗೆ ಸೌಲಭ್ಯವನ್ನು ವಿಸ್ತರಿಸಲು,

193. ನಾನು ಪ್ರಸ್ತಾವಿಸುತ್ತೇನೆ.

(ಅ) ವಾರ್ಷಿಕ ವಹಿವಾಟು 50 ಲಕ್ಷಕ್ಕೂ ಮೀರಿದ ವರ್ತಕರು ಸರಕು ಸಾಗಾಣಿಕೆಗೆ ನಮೂನೆ 39ರ ಬದಲಾಗಿ ತಮ್ಮದೇ ಡೆಲಿವರಿ ನೋಟ್ ಬಳಸಲು ಅನುಮತಿ ನೀಡಲು,

(ಆ) ನಗರದ ಮತ್ತು ಕೈಗಾರಿಕೆ ಪ್ರದೇಶದ ಪ್ರದೇಶದೊಳಗೆ ಮಾರಾಟದಿಂದಲ್ಲದ ಸರಕು ಸಾಗಾಣಿಕೆಗೆ ವರ್ತಕರು ತಮ್ಮದೇ ಡೆಲಿವರಿ ನೋಟ್ ಬಳಸಲು ಅನುಮತಿ ನೀಡಲು,

(ಇ) 2000-2001 ನೇ ವರ್ಷಕ್ಕೆ ನೀಡಿದ ನಮೂನೆ 4 ರ ಪ್ರಕಾರ ವಾರ್ಷಿಕ 50 ಲಕ್ಷಕ್ಕೂ ಹೆಚ್ಚು ತೆರಿಗೆ ನೀಡುವ ವರ್ತಕರ ಮತ್ತು ಶೇಕಡ 100 ರಫ್ತು ಘಟಕಗಳು ತಮ್ಮ ಸರಕು ಸಾಗಾಣಿಕೆಗಳನ್ನು ತನಿಖಾ ಠಾಣೆಗಳಲ್ಲಿ ವಿಶೇಷ ಕೌಂಟರ್‌ಗಳ ಮೂಲಕ ತ್ವರಿತವಾಗಿ ಸಾಗಣೆ ಮಾಡಲು ಅನುಕೂಲವಾಗುವಂತೆ ಅವರಿಗೆ ಗೋಲ್ಡ್ ಕಾರ್ಡ್‌ಗಳನ್ನು ನೀಡುವ ಯೋಜನೆ ಜಾರಿಗೆ ತರಲು,

(ಈ) ತೆರಿಗೆ ಸಂದಾಯ ಮಾಡಿದ ಬಗ್ಗೆ ಆಗುವ ತಕರಾರುಗಳನ್ನು ಕಡಿಮೆ ಮಾಡಲು ತೆರಿಗೆ ಸಂದಾಯದ ವಿವರಗಳು ಇರುವ ಪಾಸ್ ಬುಕ್ಕುಗಳನ್ನು ವರ್ತಕರಿಗೆ ನೀಡುವ ಪದ್ಧತಿಯನ್ನು ಮರು ಅನುಷ್ಠಾನಗೊಳಿಲು,

(ಉ) ವ್ಯಾಪಾರ ಉದ್ದಿಮೆಗಳಿಗೆ ಬಹಳಷ್ಟು ತೊಂದರೆದಾಯಕವಾಗಿರುವ ನಮೂನೆ 32-ಬಿ ಘೋಷಣಾ ಪತ್ರವನ್ನು ರದ್ದು ಮಾಡಲು ಹಾಗೂ 1995 ಮತ್ತು 96ನೇ ವರ್ಷಗಳ ಕೆಲವು ಸಮಯದಲ್ಲಿ ಇಲಾಖೆಯಿಂದ ಶಾಸನಬದ್ಧ ಘೋಷಣಾ ಪತ್ರಗಳು ಪೂರೈಕೆಯಾಗದೆ ಇದ್ದುದರಿಂದ ವರ್ತಕರು ತಮ್ಮ ಪೂರೈಕೆದಾರರಿಂದ ಈ ಘೋಷಣಾ ಪತ್ರಗಳನ್ನು ಪಡೆಯದೆ ಹಾಜರು ಮಾಡಲು ಅಶಕ್ತರಾದುದನ್ನು ಗಮನಿಸಿ, ವರ್ತಕರು ಇದರ ಬಗ್ಗೆ ಬದಲಿ ಸಾಕ್ಷಾಧಾರವನ್ನು ಒದಗಿಸಲು ಅವಕಾಶ ನೀಡಲು,

(ಊ) ಸರಕು ಸಾಗಾಣಿಕೆದಾರರು ನೋಂದಣಿಯಾಗುವಂತೆ ಕಳೆದ ವರ್ಷ ಜಾರಿಗೆ ತಂದ ನಿಯಮವನ್ನು ಹಿಂತೆಗೆದುಕೊಳ್ಳಲು ಮತ್ತು ಕೆಲವು ಆಯ್ದ ಪ್ರಕರಣಗಳಲ್ಲಿ ಸಂಬಂಧಿತ ಅಧಿಕಾರಿಗಳಿಗೆ ಅವರು ಮಾಹಿತಿ ಪೂರೈಸುವಂತೆ ಮಾಡಲು,

(ಎ) ನಮೂನೆ 39 ಡೆಲಿವರಿ ನೋಟ್ ಗಳ ಸಿಂಧುತ್ವದ ಅವಧಿಯನ್ನು 3 ತಿಂಗಳಿಂದ 6 ತಿಂಗಳಿಗೆ ವಿಸ್ತರಿಸಲು,

(ಏ) ಸ್ವಯಂ ಕರನಿರ್ಧರಣೆ ವಹಿವಾಟಿನ ಮಿತಿಯನ್ನು ಉತ್ಪಾದಕರಿಗೆ 1 ಕೋಟಿ ವರೆಗೆ ಹೆಚ್ಚಿಸಲು ಮತ್ತು ವರ್ತಕರಿಗೆ ರೂಪಾಯಿ 50 ಲಕ್ಷ ವಹಿವಾಟಿನ ಮಿತಿ ನಿಗದಿಪಡಿಸಲು ಹಾಗೂ ಇಂಥ ಪ್ರಕರಣಗಳಲ್ಲಿ ಲೆಕ್ಕಪತ್ರಗಳ ಆಡಿಟ್ ಕಡ್ಡಾಯವಾಗಿಸಲು,

(ಐ) ಕರನಿರ್ಧರಣೆ ಅಂತಿಮವಾದ ಮೇಲೆ 1 ವರ್ಷದ ಒಳಗೆ ನಿರ್ಧರಿಸುವ ತೆರಿಗೆಯನ್ನು ಪಾವತಿ ಮಾಡುವ ನಿಬಂಧನೆಯೊಂದಿಗೆ ವರ್ತಕರು ನಮೂನೆ 37 ಘೋಷಣಾ ಪತ್ರಗಳನ್ನು ಸಲ್ಲಿಸಲು ಅನುಮತಿ ನೀಡಿ, ಅಂತಹ ಪ್ರಕರಣಗಳಲ್ಲಿ ಮೇಲ್ಮನವಿ ವೆಚ್ಚ ಮತ್ತು ಇದರಿಂದ ತೊಂದರೆಗಳನ್ನು ಕಡಿಮೆ ಮಾಡಲು,

(ಒ) ನೋಂದಾಯಿತ ವರ್ತಕರಿಗೆ ಸಂಬಂಧಿಸಿದ ಸರಕು ರಾಜ್ಯದಲ್ಲಿ ಪ್ರಥಮ ತನಿಖಾ ಠಾಣೆಯಲ್ಲಿ ತನಿಖೆಗೆ ಒಳಗಾಗದ ಅಪರಾಧಕ್ಕಾಗಿ ವಿಧಿಸುವ ದಂಡವನ್ನು ತೆರಿಗೆ ಬಾಧ್ಯತೆಯ ಒಂದು ಪಟ್ಟಿನಿಂದ ಒಂದೂವರೆ ಪಟ್ಟಿನವರೆಗೆ ದಂಡ ನಿಗದಿ ಪಡಿಸಲು, ನಾನು ಪ್ರಸ್ತಾವಿಸುತ್ತೇನೆ.

ತೆರಿಗೆಯ ನಿಯಮಗಳ ಸುಧಾರಣೆ

194. ನಾನು ಪ್ರಸ್ತಾವಿಸುತ್ತೇನೆ.

(ಅ) ಬ್ರಾಂಡೆಡ್ ಸರಕುಗಳ ಮಾರಾಟ ಸಂಬಂಧಿತ ನಿಯಮಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ (1) ಬ್ರಾಂಡ್ ಅಥವಾ ಟ್ರೇಡ್ ಮಾರ್ಕ್ ಹೊಸದಾಗಿ ನೋಂದಣಿಯಾಗಲು ಬಾಕಿಯಿರುವಾಗ ಅಥವಾ ಇಂತಹ ನೋಂದಣಿ ವರ್ಗಾವಣೆ ಹಂತದಲ್ಲಿ ಬಾಕಿಯಿರುವಾಗ (2) ವಾರ್ಷಿಕ ವಹಿವಾಟು 1 ಕೋಟಿಗೂ ಮಿಕ್ಕಿರುವ ನೋಂದಣಿ ಇಲ್ಲದ ಬ್ರಾಂಡ್ ನೇಮ್ ಅಥವಾ ಟ್ರೇಡ್ ಮಾರ್ಕ್ ಇರುವ ಮಾಲೀಕರಿಗೆ, ಮತ್ತು (3) ಬ್ರಾಂಡೆಡ್ ಸರಕುಗಳ ಮಾರ್ಕೆಟಿಂಗ್ ಏಜೆಂಟರು, ಡಿಸ್ಟ್ರಿಬ್ಯೂಟರ್ ಗಳು ಮತ್ತು ಸಗಟು ವಿಕ್ರಿದಾರರು ಇವರುಗಳಿಗೆ ಅನ್ವಯವಾಗುವಂತೆ ಹಾಗೂ ಈ ನಿಯಮಗಳನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು,

(ಆ) ತನಿಖಾ ಠಾಣೆಗಳ ಪ್ರಕರಣಗಳಲ್ಲಿ ತಡೆಯಾಜ್ಞೆ ಹೊಂದಿದ ಪ್ರಕರಣಗಳಲ್ಲಿ ಮೇಲ್ಮನವಿ ವಿಲೇವಾರಿಗೆ 90 ದಿನಗಳ ಅವಧಿಯನ್ನು ನಿಗದಿ ಮಾಡಲು,

(ಇ) ತನಿಖಾ ಠಾಣೆಗಳ ಪ್ರಕರಣಗಳ ಮನವಿಗಳ ಶೀಘ್ರ ವಿಲೇವಾರಿಗಾಗಿ ಮನವಿ ಉಪ ಆಯುಕ್ತರಿಗೆ ಇವರಿಗೆ ಅಧಿಕಾರ ನೀಡಲು,

(ಈ) ಪ್ರಥಮ ಮನವಿ ಅಧಿಕಾರಿ ಹಾಗೂ ಪರಿಷ್ಕರಣೆ ಅಧಿಕಾರಿಗಳು ಮರು ಕರನಿರ್ಧರಣೆ ಮಾಡುವಂತೆ ಹೊರಡಿಸುವ ಆದೇಶ ನೀಡುವ ಅಧಿಕಾರವನ್ನು ಮತ್ತೆ ನೀಡಲು ಹಾಗೂ ಅಂತಹ ಅಧಿಕಾರವನ್ನು ಒಂದು ಬಾರಿಗೆ ಚಲಾಯಿಸುವಂತೆ ಮಾಡಲು ಮತ್ತು ಅಂತಹ ಪ್ರಕರಣಗಳ ಮರು ನಿರ್ಧಾರಣೆಗೆ 90 ದಿನಗಳ ಸಮಯ ನಿಗದಿ ಮಾಡಲು ಹಾಗೂ ಇದರ ಬಗ್ಗೆ ವರ್ತಕರು ಸಹಕಾರ ನೀಡದಿದ್ದರೆ ಮೂಲ ಕರನಿರ್ಧರಣೆಯನ್ನು ಜಾರಿಯಾಗುವಂತೆ ಮಾಡಲು,

(ಉ) ಪ್ರಶ್ನಿತ ತೆರಿಗೆಯ ಶೇಕಡ 50 ರ ಪ್ರಮಾಣಕ್ಕೆ ಸೀಮಿತವಾಗಿ ರಾಜ್ಯದ ತೆರಿಗೆ ನ್ಯಾಯಾಧಿಕರಣಕ್ಕೆ ತಡೆಯಾಜ್ಞೆ ನೀಡುವ ಅಧಿಕಾರವನ್ನು ನೀಡಲು ಮತ್ತು ಇಂತಹ ಪ್ರಕರಣಗಳ ವಿಲೇವಾರಿಗೆ 180 ದಿನಗಳ ಮಿತಿ ನಿಗದಿ ಪಡಿಸಲು,

(ಊ) ಸರಕುಗಳ ಸಾಗಾಣಿಕೆಯಲ್ಲಿ ಆದ ಅಪರಾಧಗಳ ಮೇಲೆ ವಿಧಿಸಲಾಗುವ ದಂಡದ ಪ್ರಮಾಣ ಹಾಗೂ ಲೆಕ್ಕಕ್ಕೆ ತೆಗೆದುಕೊಳ್ಳದ ಸರಕುಗಳ ದಾಸ್ತಾನಿನ ಮೇಲೆ ವಿಧಿಸುವ ದಂಡದ ಪ್ರಮಾಣಗಳನ್ನು ಸಮನಾಗಿ ನಿಗದಿಮಾಡಲು,

(ಎ) ರೂಪಾಯಿ 10 ಲಕ್ಷಕ್ಕೂ ಮೇಲಿನ ತೆರಿಗೆ ಬಾಕಿಯನ್ನು ಸಂದಾಯ ಮಾಡದೇ ಹೋದ ಪ್ರಕರಣದಲ್ಲಿ ಇರುವ ಶಿಕ್ಷೆಯ ಸಂಬಂಧಿತ ನಿಯಮದಲ್ಲಿನ ಗೊಂದಲವನ್ನು ತೊಡೆದುಹಾಕಲು,

(ಏ) ರಾಜ್ಯದ ಹೊರಗಿನಿಂದ ಸಿ ಫಾರಂ ಇಲ್ಲದೆಯೂ ಸರಕುಗಳನ್ನು ಪಡೆಯುವ ಗುತ್ತಿಗೆದಾರರನ್ನು ರಾಜಿ ತೆರಿಗೆ ಸೌಲಭ್ಯಕ್ಕೆ ಅನರ್ಹಗೊಳಿಸಲು,

(ಐ) ಬಾಕಿ ಇರುವ ತೆರಿಗೆಯ ಸಂಬಂಧಿತವಾಗಿ ಮನವಿಯ ಅಥವಾ ಬೇರೆ ಯಾವುದೇ ಪ್ರಕ್ರಿಯೆಗಳಲ್ಲಿ ತಡೆಯಾಜ್ಞೆ ಇದ್ದರೂ ತೆರಿಗೆ ಅಥವಾ ಇತರೆ ಬಾಕಿ ಮೊತ್ತಗಳ ಪಾವತಿಯಲ್ಲಿನ ವಿಳಂಬದ ಮೇಲೆ ಬಡ್ಡಿ ಬೀಳುವ ನಿಯಮ ಅಳವಡಿಸಲು,

(ಒ) ಸದ್ಯಕ್ಕೆ ದಂಡ ವಿಧಿಸುವಲ್ಲಿ ಇರುವ ವಿವೇಚನೆಯ ಅಧಿಕಾರವು ತೀರ ಹೆಚ್ಚಿನದಾಗಿರುವ ಕಾರಣ ಕರನಿರ್ಧರಣೆ, ಮರು ಕರನಿರ್ಧರಣೆ, ಕಡಿಮೆ ತೆರಿಗೆ ಪಾವತಿ ಮತ್ತು ತೆರಿಗೆ ರಿಯಾಯಿತಿಗಳ ದುರುಪಯೋಗದಂತಹ ಪ್ರಕರಣಗಳಲ್ಲಿ ದಂಡ ವಿಧಿಸುವಲ್ಲಿರುವ ವಿವೇಚನೆಯ ಅಧಿಕಾರವನ್ನು ತೆರಿಗೆಯ ಅರ್ಧ ಮಿತಿಗೆ ಒಳಪಟ್ಟು ಮೊಟಕುಗೊಳಿಸಲು, ನಾನು ಪ್ರಸ್ತಾವಿಸುತ್ತೇನೆ.

195. ರಾಜಿ ತೆರಿಗೆಯ ದರಗಳು ಹೆಚ್ಚಿದ್ದು, ಅನುಸೂಚಿಯಲ್ಲಿನ ತೆರಿಗೆ ದರ ಕಡಿಮೆ ಇದ್ದುದರಿಂದ ಕಳೆದ ವರ್ಷ ಲಾಟರಿ ಟಿಕೇಟುಗಳ ವರ್ತಕರಿಗೆ ನಾನು ಜಾರಿಗೊಳಿಸಿದ ರಾಜಿ ತೆರಿಗೆಯ ಯೋಜನೆಯು ಸಾಕಷ್ಟು ಪ್ರತಿಕ್ರಿಯೆಯನ್ನು ಪಡೆದಿಲ್ಲ. ಆದ್ದರಿಂದ ಲಾಟರಿ ಟಿಕೇಟುಗಳ ಮೇಲೆ ತೆರಿಗೆ ದರವನ್ನು ಶೇಕಡ 20 ಕ್ಕೆ ಹೆಚ್ಚಿಸಿ ಅನುಬಂಧ 3 ರಲ್ಲಿ ತೋರಿಸಿದ ಪ್ರಕಾರ ರಾಜಿ ತೆರಿಗೆ ದರಗಳನ್ನು ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

196. ಮೌಲ್ಯವರ್ಧಿತ ತೆರಿಗೆಯ ಪದ್ಧತಿಯ ಮುನ್ನುಡಿಯಾಗಿ ಭಾರತ ಸರ್ಕಾರವು ಘೋಷಿತ ಸರಕುಗಳ ಮೇಲೆ ಬಹು ಹಂತದ ತೆರಿಗೆ ವಿಧಿಸಲು ಅನುವು ಮಾಡಿಕೊಡಲು ಕೇಂದ್ರ ಮಾರಾಟ ತೆರಿಗೆ ಕಾನೂನಿಗೆ ತಿದ್ದುಪಡಿಗಳನ್ನು ಪ್ರಸ್ತಾಪಿಸಿದೆ. ಭಾರತ ಸರ್ಕಾರವು ಕೇಂದ್ರ ಮಾರಾಟ ತೆರಿಗೆ ಕಾನೂನಿಗೆ ಪ್ರಸ್ತಾವಿಸಿದ ತಿದ್ದುಪಡಿಗಳನ್ನು ಜಾರಿಮಾಡಿದ ನಂತರ ಅವುಗಳಿಗೆ ಬಹು ಹಂತದ ತೆರಿಗೆ ವಿಧಿಸುವಂತೆ ಅವಕಾಶ ಕಲ್ಪಿಸಲು ಕರ್ನಾಟಕ ಮಾರಾಟ ತೆರಿಗೆ ಕಾನೂನಿನಲ್ಲಿ ಹಾಗೂ ನಾಲ್ಕು ಮತ್ತು ಐದನೆ ಅನುಸೂಚಿಗಳಿಗೆ ಸೂಕ್ತ ತಿದ್ದುಪಡಿ ನಾನು ಪ್ರಸ್ತಾಪಿಸುತ್ತಿದ್ದೇನೆ.

197. ಈಗಿರುವ ಭಾರತೀಯ ಸಂಗೀತ ಉಪಕರಣಗಳ ನಮೂದೆಯಲ್ಲಿ ಇರುವ ದ್ವಂದವನ್ನು ನಿವಾರಿಸಲು ಸದರಿ ನಮೂದಿನಲ್ಲಿ ಭಾರತೀಯ ಸಂಗೀತ ಉಪಕರಣಗಳ ಪಟ್ಟಿಯನ್ನು ಮಾಡಲು ನಾನು ಪ್ರಸ್ತಾಪಿಸುತ್ತೇನೆ.

198. ನಾಲ್ಕನೇ ಅನುಸೂಚಿಯಲ್ಲಿರುವ ಸ್ಪಾಂಜ್ ಐರನ್ ಮತ್ತು ಟರ್ಬೋ ಪ್ರಾಪ್ ಏರ್ ಕ್ರಾಫ್ಟ್‌ಗಳಿಗೆ ಮಾರಿದ ಏವಿಯೇಶನ್ ಟರ್ಬೈನ್ ಫ್ಯುಯಲ್ ಇವು ಏಪ್ರಿಲ್ 2001 ರಿಂದ ಕೇಂದ್ರ ಮಾರಾಟ ತೆರಿಗೆ ತಿದ್ದುಪಡಿಯಂತೆ. ಘೋಷಿತ ಸರಕುಗಳಾಗಿದ್ದುದು ಅದನ್ನು

ಜಾರಿಗೆ ತರಲು ಪೂರ್ವಾನ್ವಯವಾಗಿ ನಾಲ್ಕನೇ ಅನುಸೂಚಿಗೆ ಸೂಕ್ತ ತಿದ್ದುಪಡಿ ತರಲು ನಾನು ಪ್ರಸ್ತಾಪಿಸುತ್ತೇನೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆ

199. ಕೇಂದ್ರ ಸರ್ಕಾರವು ಏಪ್ರಿಲ್ 2002 ರಿಂದ ಪೆಟ್ರೋಲಿಯಂ ಉತ್ಪನ್ನಗಳ ಸಂಬಂಧಿಸಿದಂತೆ ಆಡಳಿತ ಬೆಲೆ ನಿರ್ಧಾರಣೆ ನೀತಿಯನ್ನು (ಅಡ್ಮಿನಿಸ್ಟರ್ಡ್ ಪ್ರೈಸಿಂಗ್ ಮೆಕ್ಯಾನಿಜಮ್) ತೊಡೆದು ಹಾಕಲು ಘೋಷಿಸಿದೆ. ಇದರಿಂದ ಕಾಲಕಾಲಕ್ಕೆ ಈ ಸರಕುಗಳ ಬೆಲೆಗಳಲ್ಲಿ ಏರುಪೇರುಗಳಾಗ ಬಹುದಾಗಿದೆ. ಅತ್ಯಂತ ಹೆಚ್ಚಿನ ತೆರಿಗೆ ಆದಾಯ ತರುವ ಈ ಪೆಟ್ರೋಲಿಯಂ ಉತ್ಪನ್ನಗಳ ಅನುಸೂಚಿತ ತೆರಿಗೆ ದರವನ್ನು ಪರಿಷ್ಕರಿಸಿ ಅದನ್ನು ಒಂದು ಗರಿಷ್ಠ ದರವಾಗಿರುವಂತೆ ನಿಗಧಿ ಮಾಡಲು ನಾನು ಪ್ರಸ್ತಾವಿಸುತ್ತೇನೆ. ಇದರೊಂದಿಗೆಯೇ ಬಳಕೆದಾರರ ಹಾಗೂ ರಾಜ್ಯಸ್ವದ ಹಿತದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅಧಿಸೂಚನೆಗಳ ಮೂಲಕ ಒಂದು ಸೂಕ್ತ ತೆರಿಗೆ ದರವನ್ನು ನಿಗದಿಪಡಿಸುತ್ತೇನೆ.

200. ಅನುಬಂಧ 4 ರಲ್ಲಿ ತೋರಿಸಿರುವ ಪ್ರಕಾರ ಹೆಚ್ಚಿನ ಬೆಲೆಯ ಕೆಲವು ಕ್ಯಾಂಟೀನ್ ಸ್ಟೋರ್ಸ್ ಸರಕುಗಳ ಮೇಲಿನ ಶೇಕಡ 4ರ ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು ನಾನು ಪ್ರಸ್ತಾಪಿಸುತ್ತೇನೆ.

201. ಕನಿಷ್ಠ ದರಗಳ ಪಾಲನೆಗಾಗಿ ನಾನು ಕಂಪ್ಯೂಟರ್ ಸಾಫ್ಟ್‌ವೇರ್ ಮೇಲೆ ಶೇಕಡ 4 ದರದ ತೆರಿಗೆಯನ್ನು ಮರು ಜಾರಿಗೊಳಿಸಲು ಪ್ರಸ್ತಾಪಿಸುತ್ತೇನೆ.

ಕೇಂದ್ರ ಮಾರಾಟ ತೆರಿಗೆ

ಸುಧಾರಣೆ ಕ್ರಮಗಳು

202. ರಾಷ್ಟ್ರಾದ್ಯಂತ ಕನಿಷ್ಠ ದರಗಳನ್ನು ಅರ್ಥವತ್ತಾಗಿ ಮಾಡಲು ಭಾರತ ಸರ್ಕಾರವು ಕೇಂದ್ರ ಮಾರಾಟ ತೆರಿಗೆ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಪ್ರಸ್ತಾಪಿಸಿದೆ. ಅಂತರ ರಾಜ್ಯ ವಿಕ್ರಗಳಿಗೆ ಸಂಬಂಧಿಸಿದ ಶಾಸನಬದ್ಧ ನಮೂನೆ ಸಿ ಮತ್ತು ಡಿ ಗಳ ಮನ್ನಾ ಮಾಡುವ ರಾಜ್ಯಗಳ ಅಧಿಕಾರವನ್ನು ಸೀಮಿತಗೊಳಿಸುವ ತಿದ್ದುಪಡಿಯು ಇವುಗಳಲ್ಲಿ ಒಂದಾಗಿದೆ. ಸಿ ಮತ್ತು ಡಿ ನಮೂನೆಗಳ ಅವಶ್ಯಕತೆಗಳನ್ನು ಮನ್ನಾ ಮಾಡಿ ನೀಡಿರುವ ಎಲ್ಲಾ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳಲು ಆದರೆ ಹೊಸ ಷರತ್ತಿನೊಂದಿಗೆ ಈಗಾಗಲೇ ನೀಡಿರುವ ತೆರಿಗೆ ವಿನಾಯಿತಿ ಮತ್ತು ರಿಯಾಯಿತಿಗಳನ್ನು ಮುಂದುವರಿಸಲು ನಾನು ಪ್ರಸ್ತಾಪಿಸುತ್ತೇನೆ.

ಪರಿಹಾರಗಳು

203. ನಮ್ಮ ರಾಜ್ಯದಿಂದ ಅಂತರರಾಜ್ಯ ಮಾರಾಟವನ್ನು ಪ್ರೋತ್ಸಾಹ ಮಾಡುವ ಉದ್ದೇಶದಿಂದ ಸಿ ಅಥವಾ ಡಿ ಫಾರಂ ಆಧಾರಿತ ಪ್ಲಾಸ್ಟಿಕ್ ಓವನ್ ಸ್ಯಾಕ್ಸ್, ಸಿಮ್ ಕಾರ್ಡುಗಳು ಮತ್ತು ಸ್ಮಾರ್ಟ್ ಕಾರ್ಡುಗಳ ಅಂತರರಾಜ್ಯ ಮಾರಾಟದ ಮೇಲಿನ ತೆರಿಗೆಯನ್ನು ಶೇಕಡ 4 ರಿಂದ ಶೇಕಡ 2 ಕ್ಕೆ ಇಳಿಸಲು ನಾನು ಪ್ರಸ್ತಾಪಿಸುತ್ತೇನೆ.

ವಿಲಾಸ ತೆರಿಗೆ

ಸುಧಾರಣ ಕ್ರಮಗಳು

204. ಅನಿಶ್ಚಿತತೆ ಮತ್ತು ದ್ವಂದ್ವಾರ್ಥ ನಿವಾರಿಸಲು ಏಪ್ರಿಲ್ 2001 ರಿಂದ ವಿಲಾಸ ತೆರಿಗೆಗೆ ಒಳಪಡುವ ಆಮದು ಮಾಡಿದ ಎಲೆಕ್ಟ್ರಾನಿಕ್ ಸರಕುಗಳನ್ನು ಅನುಬಂಧ 5 ರಲ್ಲಿ ಇರುವಂತೆ ಪಟ್ಟಿಮಾಡಲು ನಾನು ಪ್ರಸ್ತಾಪಿಸುತ್ತೇನೆ.

ಮನರಂಜನಾ ತೆರಿಗೆ

ಸುಧಾರಣ ಕ್ರಮಗಳು

205.

(ಅ) ಪ್ರಾಯೋಜಿಕ ಮನರಂಜನೆಗಳ ಮೇಲೆ ತೆರಿಗೆ ವಿಧಿಸುವಲ್ಲಿರುವ ಅನಿಶ್ಚತೆ ತೊಡೆದು ಹಾಕಲು ಸಂಬಂದಪಟ್ಟ ನಿಯಮಗಳಿಗೆ ಸೂಕ್ತ ತಿದ್ದುಪಡಿತರಲು,

(ಆ) ಲೆಕ್ಕ ಪತ್ರ ಹಾಜರು ಮಾಡುವಂತೆ ಕೋರಲು ಮತ್ತು ಲೆಕ್ಕ ಪತ್ರಗಳನ್ನು ವಶ ಪಡಿಸಿಕೊಳ್ಳಲು ಹಾಗೂ ವ್ಯವಹಾರ ಸ್ಥಳವನ್ನು ಮೊಹರು ಮಾಡಲು ತನಿಖಾಧಿಕಾರಿಗಳಿಗೆ ಅಧಿಕಾರ ನೀಡುವ ನಿಯಮ ಅಳವಡಿಸಲು,

(ಇ) ನಿಯಮ ಉಲ್ಲಂಘನೆಯ ಬಗ್ಗೆ ಪ್ರಥಮ ಅಪರಾಧಕ್ಕೆ ರೂಪಾಯಿ 10 ಸಾವಿರ ಹಾಗೂ ತದನಂತರದ ಅದೇ ಆರ್ಥಿಕ ವರ್ಷದಲ್ಲಿಲಾದ ಪ್ರತಿಯೊಂದು ಅಪರಾಧಕ್ಕೆ 15 ಸಾವಿರ ರೂಪಾಯಿಗಳಿಗೆ ದಂಡವನ್ನು ಹೆಚ್ಚಿಸಲು, ನಾನು ಪ್ರಸ್ತಾಪಿಸುತ್ತೇನೆ.

206.ಅಲ್ಲದೆ

(1) ಬಿಲಿಯರ್ಡ್ಸ್, ಸ್ನೂಕರ್, ಬೌಲಿಂಗ್, ವಿಡಿಯೋ ಗೇಮ್ ಮುಂತಾದವುಗಳು ಇರುವ ಅಮ್ಯೂಸ್ ಮೆಂಟ್ ಪಾರ್ಕ್, ಥೀಮ್ ಪಾರ್ಕ್, ವಾಟರ್ ಪಾರ್ಕ್, ರಿಕ್ರಿಯೇಷನ್ ಪಾರ್ಲರ್ ಇವುಗಳ ಪ್ರವೇಶ ದರಗಳ ಮೇಲೆ ಶೇಕಡ 20 ತೆರಿಗೆ ವಿಧಿಸಲು,

(2) ವಿಡಿಯೋ ಪಾರ್ಲರ್‌ಗಳ ರಾಜಿ ತೆರಿಗೆ ಹಣವನ್ನು ಮುಂದಿನಂತೆ ಹೆಚ್ಚಿಸಲು,

(ಅ) ಕಾರ್ಪೋರೇಷನ್ ಮಿತಿಯೊಳಗಿದ್ದರೆ ತಿಂಗಳಿಗೆ ರೂ. 15 ಸಾವಿರ

(ಆ) ಸಿಟಿ ಹಾಗೂ ಟೌನ್ ಮುನಿಸಿಪಾಲಿಟಿ ಮಿತಿಯೊಳಗಿದ್ದರೆ ತಿಂಗಳಿಗೆ ರೂ.7,500, ಹಾಗೂ

(3) ಕೇಬಲ್ ಆಪರೇಟರುಗಳಿಗೆ ಸೆಟಲೈಟ್ ಹಾಗೂ ಇತರ ಟಿವಿ ಚಾನಲ್‌ಗಳ ಸಿಗನ್ನಲ್‌ಗಳನ್ನು ಪೂರೈಸುವ ಮಲ್ಟಿ ಸಿಸ್ಟಮ್ ಆಪರೇಟರುಗಳ ಸ್ವೀಕೃತಿ ಹಣದ ಮೇಲೆ ಶೇಕಡ 10 ರಂತೆ ತೆರಿಗೆ ವಿಧಿಸಲು ನಾನು ಪ್ರಸ್ತಾಪಿಸುತ್ತೇನೆ.

ಪರಿಹಾರಗಳು

207.

(ಅ) 31.3.2002 ರಂದು ಅಥವಾ ಅದಕ್ಕೂ ಮೊದಲು ಸೆನ್ಸಾರ್ ಸರ್ಟಿಫಿಕೇಟ್ ಪಡೆದ ಬೇರೆ ಭಾಷೆಗಳಿಂದ ರಿಮೇಕ್ ಆದ ಕನ್ನಡ ಚಿತ್ರಗಳ ಮೇಲಿನ 1.4.96 ರಿಂದ 31.3.2002 ರ ಅವಧಿಯ ತೆರಿಗೆಯನ್ನು ವಿನಾಯಿತಿ ಮಾಡಲು,

(ಆ) 1.4.2002 ರಿಂದ ಒಂದು ವರ್ಷದ ಅವಧಿಗೆ ರಿಮೇಕ್ ಕನ್ನಡ ಚಿತ್ರಗಳಿಗೆ ಶೇಕಡ 25 ರಷ್ಟು ತೆರಿಗೆ ಕಡಿಮೆ ಮಾಡಲು,

(ಇ) ಕನ್ನಡೇತರ ಚಿತ್ರಗಳಿಗೆ ಶೇಕಡ 80 ರಿಂದ ಶೇಕಡ 70 ಕ್ಕೆ ತೆರಿಗೆ ಕಡಿಮೆ ಮಾಡಲು,

(ಈ) ಆಟಗಳ ಮತ್ತು ಕ್ರೀಡೆಗಳ ಸರಿಸಮವಾಗಿ ಸಾಂಸ್ಕೃತಿಕ ಚಟುವಟಿಕೆಗಳ ಪ್ರವೇಶ ದರದ ವಿನಾಯಿತಿ ಮಿತಿಯನ್ನು ರೂಪಾಯಿ 100 ರಿಂದ ರೂ.250 ಕ್ಕೆ ಹೆಚ್ಚಿಸಲು, ಮತ್ತು

(ಉ) ಪ್ರದರ್ಶಕರು ಸಂಗ್ರಹಿಸಲು ಅನುಮತಿ ಇರುವ ತೆರಿಗೆ ಬಾಧ್ಯತೆ ಇಲ್ಲದ ಸೇವಾ ಶುಲ್ಕವನ್ನು ಈಗಿನ 1 ರೂಪಾಯಿಂದ ರೂ.1.50 ಕ್ಕೆ ಹೆಚ್ಚಿಸಲು, ನಾನು ಪ್ರಸ್ತಾವಿಸುತ್ತೇನೆ.

ಕೃಷಿ ವರಮಾನ ತೆರಿಗೆ

ಪರಿಹಾರಗಳು

208. ರಾಜಿ ತೆರಿಗೆ ಸೌಲಭ್ಯ ಆಯ್ಕೆ ಮಾಡುವ ಕರದಾತರಿಗೆ ರಾಜಿ ತೆರಿಗೆಯನ್ನು ಕಡ್ಡಾಯವಾಗಿ 3 ವರ್ಷದವರೆಗೆ ಸಂದಾಯ ಮಾಡುವ ನಿಬಂಧನೆಯನ್ನು ತೆಗೆದು ಹಾಕಲು ಮತ್ತು ಅವರು ಇಚ್ಛಿಸಿದರೆ 1 ವರ್ಷಕ್ಕೆ ಮಾತ್ರ ಈ ಸೌಲಭ್ಯ ಹೊಂದಲು ಅನುವು ಮಾಡಿಕೊಡಲು ನಾನು ಪ್ರಸ್ತಾವಿಸುತ್ತೇನೆ.

ಜೂಜು ತೆರಿಗೆ

209. ಅನುಬಂಧ 6 ರಲ್ಲಿ ತೋರಿಸಿರುವ ಪ್ರಕಾರ ಜೂಜು ತೆರಿಗೆ ದರಗಳನ್ನು ಹೆಚ್ಚಿಸಲು ಹಾಗೂ ರಾಜಿ ತೆರಿಗೆ ಮೊತ್ತಗಳ ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ,

ಪ್ರವೇಶ ತೆರಿಗೆ

210. ಈಗಾಗಲೇ ಎಲ್ಲಾ ಕಚ್ಚಾ ಸಾಮಗ್ರಿಗಳ (ತಂಬಾಕು ಉತ್ಪನ್ನಗಳು ಹಾಗೂ ಮದ್ಯಪಾನೀಯಗಳ ತಯಾರಿಕೆಯಲ್ಲಿ ಬಳಸುವ ಕಚ್ಚಾ ಸಾಮಗ್ರಿ ಹೊರತುಪಡಿಸಿ) ಮೇಲೆ ಈಗ ವಿಧಿಸುತ್ತಿರುವ ಶೇಕಡ 1 ಪ್ರವೇಶ ತೆರಿಗೆಯನ್ನು ಮತ್ತು ಎಲ್ಲಾ ಪ್ಯಾಕಿಂಗ್ ವಸ್ತುಗಳ ಮೇಲಿನ ಪ್ರವೇಶ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾಪಿಸುತ್ತೇನೆ,

211. ಇದಲ್ಲದೆ ಮುಂದಿನ ಸುಧಾರಣ ಕ್ರಮಗಳನ್ನು ನಾನು ಪ್ರಸ್ತಾಪಿಸುತ್ತೇನೆ. ನಿಯಮಗಳನ್ನು ಉಲ್ಲಂಘಿಸಿ ಸರಕು ಸಾಗಣೆ ಮಾಡುವ ಬಗ್ಗೆ ಇರುವ ದಂಡವನ್ನು ಕರ್ನಾಟಕ ಮಾರಾಟ ತೆರಿಗೆಯ ದಂಡದ ನಿಯಮಗಳಿಗೆ ಸಮನಾಗಿಸುವುದು.

212. ವಹಿವಾಟು ತೆರಿಗೆ ಮತ್ತು ಸೆಸ್‌ಗಳ ರದ್ದತಿಯ ಪರಿಣಾಮವಾಗಿ,

(ಅ) ಪೆಟ್ರೋಲಿಯಂ ಪ್ರಾಡಕ್ಟ್ ಮೇಲೆ ವಿಧಿಸುತ್ತಿರುವ ಪ್ರವೇಶ ತೆರಿಗೆಯನ್ನು ಪರಿಷ್ಕರಿಸಿ ಶೇಕಡ 5 ನಿಗದಿಪಡಿಸಲು.

(ಆ) ಸಿಮೆಂಟ್ ಮೇಲೆ ಶೇಕಡ 5 ತೆರಿಗೆ ವಿಧಿಸಲು,

(ಇ) ರಬ್ಬರ್ ಮತ್ತು ಇತರ ಟೈರ್ ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳ ಮೇಲಿನ ತೆರಿಗೆಯನ್ನು ಶೇಕಡ 2ಕ್ಕೆ ಪರಿಷ್ಕರಿಸಲು ನಾನು ಪ್ರಸ್ತಾಪಿಸುತ್ತೇನೆ.

213.

(ಅ) ಹೊರ ರಾಜ್ಯದಿಂದ ರಾಜ್ಯದೊಳಕ್ಕೆ ತಂದ ಅಮೃತ ಶಿಲೆ ಮತ್ತು ಅಮೃತ ಶಿಲೆಯ ವಸ್ತುಗಳು ಹಾಗೂ ಪ್ಲಾಸ್ಟಿಕ್ ಗ್ರಾನ್ಯುಲ್‌ಗಳ ಮೇಲೆ, ವ್ಯಾಪಾರ ಪಲ್ಲಟವಾಗುವುದನ್ನು ತಡೆಯಲು ಹಾಗೂ ಸ್ಥಳೀಯ ವ್ಯಾಪಾರ ಮತ್ತು ಉದ್ದಿಮೆಗಳನ್ನು ಸಂರಕ್ಷಿಸಲು, ರಾಜ್ಯದಲ್ಲಿ ಪಾವತಿಸಬೇಕಾದ ಮಾರಾಟ ತೆರಿಗೆಯ ಮೊತ್ತಕ್ಕೆ ಸೆಟ್-ಆಫ್ ನೀಡುವ ಅವಕಾಶದೊಂದಿಗೆ ಕರ್ನಾಟಕ ಮಾರಾಟ ತೆರಿಗೆಯ ದರದಷ್ಟೇ ಪ್ರವೇಶ ತೆರಿಗೆ ದರವನ್ನು ವಿಧಿಸಲು ಅವಕಾಶ ನೀಡುವ ಹೊಸ ಕಾನೂನನ್ನು ತರಲು ಮತ್ತು

(ಆ) ವ್ಯಾಪಾರ ಪಲ್ಲಟವನ್ನು ತಡೆಯಲು ನ್ಯಾಫ್ತಾ ಮೇಲೆ ಶೇಕಡ 5 ದರದಲ್ಲಿ ಪ್ರವೇಶ ತೆರಿಗೆ ವಿಧಿಸಲು, ನಾನು ಪ್ರಸ್ತಾಪಿಸುತ್ತೇನೆ.

214. ಈ ಸುಧಾರಣೆಗಳು ವ್ಯಾಪಾರ ಮತ್ತು ಚೈತನ್ಯ ನೀಡಿ ನಿರೀಕ್ಷಿತ ರಾಜಸ್ವ ನಷ್ಟವನ್ನು ಕಡಿಮೆ ಮಾಡುತ್ತೇವೆ ಎಂದು ನಾನು ನಂಬಿದ್ದೇನೆ.

ತತ್ಪರಿಣಾಮದ ತಿದ್ದುಪಡಿಗಳು

215. ಈ ಮೇಲಿನ ಪ್ರಸ್ತಾವನೆಗಳು ಆಯಾ ತೆರಿಗೆ ಕಾನೂನುಗಳಿಗೆ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯನ್ನುಂಟು ಮಾಡುತ್ತವೆ. ಈ ತಿದ್ದುಪಡಿಗಳನ್ನು ಸುಧಾರಣೆ ಮಾಡುವ ಇತರ ತಿದ್ದುಪಡಿಗಳೊಂದಿಗೆ ಸದನದ ಮುಂದೆ ಪರಾಮರ್ಶೆ ಹಾಗೂ ಸಮ್ಮತಿಗಾಗಿ ಇರಿಸಲಾಗುವುದು.

ಅಬಕಾರಿ

216. ಚಿಲ್ಲರೆ ಮದ್ಯದ ಅಂಗಡಿಗಳು (ಸಿಎಲ್-2), ರಿಫ್ರೆಷ್‌ಮೆಂಟ್ ಕೊಠಡಿಗಳು (ಬಾರ್) (ಸಿಎಲ್-9), ಹೋಟೆಲುಗಳು ಮತ್ತು ಬೋರ್ಡಿಂಗ್ ಹೌಸ್‌ಗಳು (ಸಿಎಲ್-7) ಮತ್ತು ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡೆಂಡ್ ವೇರ್‌ಹೌಸ್ (ಸಿಎಲ್-8) ಲೈಸನ್ಸುಗಳ ಮೇಲಿನ ಸನ್ನದು ಶುಲ್ಕವನ್ನು ಹೆಚ್ಚಿಸಲು ಮತ್ತು ಬಾಟಲಿಂಗ್ ಸನ್ನದು ಶುಲ್ಕವನ್ನು ಪರಿಷ್ಕರಿಸಲು ಅನುಬಂಧ-8 ರಲ್ಲಿ ಕೊಟ್ಟಿರುವಂತೆ ಪ್ರಸ್ತಾಪಿಸುತ್ತೇನೆ. ಪ್ರತಿಯೊಬ್ಬ ಸಗಟು ಮದ್ಯದ ಲೈಸನ್ಸುದಾರನಿಂದ, ಯಾವುದೇ ಬಾಕಿ ಅಥವಾ ಅಬಕಾರಿ ಸನ್ನದುಗಳ ಷರತ್ತುಗಳ ಉಲ್ಲಂಘನೆಗಾಗಿ ವಿಧಿಸುವ ದಂಡದ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳಲು,

10 ಲಕ್ಷ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿಯನ್ನು ಸನ್ನದುಗಳನ್ನು ನೀಡುವ ಅಥವಾ ನವೀಕರಿಸವ ಸಂದರ್ಭದಲ್ಲಿ ಪಡೆಯಲು ಪ್ರಸ್ತಾಪಿಸುತ್ತೇನೆ.

217. ಸ್ಟಾರ್ ಹೋಟೆಲುಗಳು ಮತ್ತು ಇತರೆ ಹೋಟೆಲುಗಳಿಗೆ ನೀಡುವ ಲೈಸನ್ಸುಗಳ ಮಧ್ಯೆ ಸ್ಪಷ್ಟವಾದ ವ್ಯತ್ಯಾಸವನ್ನು ಮಾಡುವ ಬಗ್ಗೆ ಸ್ಟಾರ್ ಹೋಟೆಲ್ ಲೈಸನ್ಸುಗಳು (ಸಿಎಲ್-6ಎ) ಎಂಬ ಲೈಸನ್ಸಿನ ಒಂದು ಹೊಸ ವರ್ಗವನ್ನು ವಾರ್ಷಿಕ 4 ಲಕ್ಷ ರೂಪಾಯಿಗಳ ಶುಲ್ಕವನ್ನು ವಿಧಿಸುವುದರೊಂದಿಗೆ ಪ್ರಾರಂಭಿಸಲು ಪ್ರಸ್ತಾಪಿಸುತ್ತೇನೆ. ಹೋಟೆಲುಗಳು ಮತ್ತು ಬೋರ್ಡಿಂಗ್ ಹೌಸ್ (ಸಿಎಲ್-7) ಲೈಸನ್ಸುಗಳನ್ನು ಹೊಸದಾಗಿ ನೀಡುವಾಗ ಕಾರ್ಪೊರೇಶನ್ ವ್ಯಾಪ್ತಿಯಲ್ಲಿ ಕನಿಷ್ಠ 30 ಕೊಠಡಿಗಳನ್ನು ಮತ್ತು ಇತರೆ ಸ್ಥಳಗಳಲ್ಲಿ ಕನಿಷ್ಟ 20 ಕೊಠಡಿಗಳನ್ನು ಹೊಂದಿರುವ ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್‌ಗಳಿಗೆ ಮಾತ್ರ ನೀಡಲಾಗುವುದು. ಆದರೆ ಚಾಲ್ತಿಯಲ್ಲಿರುವ ಲೈಸನ್ಸುಗಳನ್ನು ಸದ್ಯದಲ್ಲಿರುವ ನಿಯಮಗಳನ್ವಯ ನವೀಕರಿಸಲಾಗುವುದು.

218. ವಿಷಯ ಸಮಿತಿಯು, ಕ್ಲಬ್‌ಗಳು ಇರುವ ಸ್ಥಳ ಹಾಗೂ ಜನಸಂಖ್ಯೆಯನ್ನು ಪರಿಗಣಿಸಿ ಕ್ಲಬ್‌ಗಳ ಮೇಲೆ ವಿಧಿಸುವ ಸನ್ನದು ಶುಲ್ಕವನ್ನು ಕಡಿಮೆ ಮಾಡಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ ಅನುಬಂಧದಲ್ಲಿ ತಿಳಿಸಿರುವಂತೆ ಸನ್ನದು ಶುಲ್ಕವನ್ನು ಪರಿಷ್ಕರಿಸಲು ಪ್ರಸ್ತಾಪಿಸುತ್ತೇನೆ. ಹೊಸದಾಗಿ ಲೈಸನ್ಸುಗಳನ್ನು, ಸ್ವಂತದ ಸ್ಥಳ ಹಾಗೂ ಕಟ್ಟಡಗಳನ್ನು ಹೊಂದಿರುವ ಅಥವಾ ಅವುಗಳನ್ನು ದೀರ್ಘಕಾಲದ ಗುತ್ತಿಗೆಯ ಮೇಲೆ ಪಡೆದಿರುವ ಹಾಗೂ ಹೊರಾಂಗಣ ಮತ್ತು ಒಳಾಂಗಣ ಕ್ರೀಡೆಗಳಿಗೆ ನಿಗದಿತ ಸೌಲಭ್ಯವನ್ನು ಹೊಂದಿರುವ ಕ್ಲಬ್‌ಗಳಿಗೆ ಮಾತ್ರ ನೀಡಲಾಗುವುದು. ಆದಾಗ್ಯೂ ಚಾಲ್ತಿಯಲ್ಲಿರುವ ಕ್ಲಬ್‌ಗಳಿಗೆ ಸದ್ಯದಲ್ಲಿರುವ ನಿಯಮಗಳನ್ವಯ ಲೈಸನ್ಸನ್ನು ನವೀಕರಿಸಿಕೊಳ್ಳಲು ಅವಕಾಶ ನೀಡಲಾಗುವುದು.

219. ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ, ಆಮದು ಮಾಡಿಕೊಂಡ ವಿದೇಶಿ ಮದ್ಯಗಳ ಮೇಲಿನ ತೆರಿಗೆಯನ್ನು ಸುವ್ಯವಸ್ಥೆಗೊಳಿಸಲಾಗುವುದು. ಪರಿಷ್ಕರಿಸಿದ ಲೇಬಲ್ ಅನುಮೋದನಾ ಶುಲ್ಕವನ್ನು ಅನುಬಂಧ-8 ರಲ್ಲಿ ತೋರಿಸಲಾಗಿದೆ. ವಿಶೇಷ ಶುಲ್ಕವು, ಈ ಕೆಳಗಿನಂತಿದ್ದು ದಿನಾಂಕ 1-4-2002 ರಿಂದ ಜಾರಿಗೆ ಬರುತ್ತದೆ,-

(ಎ) ಬೀರ್ ಮತ್ತು ವೈನ್‌ಗಳನ್ನು ಹೊರತುಪಡಿಸಿ ಉಳಿದ ಮದ್ಯಕ್ಕೆ ಶೇಕಡಾ 66 ಅಡ್ವಲರೆಮ್‌ನಂತೆ (ಭಾರತ ಸರ್ಕಾರವು ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಲ್ಯಾನ್‌ಡಿಂಗ್ ಕಾಸ್ಟ್ ಮೇಲೆ) ಅಥವಾ ಲೀಟರಿಗೆ ರೂ. 130 ರಂತೆ, ಯಾವುದು ಅಧಿಕವೋ ಅದನ್ನು, 9 ಲೀಟರುಗಳ ಒಂದು ಪೆಟ್ಟಿಗೆಗೆ 1200 ರೂಪಾಯಿಗಳ ವರೆಗಿನ ಬೆಲೆಯ ಮದ್ಯಕ್ಕೆ ಮತ್ತು 9 ಲೀಟರುಗಳ ಒಂದು ಪೆಟ್ಟಿಗೆಗೆ 1200 ರೂಪಾಯಿಗಳಿಗೆ ಹೆಚ್ಚಿನ ಬೆಲೆಯ ಮದ್ಯಕ್ಕೆ ಶೇಕಡಾ 33 ಅಡ್ವಲರೆಮ್‌ನಂತೆ (ಭಾರತ ಸರ್ಕಾರವು ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಲ್ಯಾನ್‌ಡಿಂಗ್ ಕಾಸ್ಟ್ ಮೇಲೆ) ವಿಧಿಸಲಾಗುವುದು.

(ಬಿ) ಬೀರ್ ಮೇಲೆ ಶೇಕಡಾ 66 ಅಡ್ವಲರೆಮ್‌ನಂತೆ (ಭಾರತ ಸರ್ಕಾರವು ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಲ್ಯಾನ್‌ಡಿಂಗ್ ಕಾಸ್ಟ್ ಮೇಲೆ) ಅಥವಾ ಬಲ್ಕ್ ಲೀಟರಿಗೆ ರೂ.40 ರಂತೆ, ಯಾವುದು ಅಧಿಕವೋ ಅದನ್ನು ವಿಧಿಸಲಾಗುವುದು.

(ಸಿ) ವೈನ್ ಮೇಲೆ ಶೇಕಡಾ 66 ಅಡ್ವಲರೆಮ್‌ನಂತೆ (ಭಾರತ ಸರ್ಕಾರವು ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಲ್ಯಾನ್‌ಡಿಂಗ್ ಕಾಸ್ಟ್ ಮೇಲೆ) ಅಥವಾ ಲೀಟರಿಗೆ ರೂ.200 ರಂತೆ, ಯಾವುದು ಅಧಿಕವೋ ಅದನ್ನು, 9 ಲೀಟರುಗಳ ಒಂದು ಪೆಟ್ಟಿಗೆಗೆ 1200 ರೂಪಾಯಿಗಳವರೆಗಿನ ಬೆಲೆಯ ವೈನಿಗೆ ಮತ್ತು 9 ಲೀಟರುಗಳ ಒಂದು ಪೆಟ್ಟಿಗೆಗೆ 1200 ರೂಪಾಯಿಗಳಿಗೆ ಹೆಚ್ಚಿನ ಬೆಲೆಯ ವೈನಿಗೆ ಶೇಕಡಾ 33 ಅಡ್ವಲರೆಮ್‌ನಂತೆ (ಭಾರತ ಸರ್ಕಾರವು ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಲ್ಯಾನ್‌ಡಿಂಗ್ ಕಾಸ್ಟ್ ಮೇಲೆ) ವಿಧಿಸಲಾಗುವುದು.

220. ರಾಜ್ಯದಲ್ಲಿ ಲಭ್ಯವಿರುವ ಹೆಚ್ಚಿನ ಮರುಭಟ್ಟಿ ಇಳಿಸುವ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳುವುದಕ್ಕಾಗಿ ಮತ್ತು ರೆಕ್ಟಿಫೈಡ್ ಸ್ಪಿರಿಟ್ ಹಾಗೂ ನ್ಯೂಟ್ರಲ್ ಸ್ಪಿರಿಟ್‌ಗಳನ್ನು ರಫ್ತು ಮಾಡುವುದನ್ನು ಉತ್ತೇಜಿಸುವುದಕ್ಕಾಗಿ, ರೆಕ್ಟಿಫೈಡ್ ಸ್ಪಿರಿಟ್‌ನ ಮೇಲೆ ವಿಧಿಸುವ ತೆರಿಗೆಯನ್ನು ಅನುಬಂಧ-8 ರಲ್ಲಿ ತೋರಿಸಿರುವಂತೆ ಬದಲಾವಣೆ ಮಾಡಲು ಪ್ರಸ್ತಾಪಿಸುತ್ತೇನೆ.

221. ಕಾಕಂಬಿಯಿಂದ ಮದ್ಯಸಾರವನ್ನು ತಯಾರಿಸುವ ಭಟ್ಟಿ ಕಾರ್ಖಾನೆಗಳಿಗೆ, ಕಾಕಂಬಿಯಿಂದ ಮದ್ಯಸಾರವನ್ನು ತಯಾರಿಸಲು ಲೈಸನ್ಸು ಪಡೆದಿರುವ, ಆದರೆ ಪ್ರಾಥಮಿಕ ಡಿಸ್ಟಲರಿಯನ್ನು ಸ್ಥಾಪಿಸದೆ ಕೇವಲ ಮರುಭಟ್ಟಿ ಸ್ಥಾವರವನ್ನು ಸ್ಥಾಪಿಸಿರುವಂತಹ ಲೈಸನ್ಸುದಾರರಿಗೆ ಮರುಭಟ್ಟಿ ಇಳಿಸುವುದಕ್ಕಾಗಿ ಮತ್ತು ಹಾಗೆ ಮರುಭಟ್ಟಿ ಇಳಿಸಿದ ನ್ಯೂಟ್ರಲ್ ಸ್ಪಿರಿಟ್ ಅಥವಾ ಎಕ್ಸಟ್ರಾ ನ್ಯೂಟ್ರಲ್ ಸ್ಪಿರಿಟ್ ಅನ್ನು ರಫ್ತು ಮಾಡುವುದಕ್ಕಾಗಿ, ರೆಕ್ಟಿಫೈಡ್ ಸ್ಪಿರಿಟ್ ಅನ್ನು ಬಲ್ಕ್ ಲೀಟರಿಗೆ 3 ರೂಪಾಯಿಗಳ ಶುಲ್ಕವನ್ನು ಪಡೆದು ನೀಡಲು ಮತ್ತು ಮರುಭಟ್ಟಿ ಇಳಿಸಿದ ನ್ಯೂಟ್ರಲ್ ಸ್ಪಿರಿಟ್ ಅಥವಾ ಎಕ್ಸಟ್ರಾ ನ್ಯೂಟ್ರಲ್ ಸ್ಪಿರಿಟ್ ಅನ್ನು ಬಲ್ಕ್ ಲೀಟರಿಗೆ ರೂ. 0.50 ಶುಲ್ಕವನ್ನು ನೀಡಿ ರಫ್ತು ಮಾಡಲು ಮರುಭಟ್ಟಿ ಇಳಿಸಿದ ಅಂತಹ ಡಿಸ್ಟಿಲರಿಗಳಿಗೆ ಅನುಮತಿ ನೀಡಲು ಸಹಾ ಪ್ರಸ್ತಾಪಿಸುತ್ತೇನೆ. ಸ್ವಂತದ ಬಳಕೆಗಾಗಿ ಉಪಯೋಗಿಸುವ ರೆಕ್ಟಿಫೈಡ್ ಸ್ಪಿರಿಟ್ ಹಾಗೂ ಬೇರೆಯವರಿಗೆ ಮಾರಾಟ ಮಾಡುವ ರೆಕ್ಟಿಫೈಡ್ ಸ್ಪಿರಿಟ್‌ನ ಮೇಲೆ ವಿಧಿಸುವ ಶುಲ್ಕದ ವ್ಯತ್ಯಾಸವನ್ನು ಕಡಿಮೆ ಮಾಡುವುದಕ್ಕಾಗಿ, ಸ್ವಂತದ ಬಳಕೆಗಾಗಿ ಉಪಯೋಗಿಸುವ ರೆಕ್ಟಿಫೈಡ್ ಸ್ಪಿರಿಟ್ ಮೇಲೆ ವಿಧಿಸುವ ಶುಲ್ಕವನ್ನು ಬಲ್ಕ್ ಲೀಟರಿಗೆ ರೂ. 3.00 ರಿಂದ ರೂ. 4.00 ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

222. ಸ್ಥಳೀಯ ಉದ್ದಿಮೆಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಅನ್ನು ರಫ್ತು ಮಾಡಲು ಪ್ರೋತ್ಸಾಹವನ್ನು ನೀಡುವುದಕ್ಕಾಗಿ, ಮಾನವ ಸೇವನೆಗೆ ಬಳಸಲು ರಫ್ತು ಮಾಡುವ ರೆಕ್ಟಿಫೈಡ್ ಸ್ಪಿರಿಟ್‌ನ ಮೇಲಿನ ಶುಲ್ಕವನ್ನು ಬಲ್ಕ್ ಲೀಟರಿಗೆ ರೂ. 3.50 ರಿಂದ ರೂ. 3.00ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಅಲ್ಲದೆ, ಮಾನವ ಸೇವನೆಗೆ ಬಳಸದ, ರಫ್ತು ಮಾಡುವ

ರೆಕ್ಟಿಫೈಡ್ ಸ್ಪಿರಿಟ್‌ನ ಮೇಲಿನ ಶುಲ್ಕವನ್ನು, ಬಲ್ಕ್ ಲೀಟರಿಗೆ ರೂ. 2.75 ರಿಂದ ರೂ. 3.00 ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ರಾಜ್ಯದಲ್ಲಿ ಲಭ್ಯವಿರುವ ಕಾಕಂಬಿಯನ್ನು ಹಾಗೂ ಭಟ್ಟಿ ಇಳಿಸುವ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳುವುದಕ್ಕಾಗಿ ಲೀಟರಿಗೆ ರೂ. 1.00 ಶುಲ್ಕವನ್ನು ನೀಡಿ ಭಾರತದ ಹೊರಕ್ಕೆ ರೆಕ್ಟಿಫೈಡ್ ಸ್ಪಿರಿಟನ್ನು ರಫ್ತು ಮಾಡಲು ಅನುಮತಿ ನೀಡಲು ಸಹಾ ಪ್ರಸ್ತಾಪಿಸುತ್ತೇನೆ.

223. ರೆಕ್ಟಿಫೈಡ್ ಸ್ಪಿರಿಟ್‌ಗೆ ಸಂಬಂಧಿಸಿದ ಮೇಲಿನ ಪ್ರಸ್ತಾವಗಳು ದಿನಾಂಕ 1-4-2002 ರಿಂದ ಜಾರಿಗೆ ಬರುತ್ತವೆ.

224. ತೆರಿಗೆ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ, ಕಾಕಂಬಿಯ ತಯಾರಿಕೆ, ಸಂಗ್ರಹಣೆ, ಮಾರಾಟ, ಬಳಕೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ, ಆವಶ್ಯಕವಾದ ಕಾನೂನನ್ನು ತರಲು ಪ್ರಸ್ತಾಪಿಸುತ್ತೇನೆ.

225. ಬ್ಯಾಂಕ್ ಗ್ಯಾರಂಟಿಯ ಸಂಗ್ರಹಣೆ ಮತ್ತು ಸಾರಾಯಿ ಕಿಸ್ತಿನ ಸುಭದ್ರತೆಗಾಗಿ ಪ್ರಸ್ತುತ ಚಾಲ್ತಿಯಲ್ಲಿರುವ 1 ತಿಂಗಳ ಭದ್ರತಾ ಠೇವಣಿಗೆ (Earnest money deposit) ಗೆ ಬದಲಾಗಿ ಒಂದೂವರೆ ತಿಂಗಳ ಭದ್ರತಾ ಠೇವಣಿಯನ್ನು ಅಬಕಾರಿ ಹರಾಜು ಅಥವಾ ಟೆಂಡರ್‌ನಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಸಲ್ಲಿಸುವಂತೆ ಪ್ರಸ್ತಾಪಿಸುತ್ತೇನೆ. ಬಿಡ್ಡನ್ನು ಸ್ಥಿರೀಕರಿಸಿದ ಆದೇಶವನ್ನು ಸ್ಥಿಕರಿಸಿದ ವ್ಯಕ್ತಿಯು, ಅಂತಹ ಸ್ಥಿರೀಕರಣ ಆದೇಶವನ್ನು ಸ್ವೀಕರಿಸಿದ.-

ಎ. ಹದಿನೈದು ದಿನಗಳ ಒಳಗಾಗಿ ಒಂದು ತಿಂಗಳ ಬಾಡಿಗೆ ಹಣಕ್ಕೆ ಸಮನಾದ ಒಂದು ಬ್ಯಾಂಕ್ ಗ್ಯಾರಂಟಿಯನ್ನು,-

ಬಿ. ಮೂವತ್ತು ದಿನಗಳ ಒಳಗಾಗಿ ಒಂದು ತಿಂಗಳ ಬಾಡಿಗೆ ಹಣಕ್ಕೆ ಸಮನಾದ ಇನ್ನೊಂದು ಬ್ಯಾಂಕ್ ಗ್ಯಾರಂಟಿಯನ್ನು,- ಮತ್ತು

ಸಿ. ಅರವತ್ತು ದಿನಗಳ ಒಳಗಾಗಿ ಒಂದು ತಿಂಗಳ ಬಾಡಿಗೆ ಹಣಕ್ಕೆ ಸಮನಾದ ಮೂರನೆಯ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸತಕ್ಕದ್ದು, ಹಾಗೆ ಸಲ್ಲಿಸದ ಪಕ್ಷದಲ್ಲಿ ಗುತ್ತಿಗೆಯನ್ನು ರದ್ದುಪಡಿಸತಕ್ಕದ್ದು.

226. ಅಲ್ಲದೆ ಸಾರಾಯಿ ಹರಾಜಿನಲ್ಲಿ ಸ್ಪರ್ಧಾತ್ಮಕವಾಗಿ ಭಾಗವಹಿಸಲು ಉತ್ತೇಜನವನ್ನು ನೀಡುವುದಕ್ಕಾಗಿ, ಮತ್ತು ದೇಶದಲ್ಲಿ ಚಾಲ್ತಿಯಲ್ಲಿರುವ ಬಡ್ಡಿಯ ದರವನ್ನು ಗಮನದಲ್ಲಿಟ್ಟುಕೊಂಡು, ವಿಳಂಬವಾಗಿ ಪಾವತಿ ಮಾಡಿದ ಅಂಗಡಿ ಬಾಡಿಗೆ ಹಣದ ಮೇಲೆ ವಿಧಿಸುವ ಬಡ್ಡಿಯನ್ನು ಶೇಕಡಾ 15 ಕ್ಕೆ ಪರಿಷ್ಕರಿಸಲು ಪ್ರಸ್ತಾಪಿಸುತ್ತೇನೆ.

227. ಜಾರಿ ಮತ್ತು ತನಿಖೆಯನ್ನು ಮತ್ತಷ್ಟು ಬಲಗೊಳಿಸಲು, ಅಬಕಾರಿ ಮೊಕದ್ದಮೆಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕಾಗಿ, ಜಪ್ತಿ ಮಾಡಿದ ವಾಹನಗಳನ್ನು, ಇಂಡಮ್ನಿಟಿ ಬಾಂಡಿನ ಬದಲಾಗಿ, ವಾಹನದ ಬೆಲೆಗೆ ಸಮನಾದ ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದಲ್ಲಿ ಮಾತ್ರ ಬಿಡುಗಡೆಗೊಳಿಸುವಂತೆ ಕಾನೂನನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸುತ್ತೇನೆ.

228. ತೆರಿಗೆ ಸುಧಾರಣಾ ಆಯೋಗದ ಶಿಫಾರಸ್ಸನ್ನು ಗಮನದಲ್ಲಿಟ್ಟಿಕೊಂಡು, ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸುವುದಕ್ಕಾಗಿ ಸಿಎಲ್-2 ಮತ್ತು ಸಿಎಲ್-9 ಲೈಸನ್ಸುದಾರರು ತೆಗೆದುಕೊಳ್ಳಬೇಕಾದ ಮದ್ಯದ ಕನಿಷ್ಟ ಪ್ರಮಾಣವನ್ನು ನಿಗದಿಪಡಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಹಾ ಪ್ರಸ್ತಾಪಿಸುತ್ತೇನೆ.

229. ಮುಟ್ಟುಗೋಲು ಹಾಕಿಕೊಂಡ ಮದ್ಯದ ವಿಲೇವಾರಿಯನ್ನು ಸುವ್ಯವಸ್ಥೆಗೊಳಿಸಲು, ಮಾನವ ಸೇವನೆಗೆ ಯೋಗ್ಯವಾದ ಮದ್ಯವನ್ನು, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಲ್ಲಿ ಈ ಉದ್ದೇಶಕ್ಕಾಗಿಯೆ ವಿಶೇಷವಾಗಿ ನೀಡಿದ ಅಂಗಡಿಗಳ ಮೂಲಕ ಸಹಾ ಮಾರಾಟ ಮಾಡಲು ಪ್ರಸ್ತಾಪಿಸುತ್ತೇನೆ.

230. ಫೆಬ್ರವರಿ, 2001 ರಲ್ಲಿ, ಪ್ರಾಯೋಗಿಕವಾಗಿ, ಮಾರಾಟ ತೆರಿಗೆಯನ್ನು ಅಬಕಾರಿ ಸುಂಕದೊಡನೆ ವಿಲೀನಗೊಳಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು. ಈ ವ್ಯವಸ್ಥೆಯು ಯಶಸ್ವಿಯಾಗಿ ನಡೆಯುತ್ತಿದ್ದು ಅದನ್ನು ಮುಂದುವರೆಸಲಾಗುವುದು.

ನೋಂದಣಿ ಮತ್ತು ಮುದ್ರಾಂಕ

231. 1957ರ ಕರ್ನಾಟಕ ಮುದ್ರಾಂಕ ಕಾಯಿದೆ, 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ ಮತ್ತು ನಿಯಮ ಹಾಗೂ 1908ರ ನೋಂದಣಿ ಕಾಯಿದೆಗಳಿಗೆ ಕೆಳಕಂಡ ಬದಲಾವಣೆಗಳನ್ನು ಪ್ರಸ್ತಾಪಿಸುತ್ತೇನೆ.

232. 1957ರ ಕರ್ನಾಟಕ ಮುದ್ರಾಂಕ ಕಾಯಿದೆಯ ವಿಧಿ 45-ಎ ಅಡಿಯಲ್ಲಿ ಉಲ್ಲೇಖಿಸಲ್ಪಟ್ಟ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಬರೆದುಕೊಟ್ಟ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ವಿನಾಯ್ತಿಯನ್ನು ಈಗಾಗಲೇ ನೀಡಲಾಗಿದ್ದು, ನೋಂದಣಿ ಶುಲ್ಕದ ರಿಯಾಯ್ತಿಯನ್ನು ಸಹ ನೀಡಲು ಉದ್ದೇಶಿಸಲಾಗಿದೆ.

233. ಭಾರತ ಸರ್ಕಾರವು ರಿಜಿಸ್ಟ್ರೇಷನ್ ಅಂಡ್ ಅದರ್ ರಿಲೇಟೆಡ್ ಲಾಸ್ (ಅಮೆಂಡ್‌ಮೆಂಟ್) ಆಕ್ಟ್ 2001 (ಕಾಯಿದೆ ಸಂಖ್ಯೆ 48) ರಲ್ಲಿ 1908ರ ನೋಂದಣಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಕ್ರಯದ ಕರಾರು ಪತ್ರಗಳ ಕಡ್ಡಾಯ ನೋಂದಾವಣೆ ಮತ್ತು ದಸ್ತಾವೇಜುಗಳ ನೋಂದಾವಣೆಗಾಗಿ ಭಾವ ಚಿತ್ರಗಳನ್ನು ಲಗತ್ತಿಸುವುದು ಇವುಗಳನ್ನು ಜಾರಿಗೆ ತಂದಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ವಿಧಿ 17 ಮತ್ತು 32 ಎ ಗಳಿಗೆ ಮಾಡಲಾದ ಈ ತಿದ್ದುಪಡಿಗಳನ್ನು ಅಧಿಸೂಚನೆ ಹೊರಡಿಸಿ ಅಳವಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ.

234. 1957ರ ಕರ್ನಾಟಕ ಮುದ್ರಾಂಕ ಕಾಯಿದೆಯಡಿಯಲ್ಲಿ ಕುಟುಂಬದೊಳಗೆ ಆಗುವ ದಾನ, ವ್ಯವಸ್ಥೆ ಮತ್ತು ಹಕ್ಕುಖುಲಾಸೆ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಕಡಿಮೆ ಮಾಡಲಾಗಿದೆ. ಅದೇ ರೀತಿ ನೋಂದಣಿ ಶುಲ್ಕವನ್ನು ಸಹ ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಇದನ್ನು ಅನುಬಂಧ - 9 ರಲ್ಲಿ ನೀಡಲಾಗಿದೆ.

235. ಸಂಘಗಳು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವಾಗ ನೀಡಬೇಕಾದ ಶುಲ್ಕ ಮತ್ತು ಲೆಕ್ಕಪತ್ರಗಳನ್ನು ವಿಳಂಬವಾಗಿ ಸಲ್ಲಿಸುವಾಗ ನೀಡಬೇಕಾದ ದಂಡಗಳ ಬಗ್ಗೆ 1960 ರ

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯನ್ನು 2000-01ನೇ ಇಸವಿಯಲ್ಲಿ ತಿದ್ದುಪಡಿ ಮಾಡಿದ್ದು, ಅದರಿಂದ ತೊಂದರೆಯಾಗುತ್ತಿರುವುದರಿಂದ, ಇದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಕಾಯಿದೆ ಮತ್ತು ನಿಯಮಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆ. ಇದನ್ನು ಅನುಬಂಧ - 10 ರಲ್ಲಿ ನೀಡಲಾಗಿದೆ.

236. ಸ್ಥಿರ ಸ್ವತ್ತಿನ ಮಾಲೀಕ ಮತ್ತು ಪ್ರಮೋಟರ್ ಅಥವಾ ಡೆವಲಪರ್ ಇವರುಗಳ ನಡುವೆ ಸ್ವತ್ತಿನ ಅಭಿವೃದ್ಧಿಗಾಗಿ ಮಾಡಿಕೊಳ್ಳುವ ಅಧಿಕಾರವನ್ನೊಳಗೊಂಡ ಜಂಟಿ ಕರಾರು ಪತ್ರಗಳಿಗೆ ಈಗಿರುವ ಮುದ್ರಾಂಕ ಶುಲ್ಕ ದರ 5% ನ್ನು 2% ಕ್ಕೆ ಇಳಿಸಲು ಪ್ರಸ್ತಾವಿಸಲಾಗಿದೆ. ವಿವರವನ್ನು ಅನುಬಂಧ - 11 ರಲ್ಲಿ ನೀಡಿದೆ ಮತ್ತು ಕರ್ನಾಟಕ ಮುದ್ರಾಂಕ ಕಾಯ್ದೆಯ ಷಡ್ಯೂಲಿನ ಅನುಚ್ಛೇದ 5(ಎಫ್) ನ್ನು ತಿದ್ದುಪಡಿ ಮಾಡಲಾಗುವುದು.

237. 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯಲ್ಲಿ ಸಂಘಗಳ ಆಡಳಿತದಲ್ಲಿ ಕಂಡು ಬರುತ್ತಿರುವ ತೊಂದರೆಗಳನ್ನು ಪರಿಹರಿಸಲು ಅವಕಾಶಗಳು ಕಡಿಮೆ ಇರುವುದರಿಂದ, ಈ ಕಾಯಿದೆಯನ್ನು ಬದಲಾಗುತ್ತಿರುವ ಕಾಲಕ್ಕೆ ಅನುಸಾರವಾಗಿ ಸಮಗ್ರವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

238. ಕರ್ನಾಟಕ ತೆರಿಗೆ ಸುಧಾರಣಾ ಆಯೋಗವು ತನ್ನ ಅಂತಿಮ ವರದಿಯಲ್ಲಿ ಉಪ ನೋಂದಣಿ ಕಛೇರಿಗಳಲ್ಲಿ ಸೌಕರ್ಯಗಳನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿದ್ದು, ತೆರಿಗೆ ಸಂಗ್ರಹಣಾ ಕಾರ್ಯದಲ್ಲಿ ತೊಡಗಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಜಾರಿ ಮತ್ತು ತನಿಖಾ ದಳ ಮತ್ತು ಆಂತರಿಕ ಲೆಕ್ಕ ಪರಿಶೋಧನ ಶಾಖೆ, ಸಿಬ್ಬಂದಿ ಬಲ ಮತ್ತು ಕಟ್ಟಡಗಳನ್ನೂ ಸೇರಿದಂತೆ ಎಲ್ಲಾ ರೀತಿಯ ಸರ್ವಾಂಗೀಣ ಅಭಿವೃದ್ಧಿ ಮತ್ತು ಆಧುನೀಕರಣವನ್ನು ಕೈಗೊಳ್ಳಲು ಉದ್ದೇಶಿಸಿದೆ.

ಮೋಟಾರು ವಾಹನ ತೆರಿಗೆ

239. ತೆರಿಗೆ ಸುಧಾರಣಾ ಆಯೋಗವು ತನ್ನ ಅಂತಿಮ ವರದಿಯಲ್ಲಿ ತೆರಿಗೆಗಳನ್ನು ಸಮನ್ವಯಗೊಳಿಸಲು ಸಲಹೆ ನೀಡಿದೆ. ಆದುದರಿಂದ, ಅನುಬಂಧದಲ್ಲಿ ನಮೂದಿಸಿರುವಂತೆ ತೆರಿಗೆ ವಿನ್ಯಾಸದಲ್ಲಿ ಸೂಕ್ತ ಬದಲಾವಣೆ ಮಾಡಲು ಹಾಗೂ ಅಧ್ಯರ್ಪಣದಲ್ಲಿರುವ ವಾಹನಗಳ ಬಗ್ಗೆ ಹೊರಡಿಸಿರುವ ಅಧಿಸೂಚನೆಯನ್ನು ಮಾರ್ಪಡಿಸಲು ಪ್ರಸ್ತಾಪಿಸುತ್ತೇನೆ.

240. ಮ್ಯಾಕ್ಸಿ ಕ್ಯಾಬ್, ಮಜಲು ವಾಹನ, ಅಖಿಲ ಭಾರತ ಪ್ರವಾಸಿ ಬಸ್ಸು, ಕ್ಯಾಂಪರ್ಸ್ ವ್ಯಾನ್, ಆಮ್ನಿ ಬಸ್ಸು, ಖಾಸಗಿ ಸೇವಾ ವಾಹನ ಮತ್ತು ಆರ್ಟಿಕ್ಯುಲೇಟೆಡ್ ಹಾಗೂ ಮಲ್ಟಿ ಆಕ್ಸೆಲ್ ಸರಕು ವಾಹನಗಳಿಗೆ ತೆರಿಗೆಯನ್ನು ಹೆಚ್ಚಿಸಲು ಹಾಗೂ ಆಟೋರಿಕ್ಷಾ ಮತ್ತು 1500 ಕೆ.ಜಿ. ಸಮಗ್ರ ತೂಕ ಮೀರದ ಸರಕು ವಾಹನಗಳಿಗೆ ಹೆಚ್ಚಿನ ಜೀವಾವಧಿ ತೆರಿಗೆಯನ್ನು ವಿಧಿಸಲು ಉದ್ದೇಶಿಸಲಾಗಿದೆ.

241. ಪ್ರವಾಸೋದ್ಯಮವನ್ನು ಉತ್ತೇಜನಗೊಳಿಸುವ ಸಲುವಾಗಿ ವಿಶೇಷ ಪರವಾನಗಿ ಹೊಂದಿರುವ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡುವ ಬಗ್ಗೆ ನೆರೆ ರಾಜ್ಯಗಳೊಂದಿಗೆ ಪರಸ್ಪರ ಒಪ್ಪಂದ ಮಾಡಿಕೊಳ್ಳಲು ಪ್ರಸ್ತಾಪಿಸುತ್ತೇನೆ.

242. ಮೋಟಾರು ವಾಹನಗಳಿಂದ ಉಂಟಾಗುತ್ತಿರುವ ವಾಯುಮಾಲಿನ್ಯವನ್ನು ತಡೆಗಟ್ಟುವ ಕ್ರಮವಾಗಿ 15 ವರ್ಷ ಮೀರಿರುವ ದ್ವಿಚಕ್ರ ವಾಹನಗಳಿಗೆ ರೂ. 250/- ಹಾಗೂ ಇತರ ಸಾರಿಗೇತರ ವಾಹನಗಳಿಗೆ ರೂ. 500/-ರಂತೆ ನೋಂದಣಿ ಪತ್ರ ನವೀಕರಿಸುವ ಸಮಯದಲ್ಲಿ ಮತ್ತು 7 ವರ್ಷಗಳು ಮೀರಿರುವ ಸಾರಿಗೆ ವಾಹನಗಳಿಗೆ ವಾರ್ಷಿಕ ರೂ. 200/- ರಂತೆ "ಹಸಿರು ತೆರಿಗೆ"ಯನ್ನು ವಿಧಿಸಲು ನಾನು ಪ್ರಸ್ತಾಪಿಸುತ್ತೇನೆ. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957ಕ್ಕೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗುವುದು. ಈ ಮೊತ್ತವನ್ನು ವಿವಿಧ ವಾಯುಮಾಲಿನ್ಯ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲು ಕಾಯ್ದಿರಿಸಲಾಗುವುದು.

243. ಈ ಉದ್ದೇಶಿತ ಬದಲಾವಣೆಗಳನ್ನು ಅನುಬಂಧ-12 ರಲ್ಲಿ ತೋರಿಸಲಾಗಿದೆ. ಈ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ಅಂದಾಜು 40.00 ಕೋಟಿ ರೂ. ಹೆಚ್ಚುವರಿ ರಾಜಸ್ವ ನಿರೀಕ್ಷಿಸಬಹುದು.

ವಾರ್ಷಿಕ ಯೋಜನೆ 2002-03

244. ನಾನು 2001-02 ನೇ ಸಾಲಿನ (ಪರಿಷ್ಕೃತ ಅಂದಾಜುಗಳು) 7904 ಕೋಟಿ ರೂ.ಗಳ ವಾರ್ಷಿಕ ಯೋಜನಾ ಗಾತ್ರವನ್ನು 2002-03 ನೇ ಸಾಲಿನಲ್ಲಿ 8611 ಕೋಟಿ ರೂ.ಗಳಿಗೆ ವೃದ್ಧಿಗೊಳಿಸಿದ್ದೇನೆ. ಹತ್ತನೆ ಯೋಜನೆಯ ಕಾರ್ಯಾಚರಣೆಯ ಅಂಗವಾಗಿ ಪುನರಾವರ್ತಿತ ವೆಚ್ಚವಾದ 509 ಕೋಟಿ ರೂ.ಗಳನ್ನು ಮುಂದಿನ ವರ್ಷಕ್ಕೆ ಯೋಜನೆಯಿಂದ ಯೋಜನೇತರ ಬಾಬಿಗೆ ವರ್ಗಾಯಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡರೆ ಯೋಜನಾ ಗಾತ್ರವು ಶೇಕಡಾ 16 ರಷ್ಟು ವೃದ್ಧಿಯಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಪರಿಷ್ಕೃತ ಅಂದಾಜುಗಳು 2001-2002

245. 2001-2002 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 23232.81 ಕೋಟಿಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 21812.04 ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 23276.55 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 21879.30 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು (-) 98.02 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. 2001-2002 ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು (-) 286.05 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2002-2003

246. ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗಳನ್ನು ಸೇರಿಸಿಕೊಂಡ ನಂತರ 2002-2003 ನೇ ಸಾಲಿನ ಒಟ್ಟು ಜಮೆ 25,542.05 ಕೋಟಿ ರೂಗಳಾಗಿದೆ. ಇದರಲ್ಲಿ 18,798.45 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 6743.60 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 25597.31 ಕೋಟಿ ರೂ.ಗಳೆಂದು ಅಂದಾಜು

ಮಾಡಲಾಗಿದೆ. ಇದರಲ್ಲಿ 21403.64 ಕೋಟಿ ರೂ.ಗಳು ರಾಜಸ್ವ ವೆಚ್ಚ ಮತ್ತು 4193.67 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

247. ನನ್ನ ಭಾಷಣದಲ್ಲಿ ಈಗಾಗಲೇ ಪ್ರಸ್ತಾಪಿಸಿರುವ ಪ್ರಮುಖ ತೆರಿಗೆ ಆದಾಯಗಳ ಜೊತೆಗೆ ಸಣ್ಣ ಉಳಿತಾಯದಿಂದ 1890 ಕೋಟಿ ರೂ.ಗಳನ್ನು ಮಾರುಕಟ್ಟೆ ಎತ್ತುವಳಿಯಿಂದ 948.48 ಕೋಟಿ ರೂ.ಗಳನ್ನು (ನಿವ್ವಳ) ಒಪ್ಪಂದದ ಸಾಲಗಳಿಂದ 500 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 2417.75 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದ್ದೇನೆ.

248. ಅಂತಿಮವಾಗಿ ರಾಜಸ್ವ ಕೊರತೆಯು 2605.19 ಕೋಟಿ ರೂ.ಗಳಾಗಲಿದೆ. ವಿತ್ತೀಯ ಕೊರತೆಯು 5839.07 ಕೋಟಿ ರೂ.ಗಳಿಗೆ ನಿಲ್ಲಲಿದೆ. ಈ ಎಲ್ಲ ಅಂದಾಜುಗಳ ರೀತ್ಯಾ ಈ ವರ್ಷಕ್ಕೆ ಒಟ್ಟಾರೆ ಕೊರತೆಯನ್ನು (-) 55.26 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿದೆ.

249. ಆರಂಭದ ಶಿಲ್ಕು (-) 98.02 ಕೋಟಿ ರೂ.ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಂತಿಮ ಶಿಲ್ಕನ್ನು (-) 153.28 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿದೆ. ಈ ಕೊರತೆಯನ್ನು ನಾನು ವೆಚ್ಚಗಳನ್ನು ನಿಯಂತ್ರಿಸುವ ಮೂಲಕ ಮತ್ತು ಹೆಚ್ಚುವರಿ ತೆರಿಗೆ ಸಂಗ್ರಹದ ಮೂಲಕ ಭರಿಸುವ ವಿಶ್ವಾಸವನ್ನು ಹೊಂದಿದ್ದೇನೆ.

250. ನಾನು ಈಗ 2002-2003 ರ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಹಾಗೂ ಅನುಮೋದನೆಗೆ ಮಂಡಿಸುತ್ತಿದ್ದೇನೆ. ಮುಂಗಡ ಪತ್ರವನ್ನು ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಚರ್ಚೆಯ ನಂತರ ಸರ್ಕಾರವು ಪೂರ್ಣ ಮುಂಗಡ ಪತ್ರಕ್ಕೆ ಲೇಖಾನುದಾನವನ್ನು ಕೋರುತ್ತದೆ. ಈಗ ನಾನು ಜುಲೈ 31, 2002 ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ

ಆಯವ್ಯಯದ

		ಬಜೆಟ್ ಅಂದಾಜು 2001-02	ಪರಿಷ್ಕೃತ ಅಂದಾಜು 2001-02	ಬಜೆಟ್ ಅಂದಾಜು 2001-02
ಪ್ರಾರಂಭ ಶಿಲ್ಕು	...	-242.31	-30.76	-98.02
ಎ. ರಾಜಸ್ವ ಲೆಕ್ಕ				
I ಜಮೆ				
ರಾಜ್ಯ ತೆರಿಗೆ	...	10851.10	10115.49	11887.95
ಕೇಂದ್ರ ತೆರಿಗೆಯಲ್ಲಿ ಪಾಲು	...	3070.86	2520.86	2925.00
ಕೇಂದ್ರ ಸರ್ಕಾರದ ಅನುದಾನಗಳು	...	2102.31	2077.67	2320.42
ತೆರಿಗೆಯೇತರ ರಾಜಸ್ವ	..	1303.83	1212.27	1665.98
ಒಟ್ಟು - ಎ-I	...	**17328.10**	**15926.29**	**18798.45**
II. ವೆಚ್ಚ				
ಸಾಮಾಜಿಕ ಸೇವೆ	...	6891.23	6465.11	6827.16
ಆರ್ಥಿಕ ಸೇವೆ	...	5690.02	5317.75	6127.82
ಸಾಮಾನ್ಯ ಸೇವೆ	...	6695.44	6574.10	7774.58
ಸಹಾಯಾನುದಾನ ಮತ್ತು ಅಂಶದಾನ	...	675.50	575.50	674.08
ಒಟ್ಟು - ಎII	...	**19952.19**	**18932.46**	**21403.64**
ಎ. ರಾಜಸ್ವ ಲೆಕ್ಕ ಹೆಚ್ಚುವರಿ/ಕೊರತೆ	...	-2624.09	-3006.17	-2605.19

ವಿಹಂಗಮ ನೋಟ

ಕೋಟಿ ರೂ.ಗಳಲ್ಲಿ

	ಬಜೆಟ್ ಅಂದಾಜು 2001-02	ಪರಿಷ್ಕೃತ ಅಂದಾಜು 2001-02	ಬಜೆಟ್ ಅಂದಾಜು 2001-02
ಬಿ. ಬಂಡವಾಳ ಲೆಕ್ಕ			
I ಜಮೆ			
ಭಾರತ ಸರ್ಕಾರದಿಂದ ಸಾಲ ...	2106.69	1965.93	2417.75
ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ) ...	738.00	1047.04	948.48
ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿ ಇವುಗಳಿಂದ ಸಾಲ ...	1637.65	1696.79	2390.00
ಸಾಲಗಳು ಮತ್ತು ಮುಂಗಡಗಳು ವಸೂಲಿ ...	202.37	185.99	202.37
ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ ...	1220.00	990.00	785.00
ಒಟ್ಟು - ಬಿ.I ...	**5904.71**	**5885.75**	**6743.60**
II. ಬಡವಾಡೆ :			
ಬಂಡವಾಳ ವೆಚ್ಚ (ನಿವ್ವಳ) ...	2179.05	1776.20	3029.01
ಕೇಂದ್ರ ಸಾಲಗಳ ಮರುಸಂದಾಯ ...	482.54	480.54	574.64
